ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

ಸಂಪಾದಕರು: ಸುಂದರ್ Editor : Sundar

Volume: 01, Issue: 229 RNI Number : KNKAN/25/A2770 30-08-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :229 ರಾಯಚೂರು 30-08-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಹಗರಣದ ಮುಜುಗರ ತಪ್ಪಿಸಿಕೊಳ್ಳಲು ನಾಗೇಂದ್ರರನ್ನ ರಾಜೀನಾಮೆ ಕೊಡಿಸಿದ್ದಾರೆ: ಕುಮಾರಸ್ವಾಮಿ

ಮಂಡ್ಯ: ಪಕ್ಷಕ್ಕೆ ಮುಜುಗರ ಆಗಬಾರದು ಎಂಬ ಕಾರಣಕ್ಕೆ ಸ್ವ-ಇಚ್ಛೆಯಿಂದ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿರುವುದಾಗಿ ಬಿ.ನಾಗೇಂದ್ರ ಹೇಳಿದ್ದಾರೆ. ಆದರೆ, ಕಾಂಗ್ರೆಸ್‌ಗೆ ಯಾವ ಕಾರಣಕ್ಕೆ ಮುಜುಗರ ಆಗುತ್ತಿದೆ?. ಹಗರಣದ ಮುಜುಗರ ತಪ್ಪಿಸಲು ರಾಜೀನಾಮೆ ಕೊಟ್ಟಿದ್ದಾ? ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

ನಾಗೇಂದ್ರ ರಾಜೀನಾಮೆ ವಿಚಾರವಾಗಿ ನಗರದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಕೇಂದ್ರ ಸಚಿವರು, ನಿನ್ನೆಯ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ ಕುಮಾರಸ್ವಾಮಿಯವರ ಮೇಲೆಯೂ ಆರೋಪ ಇಲ್ವಾ ಎಂದು ನಾಗೇಂದ್ರ ಹೇಳಿದ್ದಾರೆ. ನನ್ನ ಮೇಲೆ ಇರೋದು ರಾಜಕೀಯ ಆರೋಪ. ನಾನು ದುಡ್ಡು ಹೊಡೆದಿದ್ದೇನೆ ಎಂದು ಎಲ್ಲೂ ಹೇಳಿಲ್ಲ. ಕುಮಾರಸ್ವಾಮಿ ಬಾಯಿ ಮುಚ್ಚಿಸಲೆಂದು 14 ವರ್ಷಗಳ ಹಿಂದಿನ ಆರೋಪವನ್ನು ಮುಂದುವರಿಸಿಕೊಂಡು ಹೋಗುವ ಮೂಲಕ ಜೀವಂತವಾಗಿ ಇಟ್ಟುಕೊಂಡು ಬರುತ್ತಿದ್ದಾರೆ. ಕುಮಾರಸ್ವಾಮಿಯ ಬಾಯಿ ಮುಚ್ಚಿಸಲು ಯಾರಿಂದಲೂ ಸಾಧ್ಯವಿಲ್ಲ. ನಾನು ತಪ್ಪು ಮಾಡಿದ್ದರೆ ಮುಖ್ಯಮಂತ್ರಿ ಆಗಿದ್ದಾಗ ಮುಚ್ಚಿಹಾಕಬಹುದಿತ್ತು. ಯಾವುದನ್ನು ಮುಚ್ಚಿ ಹಾಕಿಲ್ಲ. ಹಾಗೆಯೇ ಬಿಟ್ಟಿದ್ದಿನಿ, ತನಿಖೆ ನಡೆಸಲಿ. ಕಾಂಗ್ರೆಸ್ ಹಣ ಹೊಡೆದು ಹಣ ಹಂಚಿದ್ದು, ಅದಕ್ಕೆ ಮುಜುಗರವನ್ನು ತಪ್ಪಿಸಲು ರಾಜೀನಾಮೆ ಕೊಡಿಸಿದ್ದಾರೆ ಎಂದರು.

ಪ್ರಿಯಾಂಕ್ ಖರ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದಾಗ 2022ರಲ್ಲಿ ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಲಾಗಿತ್ತು. 2024ರೊಳಗೆ ಉದ್ಯೋಗಗಳನ್ನು ನೀಡುವ ಬಗ್ಗೆ ತೀರ್ಮಾನ ಮಾಡಲಾಗಿತ್ತು. ಆದರೆ, ಅಕ್ರಮ ನಡೆದಿದ್ದರಿಂದ ಉದ್ಯೋಗಗಳಿಗೆ ನೇಮಕಾತಿ ಪತ್ರ ನೀಡದಂತೆ ಕೆಪಿಎಸ್‌ಸಿ ವರದಿ ನೀಡಿದ ನಂತರವೂ, ಇಲಾಖೆಯ ಮಂತ್ರಿಯಾಗಿ ಉದ್ಯೋಗಗಳಿಗೆ ಹೇಗೆ ನೇಮಕಾತಿ ಪತ್ರ ನೀಡಿದ್ದೀರಿ? ಎಂದು ಪ್ರಶ್ನಿಸಿದರು. ಓಎಂಆರ್ ಶೀಟ್ ತಿದ್ದಿರುವ ಆರೋಪಗಳಿದ್ದಾಗ ಹಾಗೂ ಭ್ರಷ್ಟಾಚಾರ ನಡೆದಿದೆ ಅಂತ ಗೊತ್ತಿದ್ದರೂ, ಅಕ್ರಮದ ಬಗ್ಗೆ ಕೆಪಿಎಸ್‌ಸಿ ವರದಿ ಕೊಟ್ಟ ಬಳಿಕವೂ ನೇಮಕಾತಿ ಪತ್ರ ನೀಡಿದಿರಿ. ಇದಕ್ಕೆ ಉತ್ತರ ನೀಡುವಂತೆ ಕುಮಾರಸ್ವಾಮಿ ಆಗ್ರಹಿಸಿದರು.

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ವಿಚಾರ ಕುರಿತು ಪ್ರತಿಕ್ರಿಯಿಸಿ, ಕಳೆದ ಒಂದು ತಿಂಗಳಿಂದ ತಮಿಳುನಾಡಿಗೆ ನೀರು ಹರಿದು ಹೋಗುತ್ತಿದೆ. ರಾಜ್ಯದ ಹಲವು ಜಲಾಶಯಗಳು ತುಂಬಿಲ್ಲ. ಆದರೆ, ನೀರು ಬಿಡುತ್ತಿದ್ದೇವೆ ಅಂತ ಹೇಳುವ ಧೈರ್ಯ ಕೂಡ ನಿಮಗೆ ಇಲ್ಲ. ಸರಿಯಾದ ರೀತಿಯಲ್ಲಿ ವಕೀಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮರ್ಪಕವಾಗಿ ಮನವರಿಗೆ ಮಾಡಿಕೊಡಿ. ಮೇಕೆದಾಟು ವಿಚಾರ ಆಮೇಲೆ ಮಾತನಾಡೋಣ ಎಂದು



ರಾಜ್ಯ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಕೆಲವು ಕಾಂಗ್ರೆಸ್ ಶಾಸಕರು ನನ್ನ ಮುಂದೆ ಇದ್ದಾಗ ಅಣ್ಣ ಎಂದು ಕರೆಯುತ್ತಾರೆ. ಮಾಧ್ಯಮಗಳ ಮುಂದೆ ಕುಮಾರಸ್ವಾಮಿ ಏನು ಕೆಲಸ ಮಾಡಿದ್ದಾರೆ ಎಂದು ಪ್ರಶ್ನಿಸುತ್ತಾರೆ. ಯಾರೆಲ್ಲ ಮಾತನಾಡುತ್ತಿದ್ದಾರೋ ಮಾತನಾಡಲಿ, ನಾನು ರಾಜಕೀಯ ಮಾಡುವುದಿಲ್ಲ. ಕಾಲವೇ ಎಲ್ಲವನ್ನು ನಿರ್ಧರಿಸುತ್ತದೆ. ಜಿಲ್ಲೆಯ ಜನರ ಆಕಾಂಕ್ಷೆಗಳನ್ನು ಈಡೇರಿಸಲು ನಾನು ಕೆಲಸ ಮಾಡುತ್ತೇನೆ ಎಂದು ಅವರು ಹೇಳಿದರು. ಇದೇ ವೇಳೆ ಜಿಲ್ಲೆಗೆ ಸಕ್ಕರೆ ಕಾರ್ಖಾನೆ ತರುವ ಬಗ್ಗೆಯೂ ಮಾತನಾಡಿದರು.

ಜಿಲ್ಲೆಯ ಸಮಸ್ಯೆಗಳ ಕುರಿತು ಅಧಿಕಾರಿಗಳೊಂದಿಗೆ ನಡೆದ ಸಭೆಯ ಬಳಿಕ ಮಾತನಾಡಿದ ಕೇಂದ್ರ ಸಚಿವರು, ಅಧಿಕಾರಿಗಳು ಕಾನೂನು ಬದ್ಧವಾಗಿ ಜನರ ಪರ ಕೆಲಸ ಮಾಡಬೇಕು. ರಾಜಕೀಯದವರು ಹೇಳಿದ ರೀತಿ ಮಾಡಬೇಡಿ. ಜವಾಬ್ದಾರಿಯುತವಾಗಿ ಕೆಲಸ ಮಾಡುವಂತೆ ಸಲಹೆ ನೀಡಿದರು.

ಸಚಿವ ಬಾಲಕೃಷ್ಣ ಹೇಳಿಕೆ ವಿಚಾರವಾಗಿ ಮಾತನಾಡಿದ ಅವರು, ಬಾಲಕೃಷ್ಣಗೆ ಉತ್ತರ ಕೊಡುವ ಅವಶ್ಯಕತೆ ಇಲ್ಲ. ಫೋನ್ ಟ್ಯಾಪ್ ಮಾಡೋದು ನನ್ನ ಕೆಲಸನಾ?. ನನ್ನ ವಿರುದ್ಧ ದಾಖಲೆಗಳನ್ನು ಬಿಡುಗಡೆ ಮಾಡಿ ಮಾತನಾಡಲಿ. ನಾನೇಕೆ ಫೋನ್ ಟ್ಯಾಪ್ ಮಾಡಿಸಬೇಕು? ಎಂದು ಪ್ರಶ್ನಿಸುತ್ತಾ ಹಲವು ವಿಚಾರಗಳನ್ನು ಪ್ರಸ್ತಾಪಿಸಿದರು.

ಕುಮಾರಸ್ವಾಮಿಗೆ ಅಸೂಯೆ ಎಂಬ ಸಿಎಂ ಡಿಕೆ ಶಿವಕುಮಾರ್ ಹೇಳಿಕೆ ವಿಚಾರವಾಗಿ ಮಾತನಾಡಿದ ಅವರು, ನಾನೇಕೆ ಅಸೂಯೆ ಮಾಡಿಕೊಳ್ಳಲಿ?. ಈ ರಾಜಕೀಯ ಜೀವನದಲ್ಲಿ ನಾನು ಎಷ್ಟು ಜನ ಮುಖ್ಯಮಂತ್ರಿಗಳನ್ನು ನೋಡಿಲ್ಲ. ಪ್ರಾಮಾಣಿಕವಾಗಿ ಕೆಲಸ ಮಾಡಿ ಜನರ ಕಷ್ಟ-ಸುಖಕ್ಕೆ ಸ್ಪಂದಿಸಿ ಆಗ ನಾನೇ ಅಭಿನಂದನೆ ಸಲ್ಲಿಸುತ್ತೇನೆ. ಇವರು ಸರಿಯಾಗಿ ಕೆಲಸ ಮಾಡಿದರೆ ನಾನೇಕೆ ಮಾತನಾಡಲಿ? ಎಂದು ಪ್ರಶ್ನಿಸಿದರು.

ಮೂರನೇಯ ಪುಟಕ್ಕೆ

ಮಟಮಾರಿ ಗ್ರಾಮದಲ್ಲಿ ಎನ್‌ಎಎಲ್‌ಎಸ್‌ಎ ಯೋಜನೆಗಳ ಅನುಷ್ಠಾನಕ್ಕೆ ಚಾಲನೆ

ಫಲಾನುಭವಿಗಳು ಯೋಜನೆಯ ಸದುಪಯೊಗ ಪಡಿಸಿಕೊಳ್ಳಬೇಕು: ನ್ಯಾ.ಸಿದ್ದರಾಮಪ್ಪ

ರಾಯಚೂರು ಆಗಸ್ಟ್ 29

ಗ್ರಾಮೀಣ ಭಾಗದ ಜನರ ಜೀವನಮಟ್ಟ ಸುಧಾರಿಸಲು ರಾಷ್ಟ್ರಿಯ ಕಾನೂನು ಸೇವಾ ಪ್ರಾಧಿಕಾರ ಶ್ರಮಿಸುತ್ತಿದ್ದು, ಫಲಾನುಭವಿಗಳು ಯೋಜನೆಯ ಸದುಪಯೊಗ ಪಡಿಸಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ.ಸಿದ್ದ ರಾಮಪ್ಪ ಕನಕಟ್ಟೆ ಅವರು ಹೇಳಿದರು.



ಆಗಸ್ಟ್ 28ರ ರಾಯಚೂರು ತಾಲೂಕಿನ ಮಟಮಾರಿ ಗ್ರಾಮದಲ್ಲಿ ಆಯೊಜಿಸಲಾಗಿದ್ದ ಎನ್‌ಎಎಲ್‌ಎಸ್‌ಎ ಯೋಜನೆಗೆ ಚಾಲನೆ ನೀಡಿ, ಅವರು ಮಾತನಾಡಿದರು.

ರಾಷ್ಟ್ರಿಯ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ಮಟಮಾರಿ ಗ್ರಾಮವನ್ನು ಪಾಯಲೆಟ್ ಪ್ರೊಜೆಕ್ಟ ಆಗಿ ಆಯ್ಕೆ ಮಾಡಲಾಗಿದೆ. ಕಾನೂನು ವಿಭಾಗದ ವಿದ್ಯಾರ್ಥಿಗಳು ಗ್ರಾಮದ ಪ್ರತಿ ಮನೆ ಮನೆಗೂ ತೆರಳಿ ನಾಲ್ಸಾ ಗುರುತಿಸಿರುವ ಶಿಕ್ಷಣ, ಅಂಗವೈಕಲ್ಯ, ಕಾನೂನು ಸೇವೆ, ಸೇರಿದಂತೆ ಹಲವು ಅಂಶಗಳ ಪಟ್ಟಿ ಮಾಡಲಾಗುತ್ತಿದೆ. ಜಿಲ್ಲಾಡಳಿತ ಕೂಡಾ ಈ ಕೆಲಸಕ್ಕೆ ಕೈ ಜೊಡಿಸಿರುವುದು ಸಂತಸ ಮೂಡಿಸಿದೆ ಆರ್ಥಿಕ ಅಥವಾ ಸಾಮಾಜಿಕ ಪರಿಸ್ಥಿತಿಯ ಕಾರಣದಿಂದ ಯಾವುದೇ ವ್ಯಕ್ತಿ ನ್ಯಾಯದಿಂದ ವಂಚಿತರಾಗಬಾರದು ಎಂಬ ಆಶಯದೊಂದಿಗೆ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ಗ್ರಾಮೀಣ ಜನರಿಗೆ ಕಾನೂನು ನೆರವು ತಲುಪಿಸುವ ಗುರಿ: ಸಮಾಜದ ದುರ್ಬಲ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗೆ ಉಚಿತ ಕಾನೂನು ನೆರವು, ಕಾನೂನು ಅರಿವು ಮತ್ತು ನ್ಯಾಯಕ್ಕೆ ಸುಲಭ ಪ್ರವೇಶ ಕಲ್ಪಿಸುವುದು ಎನ್‌ಎಎಲ್‌ಎಸ್‌ಎ ಯೋಜನೆಗಳ ಪ್ರಮುಖ ಉದ್ದೇಶವಾಗಿದೆ. ಈ ಯೋಜನೆಗಳ ಪ್ರಯೋಜನ ಕೇವಲ ಜಿಲ್ಲಾ ಅಥವಾ ತಾಲೂಕು ಕೇಂದ್ರಗಳಿಗೆ ಸೀಮಿತವಾಗದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಅರ್ಹ ಜನರಿಗೂ ತಲುಪಬೇಕು. ಎಂಬ ಉದ್ದೇಶದಿಂದ ಮಟಮಾರಿ ಗ್ರಾಮವನ್ನು ಪೈಲಟ್ ಪ್ರೊಜೆಕ್ಟ ಆಗಿ ಆಯ್ಕೆ ಮಾಡಲಾಗಿದೆ.

ಗ್ರಾಮದಲ್ಲಿ ಎನ್‌ಎಎಲ್‌ಎಸ್‌ಎಗೆ ಸಂಬಧಿಸಿದ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಅರ್ಹ ಫಲಾನುಭವಿಗಳನ್ನು

ಮೂರನೇಯ ಪುಟಕ್ಕೆ

ಗುಂಜಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಡಿಹೆಚ್‌ಒ ಭೇಟಿ ಪರಿಶೀಲನೆ

ಸರಕಾರಿ ಆಸ್ಪತ್ರೆಯಲ್ಲಿ ದೊರಕುವ ಸೇವೆಗಳನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಿ: ನಂದಿತಾ

ರಾಯಚೂರು,ಆ.29

ರಾಯಚೂರು ತಾಲೂಕಿನ ಗುಂಜಳ್ಳಿ ಪ್ರಾಥಮಿಕ ಅರೋಗ್ಯ ಕೇಂದ್ರಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ನಂದಿತಾ ಎಮ್. ಎನ್. ಅವರು ಆಗಸ್ಟ್ 29ರ ಶನಿವಾರ ದಂದು ಭೇಟಿ ನೀಡಿ, ವಿವಿಧ ವಾರ್ಡ್ಗಳನ್ನು ಪರಿಶೀಲನೆ ನಡಿಸಿದರು.

ಈ ವೇಳೆ ಮಾತನಾಡಿ, ಜಿಲ್ಲೆಯಲ್ಲಿ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗುತ್ತಿರುವ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಸಾರ್ವನಿಕರು ಪಡೆದು ಕೊಳ್ಳಬೇಕು ಎಂದರು.



ನತರ ಹೆರಿಗೆ ವಾರ್ಡ್ ನಲ್ಲಿ ಬಾಣಂತಿಯ ಆರೋಗ್ಯ ವಿಚಾರಿಸಿ ನವಜಾತ ಶಿಶುವಿಗೆ ಬೆಚ್ಚಗಿಡಲು ಹಾಗೂ ಆರು ತಿಂಗಳುವರೆಗೆ ಎದೆ ಹಾಲನ್ನು ಮಾತ್ರ ಕುಡಿಸಲು ಹಾಗೂ ಬಾಣಂತಿಗೆ ಯಾವುದೇ ಪತ್ಯವಿಲ್ಲದೆ ಪೌಷ್ಟಿಕಾಹಾರವನ್ನು ಊಣಿಸಲು ಹಾಗೂ ನವಜಾತ ಶಿಶುವಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ಹಾಕಿಸಲು ವಿನಂತಿಸಿದರು.

ನಂತರ ಆಸ್ಪತ್ರೆಯ ಔಷಧ ಕೊಠಡಿ, ಪ್ರಯೋಗಾಲಯ (ಲ್ಯಾಬ್) ಪರಿಶೀಲಿಸಿ, ಆಸ್ಪತ್ರೆಗೆ ಬರುವ ಸಾರ್ವಜನಿಕರಿಗೆ ಇಲಾಖೆಯಡಿ ಒದಗಿಸುವ ವೈದ್ಯಕೀಯ ಸೇವೆಗಳನ್ನು ಯಾವುದೇ ನ್ಯೂನ್ಯತೆಯಿಲ್ಲದೆ ಒದಗಿಸಲು ಹಾಗೂ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯವರು ಸೌಜನ್ಯದಿಂದ ವರ್ತಿಸಲು ತಿಳಿಸಿದರಲ್ಲದೆ ತಾಯಿ-ಮಕ್ಕಳ ಆರೋಗ್ಯ ಕಾರ್ಯಕ್ರಮದಡಿ ಅಗತ್ಯ ಔಷಧಗಳು, ಲಸಿಕೆಗಳು ಹಾಗೂ ನಾಯಿ ಕಡಿತ ಮತ್ತು ಹಾವು ಕಡಿತಕ್ಕೆ ನೀಡುವ ಜೀವರಕ್ಷಕ ಔಷಧಗಳನ್ನು ಆಸ್ಪತ್ರೆಯಲ್ಲಿ ಸದಾ ದಾಸ್ತಾನು ಇರಿಸಿಕೊಳ್ಳಲು ಸಂಬಧಿಸಿದ ಅಧಿಕಾರಿಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸೂಚಿಸಿದರು.

ಇದೇ ಸಂದರ್ಭದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ ಸತೀಶ್, ವೈದ್ಯಾಧಿಕಾರಿ ಡಾ ಸುಚಿತ್

ಮೂರನೇಯ ಪುಟಕ್ಕೆ

ದಲಿತರ ಸರಣಿ ಹತ್ಯೆ, ಅತ್ಯಾಚಾರ: ಸಿಐಡಿ ತನಿಖೆಗೆ ಆಗ್ರಹ

ರಾಯಚೂರು,ಆ.29-

ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಕಳೆದ ಒಂದು ತಿಂಗಳ ಅವಧಿಯಲ್ಲಿ ದಲಿತ ಸಮುದಾಯದವರ ಮೇಲೆ ನಡೆದಿರುವ ಸರಣಿ ಹತ್ಯೆ, ಅತ್ಯಾಚಾರ ಹಾಗೂ ದೌರ್ಜನ್ಯ ಪ್ರಕರಣಗಳು ಜಿಲ್ಲೆಯ ಜನರಲ್ಲಿ ಆತಂಕ ಮೂಡಿಸಿದ್ದು, ಭೂಮಾನಂದ, ಅಶ್ವಿನಿ ಹಾಗೂ ರಾಣೆಮ್ಮ ಪ್ರಕರಣಗಳನ್ನು ಸಿಐಡಿಗೆ ವಹಿಸಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ಕಾರ್ಯಾಧ್ಯಕ್ಷ ಕೆ.ಈ. ಕುಮಾರ್ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವದುರ್ಗ ತಾಲೂಕಿನ



ಹದ್ದಿನಾಳ ಗ್ರಾಮದ ದಲಿತ ಯುವಕ ಭೂಮಾನಂದ ಹತ್ಯೆ, ಸಿರವಾರ ತಾಲೂಕಿನ ಹೋಕ್ರಾಣಿ ಗ್ರಾಮದ ಯುವತಿ ಅಶ್ವಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಹಾಗೂ ಲಿಂಗ ಸೂಗೂರು ತಾಲೂಕಿನ ಕರಡಕಲ್ ಗ್ರಾಮದ ರಾಣೆಮ್ಮ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳು ಜಿಲ್ಲೆಯ ಕಾನೂನು ಸುವ್ಯವಸ್ಥೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿವೆ ಎಂದು ಹೇಳಿದರು.

ಹೋಕ್ರಾಣಿ ಗ್ರಾಮದಲ್ಲಿ ಅಶ್ವಿನಿ ಬಯಲು ಶೌಚಕ್ಕೆ ತೆರಳಿದ್ದ ಸಂದರ್ಭದಲ್ಲಿ ಘಟನೆ ನಡೆದಿರುವುದು ಅತ್ಯಂತ ಗಂಭೀರ ವಿಚಾರ. ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಜಿಲ್ಲೆಯನ್ನು ಬಯಲು ಶೌಚ ಮುಕ್ತ ಎಂದು ಘೋಷಿಸಲಾಗಿದ್ದರೂ, ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳ ವಾಸ್ತವ ಸ್ಥಿತಿ ಹಾಗೂ ಅವುಗಳ ಬಳಕೆಯ ಕುರಿತು ಸಮಗ್ರ ಮರುಪರಿಶೀಲನೆ ನಡೆಸಬೇಕು. ಶೌಚಾಲಯ ನಿರ್ಮಾಣ ಹಾಗೂ ಸಂಬಂಧಿತ ಯೋಜನೆಗಳಿಗೆ ಬಿಡುಗಡೆಯಾದ ಅನುದಾನದ ಬಳಕೆಯ ಕುರಿತು ತನಿಖೆ ನಡೆಸಿ, ಲೋಪ ಕಂಡುಬಂದರೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಡಿಸಿಇಆರ್ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿಂದ ದೌರ್ಜನ್ಯ ಹಾಗೂ ಅಟ್ರಾಸಿಟಿ ಪ್ರಕರಣಗಳ ತನಿಖೆ ವಿಳಂಬವಾಗುತ್ತಿದೆ ಎಂದು ಆರೋಪಿಸಿದ ಅವರು, ಪ್ರತಿ ತಾಲೂಕಿನಲ್ಲಿ ಡಿಸಿಇಆರ್ ಕಚೇರಿ ಸ್ಥಾಪಿಸಿ ಅಗತ್ಯ ಸಿಬ್ಬಂದಿಯನ್ನು ನೇಮಿಸಬೇಕು. ಅಟ್ರಾಸಿಟಿ ಪ್ರಕರಣಗಳಲ್ಲಿ ತ್ವರಿತ ತನಿಖೆ ಮತ್ತು ಆರೋಪಿಗಳ ಬಂಧನಕ್ಕೆ ಸ್ಥಳೀಯ ಡಿವೈಎಸ್ಪಿಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು ಎಂದು ಒತ್ತಾಯಿಸಿದರು.

ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ನಿರಂತರವಾಗಿ ನಡೆಯುತ್ತಿರುವುದು ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯ ಮೇಲಿನ ವಿಶ್ವಾಸಕ್ಕೆ ಧಕ್ಕೆ ತಂದಿದೆ. ಪೊಲೀಸ್ ಇಲಾಖೆ ಮತ್ತು ಜಿಲ್ಲಾಡಳಿತ ಪ'ರಿಣಾ'ವ'ಂಕಾರಿಯಾಗಿ ಕಾ'ಯ'ರ್ನಿವ'ರ್'ಹಿಸ'ುವ'ಲ್ಲಿ ವಿಫಲವಾಗಿವೆ ಎಂದು

ಮೂರನೇಯ ಪುಟಕ್ಕೆ

ಜಿಲ್ಲೆಯಲ್ಲಿ ದಲಿತರ ಕೊಲೆ-ಅತ್ಯಾಚಾರಕ್ಕೆ ಕಡಿವಾಣ ಹಾಕಿ



ರಾಯಚೂರು,ಆ.29-

ಜಿಲ್ಲೆಯಲ್ಲಿ ದಲಿತ ಸಮುದಾಯದವರ ಮೇಲೆ ನಡೆಯುತ್ತಿರುವ ಕೊಲೆ, ಅತ್ಯಾಚಾರ ಹಾಗೂ ದೌರ್ಜನ್ಯ ಘಟನೆಗಳು ಇಡೀ ಜಿಲ್ಲೆಯ ಜನತೆಯನ್ನು ಬೆಚ್ಚಿಬೀಳಿಸಿವೆ. ಹದ್ದಿನಾಳದ ಭೀಮಾನಂದ ಕೊಲೆ, ಸಿರವಾರ ತಾಲೂಕಿನ ಹೊಕ್ರಾಣಿಯ ಅಶ್ವಿನಿ ಮೇಲಿನ ಅತ್ಯಾಚಾರಕೊಲೆ ಹಾಗೂ ಲಿಂಗಸುಗೂರು ತಾಲೂಕಿನ ತಡಕಲ್ ಗ್ರಾಮದ ರಾಣೆಮ್ಮ ಪ್ರಕರಣಗಳು ಅತ್ಯಂತ ಆತಂಕಕಾರಿ ಬೆಳವಣಿಗೆಗಳಾಗಿದ್ದು, ಇಂತಹ ಅಮಾನವೀಯ ಕೃತ್ಯಗಳನ್ನು ಕರ್ನಾಟಕ ರಾಜ್ಯ ರೈತ ಸಂಘ ತೀವ್ರವಾಗಿ ಖಂಡಿಸುತ್ತದೆ ಎಂದು ಸಂಘದ ರಾಜ್ಯಾಧ್ಯಕ್ಷ ಚಾಮರಸ ಮಾಲಿ ಪಾಟೀಲ್ ಹೇಳಿದರು.

ಜಿಲ್ಲೆಯಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಮೃತರ ಕುಟುಂಬಗಳಿಗೆ ಕೇವಲ ಸಾಂತ್ವನ ಹೇಳುವುದಷ್ಟೇ ಸಾಲದು; ಸರ್ಕಾರ ಭದ್ರತೆ, ಸೂಕ್ತ ಆರ್ಥಿಕ ನೆರವು ಹಾಗೂ ಪುನರ್ವಸತಿ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದರು.

ಕಾಟಾಚಾರದ ಬೀಟ್ ವ್ಯವಸ್ಥೆಯಿಂದ ಅಪರಾಧ ತಡೆಯಲು ಸಾಧ್ಯವೇ?

ಜಿಲ್ಲೆಯ ಪೊಲೀಸ್ ಕಾರ್ಯವೈಖರಿಯಲ್ಲಿ ಬದಲಾವಣೆ ತರುವ ಅಗತ್ಯವಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪರಿಣಾಮಕಾರಿ ಬೀಟ್ ವ್ಯವಸ್ಥೆ ಜಾರಿಗೊಳಿಸಿ ಪೊಲೀಸರು ಜನರೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಗ್ರಾಮಗಳಿಗೆ ನಿಯಮಿತವಾಗಿ ಭೇಟಿ ನೀಡಿ ಸ್ಥಳೀಯ ಸಮಸ್ಯೆಗಳು ಹಾಗೂ ಅಪರಾಧದ ಸಾಧ್ಯತೆಗಳ ಬಗ್ಗೆ

ಮೂರನೇಯ ಪುಟಕ್ಕೆ

ಹಾಸ್ಟೆಲ್‌ನಲ್ಲಿ ದುರ್ಘಟನೆ: ಆಹಾರ ಗುಣಮಟ್ಟದ ಬಗ್ಗೆ ಅಧಿಕಾರಿಗಳು ನಿಗಾ ವಹಿಸಬೇಕು : ಶಾಸಕ ಹಂಪನಗೌಡ ಬಾದರ್ಲಿ



ಸಿಂಧನೂರು: ತಾಲೂಕಿನ ಹಾಸ್ಟೆಲ್‌ನಲ್ಲಿ ನಡೆದ ದುರ್ಘಟನೆಯ ಹಿನ್ನೆಲೆಯಲ್ಲಿ ಸಿಂಧನೂರು ತಾಲೂಕಿನ ಶಾಸಕರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಹಾಸ್ಟೆಲ್‌ಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಹಿರಿಯ ಅಧಿಕಾರಿಗಳು ನಿರಂತರವಾಗಿ ನಿಗಾ ವಹಿಸಬೇಕು ಎಂದು ಅವರು ಸೂಚಿಸಿದ್ದಾರೆ.

ನಗರದ ತಾಯಿ ಮಕ್ಕಳು ಆಸ್ಪತ್ರೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ನೀಡಲಾಗುವ ಆಹಾರದ ಗುಣಮಟ್ಟ ಹಾಗೂ ಅಡುಗೆಗೆ ಬಳಸುವ ಸಾಮಗ್ರಿಗಳ ಬಗ್ಗೆ ವಿಶೇಷ ಗಮನ ಹರಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ತರಕಾರಿಗಳು, ಅಕ್ಕಿ ಸೇರಿದಂತೆ ಅಡುಗೆಗೆ ಬಳಸುವ ಪ್ರತಿಯೊಂದು ಆಹಾರ ಪದಾರ್ಥವನ್ನು ಪರಿಶೀಲಿಸಿದ ನಂತರವೇ ಬಳಕೆ ಮಾಡಬೇಕು. ಆಹಾರ ಪದಾರ್ಥಗಳ ಗುಣಮಟ್ಟದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ಕಂಡುಬಂದರೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಶಾಸಕರು ಎಚ್ಚರಿಸಿದ್ದಾರೆ.

ವಿದ್ಯಾರ್ಥಿಗಳ ಆರೋಗ್ಯ ಮತ್ತು ಸುರಕ್ಷತೆ ಅತ್ಯಂತ ಪ್ರಮುಖವಾಗಿದ್ದು, ಹಾಸ್ಟೆಲ್‌ಗಳ ನಿರ್ವಹಣೆಯಲ್ಲಿ ಯಾವುದೇ ಲೋಪವಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ. ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ. ಡಾ.ಅಯ್ಯನಗೌಡ. ಡಿವೈಎಸ್ಪಿ ಚಂದ್ರಶೇಖರ್ ನಾಯಕ

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಗ್ರೇಡ್ 2 ನಟರಾಜ್ .ಡಾ.ನಾಗವೇಣಿ. ಖಾಜಿ ಮಲ್ಲಿಕಾ ವಕೀಲರು. ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು.

ಜಿಲ್ಲಾಡಳಿತದಿಂದ ಸೆಪ್ಟಂಬರ್ 02ರಂದು ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ

ರಾಯಚೂರು ಆಗಸ್ಟ್ 29

ರಾಯಚೂರಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಕಾರ್ಯಕ್ರಮವನ್ನು ಸೆಪ್ಟಂಬರ್ 02ರ ಬೆಳಿಗ್ಗೆ 11ಕ್ಕೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಅಜಯ್ ಧರ್ಮಸಿಂಗ್ ಅವರು ಉದ್ಘಾಟನೆ ನೆರವೇರಿಸುವರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ ಎಸ್.ತಂಗಡಗಿ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ಎಸ್.ಸಿ, ಎಸ್.ಟಿ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ ಜಿ. ಅವರು ಘನ ಉಪಸ್ಥಿತಿ ವಹಿಸುವರು.

ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶಿಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎನ್.ಎಸ್.ಬೋಸರಾಜು, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಎಸ್.ಎಸ್.ನಕುಲ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ಪೂವಿತಾ

ಮೂರನೇಯ ಪುಟಕ್ಕೆ

ಜಿಲ್ಲಾಧಿಕಾರಿ ಕಚೇರಿ ಮುಂದೆ ಅನ್ನದಾತರ ಆಕ್ರೋಶ; ರೈತ ಆತ್ಮಹತ್ಯೆಗೆ ಯತ್ನ

ಕಲಬುರಗಿ ,ಆ.29-

ಮುಂಗಾರು ಮಳೆ ಕೊರತೆಯಿಂದ ಬೆಳೆಗಳು ಒಣಗುತ್ತಿದ್ದು, ಜಿಲ್ಲೆಯಲ್ಲಿ ಬರದ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಕಲಬುರಗಿ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸದಿರುವುದನ್ನು ಖಂಡಿಸಿ ಸಂಯುಕ್ತ ಹೋರಾಟ ಕರ್ನಾಟಕ ನೇತೃತ್ವದಲ್ಲಿ ರೈತರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಎದುರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಮುಂಗಾರು ಹಂಗಾಮಿನಲ್ಲಿ ಹೆಸರು, ಉದ್ದು, ಸೋಯಾಬಿನ್, ಎಳ್ಳು ಸೇರಿದಂತೆ ಹಲವು ಬೆಳೆಗಳು ಮಳೆ ಕೊರತೆಯಿಂದ ಹಾನಿಗೀಡಾಗಿವೆ. ಕೆಲ ರೈತರು ಎರಡು ಬಾರಿ ಬಿತ್ತನೆ ಮಾಡಿದ್ದರೂ ಸಮರ್ಪಕ ಮಳೆಯಾಗದೆ ಬೆಳೆ ಕೈಕೊಟ್ಟಿದೆ. ಆಗಸ್ಟ್‌ನಲ್ಲಿ ಸುರಿದ ಅಲ್ಪ ಮಳೆಗೆ ಕೆಲವೆಡೆ ತೊಗರಿ ಬಿತ್ತನೆ ಮಾಡಲಾಗಿದ್ದು, ಇದೀಗ ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಬೆಳೆಗಳು ಬಾಡುತ್ತಿವೆ ಎಂದು ರೈತ ಮುಖಂಡರು ದೂರಿದರು.

ಜಿಲ್ಲೆಯ ಹಳ್ಳ, ಕೊಳ್ಳ ಹಾಗೂ ನಾಲೆಗಳು ಬತ್ತಿದ್ದು, ಬಾವಿ ಮತ್ತು ಕೊಳವೆಬಾವಿಗಳಲ್ಲಿಯೂ ನೀರಿನ ಮಟ್ಟ ಕುಸಿದಿದೆ. ಇದರಿಂದ ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವಿನ ಕೊರತೆ ಎದುರಾಗಿದೆ. ಪರಿಸ್ಥಿತಿಯನ್ನು ಸರ್ಕಾರ ತಕ್ಷಣ ಮರುಪರಿಶೀಲಿಸಿ ಕಲಬುರಗಿ ಜಿಲ್ಲೆಯನ್ನು ಬರಪೀಡಿತವೆಂದು ಘೋಷಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.



ಆತ್ಮಹತ್ಯೆಗೆ ಯತ್ನ: ಪ್ರತಿಭಟನೆ ವೇಳೆ ರೈತನೊಬ್ಬ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಕೆಲಕಾಲ ಆತಂಕಕ್ಕೆ ಕಾರಣವಾಯಿತು. ತಕ್ಷಣ ಮಧ್ಯಪ್ರವೇಶಿಸಿದ ಪೊಲೀಸರು ರೈತನನ್ನು ತಡೆದು ಸುರಕ್ಷಿತವಾಗಿ ಕರೆದೊಯ್ದರು. ರಸ್ತೆ ತಡೆ ನಡೆಸುತ್ತಿದ್ದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು.

1,000 ಕೋಟಿ ವಿಶೇಷ ಪ್ಯಾಕೇಜ್‌ಗೆ ಒತ್ತಾಯ: ಜಿಲ್ಲೆಯನ್ನು ಬರಪೀಡಿತವೆಂದು ಘೋಷಿಸಿ 1,000 ಕೋಟಿ ವಿಶೇಷ ಪ್ಯಾಕೇಜ್ ಬಿಡುಗಡೆ ಮಾಡಬೇಕು. ಪ್ರತಿ ಎಕರೆಗೆ 50 ಸಾವಿರ ಬರ ಪರಿಹಾರ ನೀಡಬೇಕು. ರಾಷ್ಟ್ರೀಕೃತ ಬ್ಯಾಂಕ್‌ಗಳ ರೈತರ ಸಾಲ ಮನ್ನಾ ಮಾಡಬೇಕು ಅಥವಾ ಸಾಲ ಮರುಪಾವತಿಗೆ ಕಾಲಾವಕಾಶ ವಿಸ್ತರಿಸಬೇಕು ಎಂದು ರೈತ ಮುಖಂಡರು ಆಗ್ರಹಿಸಿದರು.

ಅಲ್ಪಾವಧಿಸಾಲ ಪಡೆಯುವುದು

ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಕರ್ನಾಟಕದ ಪಾಲಿನ 15 ಟಿಎಂಸಿ ನೀರನ್ನು ಬಿಡುಗಡೆ ಮಾಡಿ ಭೀಮಾ ನದಿಗೆ ಹರಿಸಬೇಕು. ಬರ ಕಾಮಗಾರಿಗಳನ್ನು ತಕ್ಷಣ ಆರಂಭಿಸಿ ಗ್ರಾಮೀಣ ಜನರಿಗೆ ಉದ್ಯೋಗ ಕಲ್ಪಿಸಬೇಕು. ಜಾನುವಾರುಗಳಿಗಾಗಿ ಗೋಶಾಲೆ ಹಾಗೂ ಮೇವಿನ ವ್ಯವಸ್ಥೆ ಮಾಡಬೇಕು. ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಬೇಕು ಎಂದು ಒತ್ತಾಯಿಸಿದರು.

ಬೆಳೆ ವಿಮೆ ತಾರತಮ್ಯ ಆರೋಪ:

ಬೆಳೆ ವಿಮೆ ಪರಿಹಾರ ನೀಡುವಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿದ ರೈತ ಮುಖಂಡರು, ವಿಮೆ ಪಡೆಯಲು ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲದ ದೃಢೀಕರಣವನ್ನು ಕಡ್ಡಾಯಗೊಳಿಸಬಾರದು ಎಂದು ಒತ್ತಾಯಿಸಿದರು. ಬೆಳೆ ಹಾನಿಗೊಳಗಾದ ಎಲ್ಲ ರೈತರಿಗೆ ವಿಮೆ ಪರಿಹಾರ ನೀಡಬೇಕು. ಎರಡನೇ ಕಂತಿನ ವಿಮೆ ಹಣದಿಂದ ವಂಚಿತರಾದ ರೈತರಿಗೂ ಪರಿಹಾರ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯ ಶಾಸಕರು, ಸಚಿವರು ಹಾಗೂ ವಿರೋಧ ಪಕ್ಷದ ನಾಯಕರು ರೈತರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ವಿಫಲರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಮುಖಂಡರು, ತಕ್ಷಣ ಕೇಂದ್ರದ ಬರ ಅಧ್ಯಯನ ತಂಡವನ್ನು ಕಲಬುರಗಿ ಜಿಲ್ಲೆಗೆ ಕಳುಹಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಂಚಾಲಕ ಶರಣಬಸಪ್ಪ ಮಮಶೆಟ್ಟಿ, ಭೀಮಾಶಂಕರ ಮಾಡಿಯಾಳ, ಕರೆಪ್ಪ ಕರಗೊಂಡ, ಎಂ.ಬಿ. ಸಜ್ಜನ, ಮೌಲಾ ಮುಲ್ಲಾ, ರೈತ ಮುಖಂಡರಾದ ಸಿದ್ದಪ್ಪ ಕಲಶೆಟ್ಟಿ, ಭೀಮಶಾ ಬಡದಾಳ, ದಿಲೀಪ್ ನಾಗೂರ, ಉಮಾಪತಿ ಪಾಟೀಲ, ನಾಗಯ್ಯ ಸ್ವಾಮಿ, ಚಂದ್ರಕಾಂತ ಪಾಟೀಲ, ವೀರಣ್ಣ ಗೌಡ, ಮಹೇಶ್ ಕುಮಾರ್ ರಾಠೋಡ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಸಚಿವರು-ಶಾಸಕರ ಮನೆ ಮುಂದೆ ಧರಣೆಯ ಎಚ್ಚರಿಕೆ: ಕಲಬುರಗಿ ಜಿಲ್ಲೆಯನ್ನು ತಕ್ಷಣ ಬರಪೀಡಿತ ಪ್ರದೇಶವೆಂದು ಘೋಷಿಸದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವುದಾಗಿ ಸಂಯುಕ್ತ ಹೋರಾಟ ಕರ್ನಾಟಕ ರೈತ ಮುಖಂಡರು ಎಚ್ಚರಿಸಿದ್ದಾರೆ. ಜಿಲ್ಲೆಯ ಸಚಿವರು ಹಾಗೂ ಶಾಸಕರ ಮನೆಗಳ ಎದುರು ಧರಣಿ ನಡೆಸಲಾಗುವುದು. ಜಿಲ್ಲೆಗೆ ಆಗಮಿಸು ವ ಸಚಿವರಿಗೆ ಕಪ್ಪುಪಟ್ಟಿ ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ತಡೆಹಿಡಿದ ಪಿಂಚಣಿಗೆ ತಕ್ಷಣ ದಾಖಲೆ ಸಲ್ಲಿಸಿ: ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಸೂಚನೆ

ಕಲಬುರಗಿ,ಆ.29-

ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ತಡೆಹಿಡಿಯಲಾಗಿರುವ ಪಿಂಚಣಿಯನ್ನು ಮರುಚಾಲನೆಗೊಳಿಸಲು ಅರ್ಹ ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ತಮ್ಮ ವ್ಯಾಪ್ತಿಯ ತಹಸೀಲ್ದಾರ್ ಕಚೇರಿಗೆ ತಕ್ಷಣ ಸಲ್ಲಿಸುವಂತೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ತಿಳಿಸಿದ್ದಾರೆ.

ಆಧಾರ್ ಕಾರ್ಡ್, ಪಾನ್ ಕಾರ್ಡ್, ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿಯಲ್ಲಿ ವಯಸ್ಸಿನ ವ್ಯತ್ಯಾಸ ಕಂಡುಬಂದಿರುವುದು, ಎಪಿಎಲ್ ಪಡಿತರ ಚೀಟಿ ಹೊಂದಿರುವುದು, ಆದಾಯ ತೆರಿಗೆ ಪಾವತಿಸುತ್ತಿರುವುದು, ಯುಡಿಐಡಿ ಕಾರ್ಡ್ ಹೊಂದಿರದಿರುವುದು ಹಾಗೂ ಕುಟುಂಬದ ವಾರ್ಷಿಕ ಆದಾಯ 32,000ಕ್ಕಿಂತ ಹೆಚ್ಚಿರುವುದು ಸೇರಿದಂತೆ ವಿವಿಧ ಕಾರಣಗಳಿಂದ ಕೆಲವು ಫಲಾನುಭವಿಗಳ ಪಿಂಚಣಿಯನ್ನು ಸರ್ಕಾರ ಅನುಮಾನಾಸ್ಪದವೆಂದು ಗುರುತಿಸಿ ತಾತ್ಕಾಲಿಕವಾಗಿ ತಡೆಹಿಡಿದಿದೆ ಎಂದು ಅವರು ತಿಳಿಸಿದ್ದಾರೆ.

ಈಗಾಗಲೇ ಸಂಯೋಜನೆ



ಮೊಬೈಲ್ ಆ್ಯಪ್ ಮೂಲಕ ಗ್ರಾಮ ಆಡಳಿತಾಧಿಕಾರಿಗಳು ಫಲಾನುಭವಿಗಳ ಭೌತಿಕ ಪರಿಶೀಲನೆ ನಡೆಸಿದ್ದಾರೆ. ಪರಿಶೀಲನೆ ಸಂದರ್ಭದಲ್ಲಿ ವಿಳಾಸದಲ್ಲಿ ಲಭ್ಯವಿಲ್ಲದ ಹಾಗೂ ಇನ್ನೂ ಪರಿಶೀಲನೆಗೆ ಒಳಪಡದ ಅರ್ಹ ಪಿಂಚಣಿದಾರರು ತಮ್ಮ ಪಿಂಚಣಿ ಮುಂದುವರಿಸಲು ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕಾಗಿದೆ.

ಅರ್ಹ ಫಲಾನುಭವಿಗಳು ವಯಸ್ಸಿನ ದೃಢೀಕರಣ ಪ್ರಮಾಣಪತ್ರ, ಬಿಪಿಎಲ್ ಪಡಿತರ ಚೀಟಿ ಹಾಗೂ ಕುಟುಂಬದ ವಾರ್ಷಿಕ ಆದಾಯ 1.20 ಲಕ್ಷಕ್ಕಿಂತ ಕಡಿಮೆ ಇರುವ ಪ್ರಮಾಣಪತ್ರ ಸಲ್ಲಿಸಬೇಕು. ಅಂಗವಿಕಲ ಪಿಂಚಣಿದಾರರು ಯುಡಿಐಡಿ ಕಾರ್ಡ್ ಹಾಗೂ ನಿರ್ಗತಿಕ ವಿಧವಾ ಪಿಂಚಣಿ ಪಡೆಯುತ್ತಿರುವವರು ಗಂಡನ ಮರಣ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಅರ್ಹ ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ತಮ್ಮ ವ್ಯಾಪ್ತಿಯ ತಹಸೀಲ್ದಾರ್ ಕಚೇರಿಗೆ ಸಲ್ಲಿಸಿದಲ್ಲಿ, ಸ್ಥಗಿತಗೊಂಡಿರುವ ಪಿಂಚಣಿಯನ್ನು ನಿಯಮಾನುಸಾರ ಮರುಚಾಲನೆಗೊಳಿಸಲಾಗುವುದು. ನಿಗದಿತ ಹಾಗೂ ಸೂಕ್ತ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಅಂತಹ ಫಲಾನುಭವಿಗಳ ಪಿಂಚಣಿಯನ್ನು ಖಾಯಂ ಆಗಿ ಸ್ಥಗಿತಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಸ್ಪಷ್ಟಪಡಿಸಿದ್ದಾರೆ.

ಜಿಮ್ಸ್ ಜಿಲ್ಲಾಸ್ಪತ್ರೆಯಲ್ಲಿ ನಾರಾಯಣ ಗುರು, ನೂಲಿಯ ಚಂದಯ್ಯ ಜಯಂತಿ ಆಚರಣೆ



ಕಲಬುರಗಿ ,ಆ.29-

ನಗರದ ಜಿಮ್ಸ್ ಜಿಲ್ಲಾ ಆಸ್ಪತ್ರೆಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ 172ನೇ ಜಯಂತಿ ಹಾಗೂ ದಾಸೋಹಿ, ಜ್ಞಾನಿ, ಕಾಯಕಯೋಗಿ ಶರಣ ನೂಲಿಯ ಚಂದಯ್ಯ ಜಯಂತಿಯನ್ನು ಶುಕ್ರವಾರ ಆಚರಿಸಲಾಯಿತು.

ಜಿಲ್ಲಾ ಶಸ್ತ್ರಜ್ಞರ ಹಾಗೂ ಅಧೀಕ್ಷಕರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಶಸ್ತ್ರಜ್ಞರು ಹಾಗೂ ಅಧೀಕ್ಷಕರಾದ ಡಾ.ರೂಕೀಯಾ ಆಸ್ನಾರಬಾ ಅವರು ಬ್ರಹ್ಮಶ್ರೀ ನಾರಾಯಣ ಗುರು ಹಾಗೂ ಶರಣ ನೂಲಿಯ ಚಂದಯ್ಯ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗಣ್ಯರು, ಸಮಾಜದಲ್ಲಿ ಸಮಾನತೆ, ಮಾನವೀಯತೆ, ಕಾಯಕ ಮತ್ತು ದಾಸೋಹದ ಮೌಲ್ಯಗಳನ್ನು ಬಿತ್ತಿದ ಮಹನೀಯರ ಆದರ್ಶಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ತತ್ವ ಹಾಗೂ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಒಳಿತಿಗಾಗಿ ಶ್ರಮಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಶಾಲಿನಿ ಸಜ್ಜನಶೆಟ್ಟಿ, ಸ್ಥಳೀಯ ವೈದ್ಯಾಧಿಕಾರಿಗಳಾದ ಡಾ. ನಾಗರಾಜ್ ಪಾಟೀಲ, ಡಾ. ಸಂತೋಷ್ ಕಟ್ಟಿಮನಿ, ಡಾ. ಪ್ರತಿಭಾ, ಚೀಫ್ ಮೆಡಿಕಲ್ ಆಫೀಸರ್ ಡಾ. ವಿನೋದ್ ಕುಮಾರ ಹೊಸಳ್ಳಿ, ಕಚೇರಿ ಸಹಾಯಕ ಆಡಳಿತಾಧಿಕಾರಿ ಅಂಬಾರಾಯ ಸಂಕಾ, ಕಚೇರಿ ಅಧೀಕ್ಷಕಿ ಸಂಗೀತಾ, ಎಚ್‌ಎಫ್‌ಡಬ್ಲ್ಯೂ ಸಿಬ್ಬಂದಿ ಇಮ್ತಿಯಾಜ್ ಅಲಿ, ಎಫ್‌ಡಿಎ ಕಾವ್ಯ ಹನಚೇಟಕಿ, ಶಿಬಾರಾಣಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಜಿಲ್ಲಾ ತಂಬಾಕು ವ್ಯಸನ ಮುಕ್ತ ಕೇಂದ್ರದ ಸೈಕಾಲಜಿಸ್ಟ್ ಕೌನ್ಸಿಲರ್ ಮಂಜುನಾಥ ಕಂಬಾಳಿಮಠ, ಎನ್‌ಎಚ್‌ಎಂ ಲೆಕ್ಕಪರಿಶೋಧಕ ಸಿದ್ದಪ್ಪ ಹಾಲಪ್ಪನೂರ, ಆರೋಗ್ಯ ನಿರೀಕ್ಷಣಾಧಿಕಾರಿ ಚನ್ನಮಲ್ಲಪ್ಪ ಬುಕ್ಕಾ, ಸರ್ಕಾರಿ ನೌಕರರ ಸಂಘದ ಕ್ರೀಡಾ ಕಾರ್ಯದರ್ಶಿ ರಾಚಣ್ಣ ಬಿಸಿಗೊಂಡ, ಅವಿನಾಶ್ ಪಾಟೀಲ, ಶರಣು, ಪೃಥ್ವಿ ಸೇರಿದಂತೆ ಜಿಮ್ಸ್ ಜಿಲ್ಲಾ ಆಸ್ಪತ್ರೆಯ ವಿವಿಧ ವಿಭಾಗಗಳ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ಉಪಸ್ಥಿತರಿದ್ದರು.

ದಂಡಗುಂಡ ಬಸವಣ್ಣನವರ ಜಾತ್ರೆ ಪ್ರಯುಕ್ತ ಶಾಂತಿ ಸಭೆ

ಚಿತ್ತಾಪುರ,ಆ.29-

ತಾಲೂಕಿನ ದಂಡಗುಂಡ ಗ್ರಾಮದಲ್ಲಿ ಆ.31ರ ಸೋಮವಾರದಂದು ನಡೆಯಲಿರುವ ಐತಿಹಾಸಿಕ ದಂಡಗುಂಡ ಬಸವಣ್ಣನವರ ಜಾತ್ರೆ ಪ್ರಯುಕ್ತ ಚಿತ್ತಾಪುರ ಪೊಲೀಸ್ ಠಾಣೆ ವತಿಯಿಂದ ಶಾಂತಿ ಸಭೆ ಹಮ್ಮಿಕೊಳ್ಳಲಾಯಿತು.

ನಂತರ ಡಿವೈಎಸ್‌ಪಿ ಶಂಕರಗೌಡ ಪಾಟೀಲ್ ಮಾತನಾಡಿ, ಈ ಭಾಗದಲ್ಲಿ ದಂಡಗುಂಡ ಬಸವಣ್ಣನವರ ಜಾತ್ರೆ ಅದ್ದೂರಿಯಾಗಿ ಜರುಗುತ್ತದೆ. ಕಳೆದ ಭಾರಿ ಏನೆಲ್ಲ ತಪ್ಪುಗಳಾಗಿವೆ. ಅವುಗಳು ಈ ಭಾರಿ ನಡೆಯದಂತೆ ಪೊಲೀಸ್ ಇಲಾಖೆಯವರು ನೋಡಿಕೊಳ್ಳುವುದರ ಜೊತೆಗೆ ಸೂಕ್ತ ಪೊಲೀಸ್ ಬಂದೋಬಸ್ತ್ ಒದಗಿಸುವುದರ ಮೂಲಕ ದಂಡಗುಂಡ ಬಸವಣ್ಣನವರ ಜಾತ್ರೆಯ ಯಶಸ್ವಿಗೆ ನಾವೆಲ್ಲರು ಶ್ರಮಿಸೋಣಾ ಎಂದರು.

ಅಳ್ಳೊಳ್ಳಿ ಗ್ರಾಮದಿಂದ ದಂಡಗುಂಡ ಗ್ರಾಮದ ಬಸವಣ್ಣನವರ ದೇವಸ್ಥಾನಕ್ಕೆ ಆಗಮಿಸುವ ಭಕ್ತರು ರಸ್ತೆಯ ಮೇಲೆ ಎಲ್ಲಿಯೂ ವಾಹನಗಳನ್ನು ನಿಲ್ಲಿಸಬಾರದು. ನೀವು ವಾಹನಗಳನ್ನು ನಿಲ್ಲಿಸಿ ಲಾಕ್ ಮಾಡಿ ದರ್ಶನ ಪಡೆದುಕೊಳ್ಳಲು ಹೋದರೆ ಸಾಕಷ್ಟು ತೊಂದರೆಯಾಗುತ್ತದೆ. ವಾಹನಗಳನ್ನು ಪಾರ್ಕಿಂಗ್ ನಲ್ಲೇ ನಿಲ್ಲಿಸಬೇಕು ಎಂದರು.

ದೇವಸ್ಥಾನದ ಗರ್ಭಗುಡಿಯ ಮುಖ್ಯದ್ವಾರವನ್ನು ಹಿಡಿದು 5 ದ್ವಾರಗಳಿವೆ. ಮುಖ್ಯ ದ್ವಾರದಿಂದ ಪ್ರತಿಯೊಬ್ಬರಿಗೆ ದರ್ಶನ ಪಡೆದುಕೊಳ್ಳಲು ಅವಕಾಶ ಕಲ್ಪಿಸಿಕೊಡಲಾಗುವುದು, ಬಲಗಡೆಯಿಂದ ಮಹಿಳೆಯರಿಗೆ, ಎಡಗಡೆಯಿಂದ ಪುರುಷರಿಗೆ ಅವಕಾಶ ಕೊಡಲಾಗುತ್ತಿದೆ. ಅದರಂತೆ ತಾವುಗಳು ದರ್ಶನ ಪಡೆದುಕೊಂಡು ಹೋಗಲು ಅವಕಾಶ ನೀಡಲಾಗುವುದು. ಪ್ರದಕ್ಷಣೆಗೆ ನಾವು ಯಾವುದೇ ಕಾರಣಕ್ಕೂ ಅವಕಾಶ ನೀಡಲ್ಲ. ಹೀಗಾಗಿ ಎಲ್ಲರು ಸಹಕರಿಸಬೇಕು ಎಂದರು.



ಸುರಕ್ಷತೆಗೆ ಹೆಚ್ಚಿನ ಮಹತ್ವ ಕೊಡಬೇಕು. ಅಂಗಡಿ ಮುಗ್ಗಂಟ್ಟುಗಳು ಸ್ವಲ್ಪ ಒಳಗಡೆ ಹಾಕಬೇಕು. ರಥದ ಗಾಲಿಗಳು ಸುಗಮವಾಗಿ ಹೋಗಲು ಸಹಕರಿಸಬೇಕು. ಇಲ್ಲದ್ದಿದ್ದರೆ ಅನಾಹುತಗಳು ಸಂಭವಿಸುವ ಸಾಧ್ಯತೆಗಳಿರುತ್ತವೆ. ದಾಸೋಹ ಮಾಡುವ ಸ್ಥಳದಲ್ಲೇ ಸ್ವಚ್ಚತೆ ಕಾಪಾಡಿಕೊಳ್ಳಬೇಕು ಎಂದರು.

ಎಂ.ಎಲ್.ಸಿ, ದೇವಸ್ಥಾನ ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ಬಿ.ಜಿ ಪಾಟೀಲ್ ಮಾತನಾಡಿ, ಕಳೆದ ವರ್ಷ ಪೊಲೀಸ್ ಇಲಾಖೆಯಿಂದ ಎಲ್ಲಾ ರೀತಿಯ ಸಕಲ ಸಿದ್ದತೆಗಳನ್ನು ಮಾಡಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಕ್ರಮ ಕೈಗೊಂಡು ಜಾತ್ರೆ ಯಶಸ್ವಿಯಾಗಲು ಸಹಕರಿಸಿದರು. ಅದೇ ರೀತಿ ಈ ವರ್ಷವು ಕೂಡ ಪೊಲೀಸ್ ಇಲಾಖೆಯವರು ಎಲ್ಲಾ ರೀತಿಯ ಸಕಲ ಸಿದ್ದತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ಗ್ರಾಮದ ಮುಖಂಡರು, ಭಕ್ತರು ಸೇರಿದಂತೆ ಪ್ರತಿಯೊಬ್ಬರು ಸಹಕಾರ ನೀಡಬೇಕು ಎಂದರು.

ತಹಶೀಲ್ದಾರ್ ನಾಗಯ್ಯ ಹಿರೇಮಠ ಮಾತನಾಡಿ, ತಾಲೂಕು ಆಡಳಿತದ ವತಿಯಿಂದ ಭಕ್ತರಿಗೆ ಯಾವುದೇ ರೀತಿಯಿಂದ ತೊಂದರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಾವೆಲ್ಲರು ಸೇರಿ ಜಾತ್ರೆ ಯಶಸ್ವಿಗೆ ಶ್ರಮಿಸೋಣ, ಜಾತ್ರೆಯಲ್ಲಿ ಯಾವುದೇ ರೀತಿಯ ಘಟನೆಗಳು ಜರುಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ವಿದ್ಯುತ್ ವ್ಯವಸ್ಥೆ, ಉಚಿತ ವೈದ್ಯಕೀಯ ಚಿಕಿತ್ಸೆ , ಅಂಬುಲೆನ್ಸ್ ವ್ಯವಸ್ಥೆ ಮಾಡಲು ತಾಲೂಕು ಆರೋಗ್ಯಾಧಿಕಾರಿಗೆ ಸೂಚಿಸಲಾಗುವುದು ಎಂದು ಭರವಸೆ ನೀಡಿದರು. ಪಿಎಸ್ಐ ಮಂಜುನಾಥ ರೆಡ್ಡಿ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವು ಕೂಡ ಆ.31ರಂದು ದಂಡಗುಂಡ ಬಸವಣ್ಣನವರ ಜಾತ್ರೆ ಇರುವುದರಿಂದ ಯಾವುದೇ ರೀತಿಯ ಅಹಿತಕರ ಘಟನೆ ಜರುಗದಂತೆ ಮುನ್ನೆಚ್ಚರಿಕೆ ಕೈಗೊಂಡಿದ್ದು, ಗ್ರಾಮಸ್ಥರು ಹಾಗೂ ಭಕ್ತರು ಕೂಡ ಸಹಕಾರ ನೀಡಬೇಕು ಎಂದರು.

ದೇವಸ್ಥಾನ ಕಮಿಟಿ ಕಾರ್ಯದರ್ಶಿ ಚಂದ್ರಶೇಖರ ಆವಂಟಿ ಮಾತನಾಡಿದರು. ಈ ಸಂದರ್ಭದಲ್ಲಿ ದೇವಸ್ಥಾನ ಟ್ರಸ್ಟ್ ಸಮಿತಿ ಅಧ್ಯಕ್ಷ ಭಾಗಣ್ಣಗೌಡ ಸಂಕನೂರ, ಮಹಾಂತಗೌಡ, ರಾಜಶೇಖರ ಪಾಟೀಲ್ ಸೇರಿದಂತೆ ಗ್ರಾಮದ ಅನೇಕ ಮುಖಂಡರು ಹಾಗೂ ಭಕ್ತರು ಇದ್ದರು.

ನುಲಿಯ ಚಂದಯ್ಯನವರ ತತ್ತ್ವ-ಸಂದೇಶ ಸದಾ ಸರ್ವಕಾಲಿಕ: ಅಲ್ಲಮಪ್ರಭು ಪಾಟೀಲ್

ಕಲಬುರಗಿ,ಆ.29-

ಕಾಯಕವೇ ಕೈಲಾಸ ಎಂಬ ತತ್ತ್ವದಡಿ ಬದುಕಿದ ಶರಣ ನುಲಿಯ ಚಂದಯ್ಯ ಅವರು ಕಾಯಕಕ್ಕೆ ಮೊದಲ ಆದ್ಯತೆ ನೀಡಿದ ಮಹಾನ್ ಶರಣರಾಗಿದ್ದರು. ಅವರ ತತ್ತ್ವ, ಸಂದೇಶ ಹಾಗೂ ಕಾಯಕ ನಿಷ್ಠೆ ಸದಾ ಸರ್ವಕಾಲಿಕವಾಗಿದ್ದು, ಇಂದಿನ ಪೀಳಿಗೆಗೂ ಮಾದರಿಯಾಗಿದೆ ಎಂದು ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ ಹೇಳಿದರು.



ನಗರದ ಡಾ.ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಶುಕ್ರವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯಿತಿ ಕಲಬುರಗಿ ಇದರ ಸ'ಂಯುಕ್ತಾ ಶ್ರ'ಯದ'ಲ್ಲಿ ಆಯೋಜಿಸಿದ್ದ 919ನೇ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮದಲ್ಲಿ ಶರಣ ನುಲಿಯ ಚಂದಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಹುಲ್ಲು ಕೊಯ್ಯುವ ಕಾಯಕದಲ್ಲಿ ತೊಡಗಿದ್ದ ಸಂದರ್ಭದಲ್ಲಿ ಕೊರಳಿನಲ್ಲಿದ್ದ ಲಿಂಗ ಕೆಳಗೆ ಬಿದ್ದರೂ, ಕಾಯಕಕ್ಕೆ ಧಕ್ಕೆಯಾಗಬಾರದು ಎಂಬ ದೃಢನಿಷ್ಠೆಯಿಂದ ನಾನು ಕಾಯಕ ಮಾಡುತ್ತಿದ್ದೇನೆ, ನಿನಗೆ ಬೇಕಿದ್ದರೆ ಅಲ್ಲೇ ಇರು ಎಂಬ ಮನೋಭಾವ ತೋರಿದ ನುಲಿಯ ಚಂದಯ್ಯ ಅವರು ಕಾಯಕದ ಮಹತ್ವವನ್ನು ಸಾರಿದ ಶರಣರಾಗಿದ್ದರು ಎಂದು ಅಲ್ಲಮಪ್ರಭು ಪಾಟೀಲ ಸ್ಮರಿಸಿದರು.

ನಂತರ ಮಡಿವಾಳ ವ'ಾಚಿದೀವ'ರ'ೂಂದಿಗೆ ಬಸವಕಲ್ಯಾಣದ ಅನುಭವ ಮಂಟಪಕ್ಕೆ ತೆರಳಿ ವಚನ ಕ್ರಾಂತಿಯಲ್ಲಿ ಭಾಗವಹಿಸಿದ್ದರು. 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಶರಣರು ಸಮಾಜದಲ್ಲಿದ್ದ ಮೂಢನಂಬಿಕೆ, ಜಾತೀಯತೆ ಹಾಗೂ ಅಸ್ಪೃಶ್ಯತೆ ವಿರುದ್ಧ ವಚನ ಸಾಹಿತ್ಯದ ಮೂಲಕ ಕ್ರಾಂತಿಕಾರಿ ಬದಲಾವಣೆಗೆ ಕಾರಣರಾದರು. ಶರಣರ ತತ್ತ್ವ, ಸಂದೇಶ ಹಾಗೂ ಕಾಯಕನಿಷ್ಠೆ ಮುಂದಿನ ಪೀಳಿಗೆಗೆ ದಾರಿದೀಪವಾಗಬೇಕು ಎಂದರು.

ಸಾಮಾಜಿಕ ಕ್ರಾಂತಿಗೆ ಶರಣರ ಕೊಡುಗೆ ಅಪಾರ: ಎಂ.ವೈ. ಪಾಟೀಲ

ಅಫಜಲಪುರ ಶಾಸಕ ಎಂ.ವೈ. ಪಾಟೀಲ ಮಾತನಾಡಿ, ಶರಣರ ಕಾಲದಲ್ಲಿ ಸಮಾಜದಲ್ಲಿ ಬೇರೂರಿದ್ದ ಜಡತ್ವ, ಅಸ್ಪೃಶ್ಯತೆ ಹಾಗೂ ಮೇಲು ಕೀಳು ಎಂಬ ಭಾವನೆಗಳನ್ನು ತೊಡೆದುಹಾಕಲು ಬಸವಣ್ಣನವರ ನೇತೃತ್ವದಲ್ಲಿ ಅನುಭವ ಮಂಟಪದ ಮೂಲಕ ಶರಣರು ಬೃಹತ್ ಸಾಮಾಜಿಕ ಕ್ರಾಂತಿಯನ್ನೇ ಹುಟ್ಟುಹಾಕಿದರು ಎಂದು ಹೇಳಿದರು.

ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಅನೇಕ ಶರಣರ ತ್ಯಾಗ ಮತ್ತು ಬಲಿದಾನ ಅಪಾರವಾಗಿತ್ತು. ಆ ಸಂದರ್ಭದಲ್ಲಿ ಅನೇಕ ವಚನಗಳು ನಾಶವಾದರೂ, ಹಿರಿಯರು ಪ್ರಾಣದ ಹಂಗು ತೊರೆದು ರಕ್ಷಿಸಿದ ವಚನ ಸಾಹಿತ್ಯವೇ ಇಂದು ಸಮಾಜಕ್ಕೆ ಪ್ರಗತಿಯ ಬೆಳಕಾಗಿದೆ ಎಂದರು.

ನುಲಿಯ ಚಂದಯ್ಯನವರ ಜೀವನ, ಕಾಯಕ ನಿಷ್ಠೆ ಹಾಗೂ ಸಮಾಜಕ್ಕೆ ಅವರು ನೀಡಿದ ಕೊಡುಗೆ ಕುರಿತು ಡಾ. ಶಿವರಂಜನ್ ಸತ್ಯಂಪೇಟೆ ಅವರು ವಿಶೇಷ ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ 2025-26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಮತ್ತು ಸರ್ಕಾರಿ ಸೇವೆ ಸಲ್ಲಿಸಿ ನಿವೃತ್ತರಾದ ಸರ್ಕಾರಿ ನೌಕರರನ್ನು ಸನ್ಮಾನಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರ ನಾಶಿ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕೊರಮ ಸಮಾಜದ ಅಧ್ಯಕ್ಷ ಶ್ರೀಮಂತ ಎಲ್. ಜಾಧವ, ಸಮಾಜದ ಜಿಲ್ಲಾಧ್ಯಕ್ಷ ಹಣಮಂತ ಕರ್ಜಗಿ, ಪೊಲೀಸ್ ಇಲಾಖೆಯ ಸಿಪಿಐ ರಾಘವೇಂದ್ರ ಭಜಂತ್ರಿ, ಸಹಾಯಕ ಕಾರ್ಯಪಾಲಕ ಅಭಿಯಂತರ ಶಾಂತಪ್ಪ ಜಾಧವ, ಜಗನ್ನಾಥ ಭಜಂತ್ರಿ, ಮಹಾದೇವಿ ಭಜಂತ್ರಿ, ಸುನೀಲ್ ಮಾನ್ಪಡೆ ಸೇರಿದಂತೆ ಸಮಾಜದ ಮುಖಂಡರು ಹಾಗೂ ಗಣ್ಯರು ಭಾಗವಹಿಸಿದ್ದರು.

ಕಾಂಗ್ರೆಸ್ ದುರಾಡಳಿತದ ವಿರುದ್ಧ ಬಿಜೆಪಿಯಿಂದ ಹೋರಾಟ : ರಾಜಕುಮಾರ್ ಪಾಟೀಲ್



ಸೇಡಂ ,ಆ.29-

ಕ್ಷೇತ್ರದಲ್ಲಿ ಕಾಂಗ್ರೆಸ್ ಸರಕಾರದ ದುರಾಡಳಿತ, ಶಾಸಕರ ನಿಷ್ಕ್ರಿಯತೆ ಹಾಗೂ ಜನವಿರೋಧಿ ಧೋರಣೆಗಳನ್ನು ಖಂಡಿಸಿ ಮುಂಬರುವ ದಿನಗಳಲ್ಲಿ ತಾಲೂಕಿನಾದ್ಯಂತ ಹೋರಾಟ ರೂಪಿಸಲಾಗುವುದು ಎಂದು ಮಾಜಿ ಶಾಸಕ ರಾಜಕುಮಾರ್ ಪಾಟೀಲ್ ತೇಲ್ಕೂರ್ ಘೋಷಿಸಿದರು.

ನಗರದ ಬಾಲಾಜಿ ಕಲ್ಯಾಣ ಮಂಟಪದಲ್ಲಿ ಭಾರತೀಯ ಜನತಾ ಪಕ್ಷ ಆಯೋಜಿಸಿದ ಕರಡು ಮತದಾರರ ಪಟ್ಟಿ ವಿತರಣೆ ಹಾಗೂ ಬಿಎಲ್ಎ 2 ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಮುಂದಿನ ದಿನಗಳಲ್ಲಿ ತಾಲೂಕಿನ ಪ್ರತಿಯೊಂದು ಹಳ್ಳಿಯ ಮೂಲಸೌಕರ್ಯ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಪಕ್ಷ ಸಂಘಟನೆಯೊಂದಿಗೆ ಬೀದಿಗಿಳಿದು ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ಇತ್ತೀಚಿಗೆ ರಂಜೋಳದಲ್ಲಿ ಭಜನೆ ಮಾಡಲು ಹೋದರೆ ಅದನ್ನು ಗೂಂಡಾಗಿರಿ, ಭಯದ ವಾತಾವರಣ ಸೃಷ್ಟಿ ಎಂದು ಬಿಂಬಿಸಲಾಯಿತು. ಆದರೆ ವಾಸ್ತವದಲ್ಲಿ ಲಾಠಿ, ಕಟ್ಟಿಗೆ ಹಾಗೂ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಂದು ಗೂಂಡಾಗಿರಿ ಮಾಡಿದ್ದು ಕಾಂಗ್ರೆಸ್‌ನವರು. ಗೂಂಡಾಗಿರಿ ಮಾಡುವುದೇ ಕಾಂಗ್ರೆಸ್‌ನ ಸಂಸ್ಕೃತಿ ಎಂದು ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅವರಿಗೆ ತೇಲ್ಕೂರ್ ಖಾರವಾಗಿ ತಿರುಗೇಟು ನೀಡಿದರು. ಕ್ಷೇತ್ರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು,

ಇಂತಹ ದುರಾಡಳಿತ ಮತ್ತು ತುಷ್ಟೀಕರಣ ನೀತಿಯನ್ನು ಜನತೆಯ ಮುಂದೆ ಬಯಲು ಮಾಡಲಾಗುವುದು ಎಂದರು.

ಪಕ್ಷದಲ್ಲಿ ಯಾವುದೇ ವ್ಯಕ್ತಿಪೂಜೆ ಅಥವಾ ಪ್ರತ್ಯೇಕ ಬಣಗಳಿಗೆ ಅವಕಾಶವಿಲ್ಲ, ನಾವೆಲ್ಲರೂ ಕೇವಲ ಬಿಜೆಪಿ ಬಣದಡಿ ಕಾರ್ಯನಿರ್ವಹಿಸಬೇಕು. ಯಾರೊಬ್ಬರೂ ಜಾತಿಯ ಆಧಾರದ ಮೇಲೆ ಟಿಕೆಟ್ ಅಥವಾ ಸ್ಥಾನಮಾನ ನಿರೀಕ್ಷಿಸದೆ, ಸರ್ವ ಜನಾಂಗದ ನಾಯಕರಾಗಿ ಬೆಳೆಯಬೇಕು. ಗ್ರಾಮ ಮಟ್ಟದಲ್ಲಿ ನಡೆಯುವ ಸಾರ್ವಜನಿಕ ಸಮಸ್ಯೆಗಳ ಪರಿಹಾರ ಹ ಾ ಗ ೂ ನ್ಯಾಯ-ಪಂಚಾಯಿತಿಗಳಲ್ಲಿ ಬಿಜೆಪಿ ಕ ಾ ಯ ರ್ ಕ ' ತ ರ್ ರ ' ು ಮುಂಚೂಣಿಯಲ್ಲಿದ್ದು ಜನರಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಬಿಜೆಪಿ ಸೇಡಂ ಮಂಡಲ ಪ್ರಭಾರಿ ಸಿದ್ದಾಜಿ ಪಾಟೀಲ, ಬಿಜೆಪಿ ಮಂಡಲ ಅಧ್ಯಕ್ಷ ಶಿವಶರಣಪ್ಪ ಶಂಕರ್ ಮೆಡಿಕಲ್, ನಾಗರೆಡ್ಡಿ ಪಾಟೀಲ ದೇಶಮುಖ ಮದನಾ, ಅನೀಲ ಪಾಟೀಲ ತೆಲ್ಕೂರ, ಸಂತೋಷಿರಾಣಿ ಪಾಟೀಲ ತೆಲ್ಕೂರ, ವಿಜಯಕುಮಾರ್ ಆಡಕಿ, ನಾಗರೆಡ್ಡಿ ಪಾಟೀಲ ಮುಧೋಳ, ಸಿದ್ದು ಬಾನಾರ ಕೋಡ್ಲಾ, ಮಹಾದೇವಪ್ಪ ಗೋಣಿ, ಬಸವರಾಜ ಪಾಟೀಲ ದೇವನೂರು, ಶಿವಕುಮಾರ ತೊಟ್ನಳ್ಳಿ, ರಾಮು ಕಣೇಕಲ್, ವಿನೋದ ಸಾಹುಕಾರ್, ನಾಗಪ್ಪ ಕೊಳ್ಳಿ, ಪಂಡರಿ ಮುನಿ ಇಟಕಾಲ, ಅಬ್ದುಲ್ ಜಾಫರ್ ಭೀಮು ನಾಯಕ ಹೂಡಾ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರಿದ್ದರು.

ಒಂದನೇಯ ಪುಟದಿಂದ

ಹಗರಣದ ಮುಜುಗರ ತಪ್ಪಿಸಿಕೊಳ್ಳಲು ನಾಗೇಂದ್ರರನ್ನ ರಾಜೀನಾಮೆ ಕೊಡಿಸಿದ್ದಾರೆ: ಕುಮಾರಸ್ವಾಮಿ

ಇದಕ್ಕೂ ಮುನ್ನ ನಗರದಲ್ಲಿ ಇಂದು ನಡೆದ ದಿವ್ಯಾಂಗ ಚೇತನರಿಗೆ ಕೃತಕ ಉಪಕರಣಗಳ ವಿತರಣಾ ಕಾರ್ಯಕ್ರಮಲ್ಲೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭಾಗಿಯಾಗಿದ್ದರು. ಇದಾದ ಬಳಿಕ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ನಡೆದ ದಿಶಾ ಸಭೆಯಲ್ಲೂ ಪಾಲ್ಗೊಂಡಿದ್ದರು. ಮಳೆ ಕೊರತೆಯಿಂದಾಗಿ ಎದುರಾಗಿರುವ ಸಮಸ್ಯೆ, ಕೆಆರ್‌ಎಸ್ ಡ್ಯಾಂನಿಂದ ನಾಲೆಗಳಿಗೆ ಕಟ್ಟು ಪದ್ಧತಿಯಲ್ಲಿ ನೀರು ಬಿಡುಗಡೆ ಸೇರಿದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಮಟಮಾರಿ ಗ್ರಾಮದಲ್ಲಿ ಎನ್‌ಎಎಲ್‌ಎಸ್‌ಎ ಯೋಜನೆಗಳ ಅನುಷ್ಠಾನಕ್ಕೆ ಚಾಲನೆ ಫಲಾನುಭವಿಗಳು ಯೋಜನೆಯ ಸದುಪಯೋಗ ಪಡಿಸಿಕೊಳ್ಳಬೇಕು: ನ್ಯಾ.ಸಿದ್ದರಾಮಪ್ಪ

ಗುರುತಿಸಿ ಅವರಿಗೆ ಅಗತ್ಯವಿರುವ ಕಾನೂನು ಸಲಹೆ, ಉಚಿತ ಕಾನೂನು ನೆರವು ಹಾಗೂ ವಿವಿಧ ಸರ್ಕಾರಿ ಸೌಲಭ್ಯಗಳೊಂದಿಗೆ ಸಂಪರ್ಕ ಕಲ್ಪಿಸುವ ಕಾರ್ಯ ಕೈಗೊಳ್ಳಲಾಗುತ್ತದೆ. ಕಾನೂನು ಸಮಸ್ಯೆಗಳನ್ನು ಹೊಂದಿರುವವರು, ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಆರ್ಥಿಕವಾಗಿ ದುರ್ಬಲರು ಸೇರಿದಂತೆ ಕಾನೂನು ನೆರವಿನ ಅಗತ್ಯವಿರುವ ಅರ್ಹರಿಗೆ ಉಚಿತ ಕಾನೂನು ಸೇವೆ ದೊರೆಯುವಂತೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ ಅವರು ಮಾತನಾಡಿದ, ಗ್ರಾಮೀಣ ಭಾಗದ ಜನ ಈಗಲು ಬಹಿರ್ದೇಸೆಗೆ ಬಯಲನ್ನು ಅವಲಂಬಿಸುತ್ತಿರುವುದು ಶೋಚನೀಯವಾಗಿದೆ. ಜನ ಸರಕಾರದ ಯೋಜನೆಗಳನ್ನು ಸದುಪಯೋಗ ಪಡೆದು ಕೊಂಡು ಮನೆಯಲ್ಲಿ ಪ್ರತಿಯೊಬ್ಬರು ಶೌಚಾಲಯ ಕಟ್ಟಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ರಾಯಚೂರು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಪರ್ವಾ, ರಾಯಚೂರು ಸಿಡಿಪಿಓ ಮನ್ಸೂರ್ ಅಮಹದ್ ಸೇರಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಪ್ರತಿನಿಧಿಗಳು, ಪ್ಯಾರಾ ಲೀಗಲ್ ವಾಲಂಟಿಯರ್‌ಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಗುಂಜಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಡಿಹೆಚ್‌ಓ ಭೇಟಿ ಪರಿಶೀಲನೆ ಸರಕಾರಿ ಆಸ್ಪತ್ರೆಯಲ್ಲಿ ದೊರಕುವ ಸೇವೆಗಳನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಿ: ನಂದಿತಾ

ಪಾಟೀಲ್, ಶುಶ್ರೂಷಣಾಧಿಕಾರಿ ಆರೀಫ್, ಎಲ್‌ಟಿಓ ಸೈಯದ್ ಆರೀಫಾ, ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಹಾಗೂ ತಾಯಂದಿರು, ಸಾರ್ವಜನಕರು ಇದ್ದರು.

ದಲಿತರ ಸರಣಿ ಹತ್ಯೆ, ಅತ್ಯಾಚಾರ: ಸಿಐಡಿ ತನಿಖೆಗೆ ಆಗ್ರಹ

ಆರೋಪಿಸಿದ ಅವರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳನ್ನು ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿದರು.

ಭೂಮಾನಂದ, ಅಶ್ವಿನಿ ಹಾಗೂ ರಾಣೆಮ್ಮ ಅವರ ಪ್ರಕರಣಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ಸಿಐಡಿ ತನಿಖೆಗೆ ವಹಿಸಬೇಕು. ತನಿಖೆ ತ್ವರಿತವಾಗಿ ಪೂರ್ಣಗೊಳಿಸಿ ತಪ್ಪಿತಸ್ಥರಿಗೆ ಕಾನೂನುಬದ್ಧ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಆ.30ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಸದಸ್ಯರು ರಾಯಚೂರು ಜಿಲ್ಲೆಗೆ ಭೇಟಿ ನೀಡಲಿದ್ದು, ಜಿಲ್ಲೆಯಲ್ಲಿನ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು, ತನಿಖೆಯಲ್ಲಿನ ವಿಳಂಬ ಹಾಗೂ ಆಡಳಿತಾತ್ಮಕ ಲೋಪದೋಷಗಳ ಕುರಿತು ಆಯೋಗಕ್ಕೆ ಸಮಗ್ರ ಮಾಹಿತಿ ಹಾಗೂ ದಾಖಲೆಗಳನ್ನು ನೀಡಲಾಗುವುದು ಎಂದು ಕೆ.ಈ. ಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಭೀಮಣ್ಣ ಮಂಚಾಲ್, ಆರ್. ಬಸವರಾಜ್, ಆರ್. ರಾಮಕೃಷ್ಣ, ಶಶಿಧ್ರ, ಬಾಬು, ಪ್ರಾಣೇಶ ಮಂಚಾಲ್ ಹಾಗೂ ನಾಗರಾಜ ಉಪಸ್ಥಿತರಿದ್ದರು.

ಜಿಲ್ಲೆಯಲ್ಲಿ ದಲಿತರ ಕೊಲೆ-ಅತ್ಯಾಚಾರಕ್ಕೆ ಕಡಿವಾಣ ಹಾಕಿ

ಮಾಹಿತಿ ಪಡೆದುಕೊಂಡರೆ ಹಲವು ಘಟನೆಗಳನ್ನು ಮುಂಚಿತವಾಗಿಯೇ ತಡೆಯಬಹುದು ಎಂದರು.

ಹಿಂದೆ ಒಂದು ಹಳ್ಳಿಗೆ ಇಬ್ಬರು ಜಿಪಿಎಸ್ ಆಧಾರಿತ ಬೀಟ್ ಸಿಬ್ಬಂದಿ ವ್ಯವಸ್ಥೆ ಜಾರಿಯಲ್ಲಿತ್ತು. ಆದರೆ ಇದೀಗ ಆ ವ್ಯವಸ್ಥೆ ಇಲ್ಲವಾಗಿದೆ. ಕೇವಲ ಕಾಟಾಚಾರಕ್ಕೆ ಬೀಟ್ ವ್ಯವಸ್ಥೆ ನಡೆಸಿದರೆ ಗ್ರಾಮೀಣ ಪ್ರದೇಶಗಳಲ್ಲಿ ಅಹಿತಕರ ಘಟನೆಗಳನ್ನು ತಡೆಯಲು ಹೇಗೆ ಸಾಧ್ಯ? ಎಂದು ಅವರು ಪ್ರಶ್ನಿಸಿದರು.

ಅಶ್ವಿನಿ ಪ್ರಕರಣದಲ್ಲಿ ಕರ್ತವ್ಯಲೋಪದ ಆರೋಪದಡಿ ಸಿರವಾರ ಠಾಣೆಯ ನಾಲ್ವರು ಸಿಬ್ಬಂದಿಯನ್ನು ಅಮಾನತುಗೊಳಿಸಿರುವ ಬೆಳವಣಿಗೆಯೂ ಪೊಲೀಸ್ ವ್ಯವಸ್ಥೆಯ ಕಾರ್ಯವೈಖರಿಯ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಮಾನ್ವಿಯನ್ನು ಬರಪೀಡಿತ ತಾಲೂಕು ಎಂದು ಘೋಷಿಸಿ

ಬರ ಪರಿಸ್ಥಿತಿಯಲ್ಲಿಯೂ ರಾಜ್ಯ ಸರ್ಕಾರ ಮಾನ್ವಿ ತಾಲೂಕನ್ನು ಬರಪೀಡಿತ ತಾಲೂಕುಗಳ ಪಟ್ಟಿಯಿಂದ ಕೈಬಿಟ್ಟಿರುವುದು ಸರಿಯಲ್ಲ. ಮುಂದಿನ ದಿನಗಳಲ್ಲಿ ಪರಿಸ್ಥಿತಿಯನ್ನು ಪುನಃ ಪರಿಶೀಲಿಸಿ ಮಾನ್ವಿ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸಿ ರೈತರಿಗೆ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ರೈತರಿಂದ ಹಿಂಗಾರು ಜೋಳ ಖರೀದಿಸಿದ್ದರೂ ಇದುವರೆಗೂ ಖರೀದಿ ಹಣವನ್ನು ರೈತರ ಖಾತೆಗಳಿಗೆ ಜಮೆ ಮಾಡಿಲ್ಲ. ಕೂಡಲೇ ರೈತರ ಖಾತೆಗಳಿಗೆ ಹಣ ಜಮೆ ಮಾಡಬೇಕು ಎಂದರು.

ಕೆಳಭಾಗದ ರೈತರಿಗೆ ನೀರು ತಲುಪಿಸಿ

ತುಂಗಭದ್ರಾ ಎಡದಂಡೆ ಕಾಲುವೆಯ ಕೆಳಭಾಗದ ರೈತರಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ. ಅನಧಿಕೃತವಾಗಿ ಅಳವಡಿಸಿರುವ ಪೈಪ್‌ಲೈನ್‌ಗಳನ್ನು ಕೂಡಲೇ ತೆರವುಗೊಳಿಸಿ, ಕಾಲುವೆಯ ನೀರನ್ನು ಕೊನೆಯ ಭಾಗದ ರೈತರಿಗೆ ನ್ಯಾಯಯುತವಾಗಿ ತಲುಪಿಸುವ ವ್ಯವಸ್ಥೆ ಮಾಡಬೇಕು ಎಂದು ಚಾಮರಸ ಮಾಲಿ ಪಾಟೀಲ್ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಪ್ರಭಾಕರ ಪಾಟೀಲ್, ಬೂದಯ್ಯ ಸ್ವಾಮಿ, ಮಲ್ಲಯ್ಯ, ದೇವರಾಜ್ ನಾಯಕ ಸೇರಿದಂತೆ ಹಲವರು ಉಪಸ್ಥಿತರಿದ್ದರು.

02ರಂದು ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ

ಎಸ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಬಾಗಿಯಾಗಲಿದ್ದಾರೆ.

ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಕುರಿತು ಗಂಗಾವತಿ ವಕೀಲರಾದ ನಾಗರಾಜ ಎಸ್. ಅವರು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾದ ಡಾ.ಮೂರ್ತಿ ಎಲ್. ಜಿಲ್ಲಾ ಪ್ರವಾಸ

ರಾಯಚೂರು ಆಗಸ್ಟ್ 29

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾದ ಡಾ.ಮೂರ್ತಿ ಎಲ್. ಅವರು ಆಗಸ್ಟ್ 30 ಹಾಗೂ 31ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಅವರು ಆಗಸ್ಟ್ 30ರ ಬೆಳಿಗ್ಗೆ 8.30 ರಿಂದ ರಾಯಚೂರು ನಗರದಿಂದ ನಿರ್ಗಮಿಸಿ, ಮಧ್ಯಾಹ್ನ 1.45ಕ್ಕೆ ಗಂಟೆಯವರೆಗೆ ದೌರ್ಜನ್ಯ ಪ್ರಕರಣದಲ್ಲಿ ಮೃತಪಟ್ಟ ದೇವದುರ್ಗ ತಾಲೂಕಿನ ಹದ್ದಿನಾಳ, ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮ ಮತ್ತು ಲಿಂಗಸುಗೂರು ತಾಲೂಕಿನ ಕರಡಕಲ್ ಗ್ರಾಮಗಳಿಗೆ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಲಿದ್ದಾರೆ.

ಮಧ್ಯಾಹ್ನ 3ಗಂಟೆಯಿದ ಸಮಾಜ ಕಲ್ಯಾಣ ಇಲಾಖೆಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಭೇಟಿ ನೀಡಲಿದ್ದಾರೆ.

ಆಗಸ್ಟ್ 31ರ ಬೆಳಗ್ಗೆ 10.30ಗಂಟೆಗೆ ರಾಯಚೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಪೊಲೀಸ್ ಅಧೀಕ್ಷಕರು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಂಘ-ಸಸ್ಥೆಯ ಪದಾಧಿಕಾರಿಗಳೊಂದಿಗೆ ಸಭೆ ಮತ್ತು ಅಹ್ವಾಲು ಸ್ವೀಕರಿಸಲಿದ್ದಾರೆ.

ಮಧ್ಯಾಹ್ನ 1.30 ಗಂಟೆಗೆ ಪತ್ರಿಕಾ ಗೋಷ್ಠಿ ನಡೆಸಲಿದ್ದಾರೆ.

ಮಧ್ಯಾಹ್ನ 2.15 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮರ್ಜಾ ಡ್ಯಾಂಗೆ ನೀರು ತುಂಬಿಸುವ ಯೋಜನೆಗೆ ಅಡ್ಡಿ ಆರೋಪ; ರೈತರಿಂದ ಪಾದಯಾತ್ರೆ



ಆಳಂದ,ಆ.29-

ಬೋರಿ ನದಿಯಿಂದ ಅಮರ್ಜಾ ಡ್ಯಾಂಗೆ ನೀರು ತುಂಬಿಸುವ ಪೈಪ್‌ಲೈನ್ ಅನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಅಫಜಲಪುರ ತಾಲೂಕಿನ ಅರ್ಜುಣಗಿ ಬಳಿ ಕಡಿತಗೊಳಿಸಿರುವುದನ್ನು ವಿರೋಧಿಸಿ ಕೆಎಂಎಫ್ ಅಧ್ಯಕ್ಷ ಆರ್.ಕೆ. ಪಾಟೀಲ್ ಅವರ ನೇತೃತ್ವದಲ್ಲಿ ಸಾವಿರಾರು ರೈತರು ಗುರುವಾರ ಪಾದಯಾತ್ರೆ ನಡೆಸಿದರು.

ತಾಲೂಕಿನ ಹಡಲಗಿ ಗ್ರಾಮದ ಶ್ರೀ ಯಲ್ಲಮ್ಮ ದೇವಿ ದೇವಸ್ಥಾನದಿಂದ ಅರ್ಜುಣಗಿ ರಾಷ್ಟ್ರೀಯ ಹೆದ್ದಾರಿವರೆಗೆ ಪಾದಯಾತ್ರೆ ನಡೆಯಿತು. ಬೋರಿ ನದಿಯಿಂದ ಅಮರ್ಜಾ ಡ್ಯಾಂಗೆ ನೀರು ತುಂಬಿಸುವ ಕಾಮಗಾರಿ ಪೂರ್ಣಗೊಂಡು ಪ್ರಗತಿಯಲ್ಲಿರುವ ಹಂತದಲ್ಲಿಯೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಯಾವುದೇ ಮಾಹಿತಿ ನೀಡದೆ ಪೈಪ್‌ಲೈನ್ ಕಡಿತಗೊಳಿಸಿದ್ದಾರೆ ಎಂದು ಆರೋಪಿಸಿ ರೈತರು ಆಕ್ರೋಶ ವ್ಯಕ್ತಪಡಿಸಿದರು.

ಪಾದಯಾತ್ರೆ ವೇಳೆ ಮಾತನಾಡಿದ ಆರ್.ಕೆ. ಪಾಟೀಲ, ಪೈಪ್‌ಲೈನ್ ಕಡಿತಗೊಳಿಸಿರುವುದನ್ನು ಸರಿಪಡಿಸುವಂತೆ ಶಾಸಕ ಬಿ.ಆರ್. ಪಾಟೀಲ ಅವರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನಾಲ್ಕು ಬಾರಿ ಪತ್ರ ಬರೆದಿದ್ದರೂ ಅಧಿಕಾರಿಗಳು ಯಾವುದೇ ಸ್ಪಂದನೆ ನೀಡುತ್ತಿಲ್ಲ ಎಂದು ಆರೋಪಿಸಿದರು. ಈ ಯೋಜನೆಯಿಂದ ಅಫಜಲಪುರ ತಾಲೂಕಿನ 10 ಕೆರೆಗಳಿಗೆ ನೀರು ಒದಗಿಸಲು ಸಾಧ್ಯವಾಗಲಿದ್ದು, ಇದು ರೈತರ ಪಾಲಿಗೆ ಮಹತ್ವದ ಯೋಜನೆಯಾಗಿದೆ. ಹೀಗಾಗಿ ಪೈಪ್‌ಲೈನ್ ಕಡಿತಗೊಳಿಸಿರುವುದನ್ನು ತಕ್ಷಣ ಸರಿಪಡಿಸಿ ಕಾಮಗಾರಿ ಮುಂದುವರಿಸಬೇಕು. ಈ ನಿಟ್ಟಿನಲ್ಲಿ ರೈತರು ಹೋರಾಟಕ್ಕೆ ಸಹಕಾರ ಹಾಗೂ ಬೆಂಬಲ ನೀಡಬೇಕು ಎಂದು ಅವರು ಮನವಿ ಮಾಡಿದರು.

ಪಾದಯಾತ್ರೆಯಲ್ಲಿ ಅಶೋಕ ಸವಳೇಶ್ವರ, ಗುರುಶಾಂತಪ್ಪ ಪಾಟೀಲ, ಶರಣಬಸಪ್ಪ ಭೋಸನೂರ, ಈರಣ್ಣ ಝಳಕಿ, ರೇವಣಸಿದ್ದಪ್ಪ ನಾಗೂರ, ಆದಿನಾಥ ಹೀರಾ, ಸಿದ್ದರಾಮ ಪ್ಯಾಟಿ, ಬಾಬು ಗೊಬ್ಬುರ, ವೀರೇಂದ್ರ ಶೇಗಜಿ, ಆಸಿಫ್ ಮುಲ್ಲಾ ಯಳಸಂಗಿ, ಶ್ರೀಮಂತ ವಾಗದರ್ಗಿ, ಬಸವರಾಜ ಆಳಂದ, ಈರಣ್ಣ ಹತ್ತರಕಿ, ಲಿಂಗರಾಜ ಪಾಟೀಲ, ರೇವಣಪ್ಪ ನಾಗೂರೆ, ಆಲೂಗೌಡ ಪಾಟೀಲ, ಶಿವಕಿರಣ ಪಾಟೀಲ ಸೇರಿದಂತೆ ಸಾವಿರಾರು ರೈತರು ಭಾಗವಹಿಸಿದ್ದರು. ಪಾದಯಾತ್ರೆ ಹಿನ್ನೆಲೆಯಲ್ಲಿ ನಿಂಬರ್ಗಾ ಹಾಗೂ ಮಾದನ ಹಿಪ್ಪರಗಾ ಪೊಲೀಸ್ ಠಾಣೆಗಳ ವತಿಯಿಂದ ಇಂದೂಮತಿ ಹಾಗೂ ಮಹಾಂತೇಶ ಪಾಟೀಲ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.



ನುಲಿಯ ಚಂದಯ್ಯ ಜಯಂತಿ ಆಚರಣೆ

ಕನಕಗಿರಿ,ಆ.29-

ಪಟ್ಟಣದ ಕೊರವರ/ ಭಜಂತ್ರಿ ಸಮಾಜದ ಆಶ್ರಯದಲ್ಲಿ ನುಲಿಯ ಚಂದಯ್ಯ ಅವರ ಜಯಂತಿ ಶುಕ್ರವಾರ ಆಚರಿಸಲಾಯಿತು.

ನುಲಿಯ ಚಂದಯ್ಯ ಅವರ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಮಾಜದ ಅಧ್ಯಕ್ಷ ಚಿದಾನಂದ ಭಜಂತ್ರಿ ಅವರು ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

ನಂತರ ಮಾತನಾಡಿದ ಅವರು ಎಲ್ಲಾ ಸಮಸ್ಯೆಗಳಿಗೆ ಶಿಕ್ಷಣದಿಂದ ಪರಿಹಾರ ನೀಡಲು ಸಾಧ್ಯವಿದೆ ಸಮಾಜದವರು ವೃತ್ತಿ ಜೀವನದ ಜತೆಗೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕೆಂದು ತಿಳಿಸಿದರು.

ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಬೇಕೆಂದು ತಿಳಿಸಿದರು.

ಭಜಂತ್ರಿ ಸಮಾಜದವರು ಶ್ರಮ ಜೀವಿಗಳಾಗಿದ್ದು ಕುಲ ಕಸುಬುಗಳ ಜತೆಗೆ ಹಣ್ಣು ಮಾರಾಟ? ಮಾಡಿ ಜೀವನ ಸಾಗಿಸುತ್ತಿದ್ದಾರೆ, ಸರ್ಕಾರ ಸಾಲ ಸೌಲಭ್ಯಗಳನ್ನು ಒದಗಿಸಬೇಕೆಂದು? ಹೇಳಿದರು.

ಈ ವೇಳೆ ಪ್ರಮುಖರಾದ ಶೇಠ್ ಯಮನಪ್ಪ ಭಜಂತ್ರಿ, ಈರಪ್ಪ ಖ್ಯಾಡೆದ, ಹನುಮಂತಪ್ಪ ಮಾಳಗಿಮನೆ, ಹನುಮಂತಪ್ಪ ಲಸ್ಕರ್, ಲಕ್ಷ್ಮಣ ಭಜಂತ್ರಿ, ವೀರೇಶ ಭಜಂತ್ರಿ, ತಿಮ್ಮಣ್ಣ ಹಸ್ತಮನೆ, ಹುಲಗಪ್ಪ ಖ್ಯಾಡೆದ, ಕೆ. ಹುಲಗಪ್ಪ, ಹುಲಗಪ್ಪ ಮೀನಗಾರ ಇತರರು ಇದ್ದರು.

ಕೊಪ್ಪಳ ತಾಲೂಕಿನಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ



ಕೊಪ್ಪಳ ಆ.29-

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ತಾಲೂಕಿನಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿರುವ ಕುರಿತು ಕೊಪ್ಪಳ ತಾಲೂಕು ಮಟ್ಟದ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆ ಗುರುವಾರ (ಆ.27) ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸಮಿತಿ ಅಧ್ಯಕ್ಷರಾದ ಬಾಲಚಂದ್ರನ್ ಎಸ್. ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಗೃಹಲಕ್ಷ್ಮಿ ಯೋಜನೆ ಕುರಿತು ಮಾಹಿತಿ ನೀಡಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು, ಕೊಪ್ಪಳ ತಾಲೂಕಿನಲ್ಲಿ ಒಟ್ಟು 89,305 ಫಲಾನುಭವಿಗಳಿದ್ದು, ಈ ಪೈಕಿ 83,028 ಫಲಾನುಭವಿಗಳಿಗೆ ಜೂನ್ 2026ರವರೆಗೆ ತಲಾ ರೂ. 2,000 ರಂತೆ ಅನುದಾನ ಜಮೆಯಾಗಿದೆ ಎಂದು ತಿಳಿಸಿದರು.

ಸಮಿತಿ ಸದಸ್ಯರಾದ ಜ್ಯೋತಿ ಗೊಂಡಬಾಳ ಮಾತನಾಡಿ, ವಿವಿಧ ವಾರ್ಡ್ಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಗೃಹಲಕ್ಷ್ಮಿ ಯೋಜನೆಗೆ ಹೊಸ ಅರ್ಜಿಗಳನ್ನು ಸಲ್ಲಿಸುವಂತೆ ಸಾರ್ವಜನಿಕರಿಗೆ ಮಾಹಿತಿ ನೀಡುತ್ತಿದ್ದಾರೆ. ಈ ಕುರಿತು ಕಾರ್ಯಕರ್ತೆಯರಿಗೆ ಸ್ಪಷ್ಟ ಮಾರ್ಗದರ್ಶನ ನೀಡಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಅಧಿಕಾರಿಗಳು, ಹೊಸ ಅರ್ಜಿಗಳನ್ನು ಸ್ವೀಕರಿಸುವ ಕುರಿತು ಇಲಾಖೆಯಿಂದ ಯಾವುದೇ ನಿರ್ದೇಶನ ಬಂದಿಲ್ಲ ಎಂದು ಸ್ಪಷ್ಟಪಡಿಸಿದರು.

ಕೊಪ್ಪಳ ತಾಲೂಕಿನಲ್ಲಿ 1,913 ಗೃಹಲಕ್ಷ್ಮಿ ಫಲಾನುಭವಿಗಳು ಮೃತಪಟ್ಟಿದ್ದು, ಅವರ ವಿವರಗಳನ್ನು ಅಪ್‌ಡೇಟ್ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ಜುಲೈ ತಿಂಗಳಲ್ಲಿ 13 ಫಲಾನುಭವಿಗಳು ಮೃತಪಟ್ಟಿರುವ ಮಾಹಿತಿಯನ್ನೂ ಸಭೆಗೆ ನೀಡಲಾಯಿತು. ಮೃತ ಫಲಾನುಭವಿಗಳ ಗ್ರಾಮವಾರು ಮಾಹಿತಿಯನ್ನು ಪ್ರತಿ ತಿಂಗಳ ಪ್ರಗತಿ ವರದಿಯಲ್ಲಿ ಮಂಡಿಸುವತೆ ಪಂಚ ಗ್ಯಾರಂಟಿ ಯೋಜನೆಗಳ ತಾಲೂಕು ಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಬಾಲಚಂದ್ರನ್ ಎಸ್. ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗೃಹಜ್ಯೋತಿ ಯೋಜನೆ ಪರಿಶೀಲನೆ: ಗೃಹಜ್ಯೋತಿ ಯೋಜನೆಯ ಪರಿಶೀಲನಾ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು, ಕೊಪ್ಪಳ ತಾಲೂಕಿನಲ್ಲಿ 56,999 ಫಲಾನುಭವಿಗಳಿದ್ದಾರೆ. ಜುಲೈ 2026ರಲ್ಲಿ ರೂ. 2.84 ಕೋಟಿಗೂ ಅಧಿಕ ಸಹಾಯಧನ ವೆಚ್ಚವಾಗಿದ್ದು, ಕೊಪ್ಪಳ ವಿಭಾಗದಲ್ಲಿ ಇದುವರೆಗೆ ರೂ. 91.28 ಕೋಟಿ ವೆಚ್ಚವಾಗಿದೆ ಎಂದು ಜೆಸ್ಕಾಂ ಅಧಿಕಾರಿಗಳು ಮಾಹಿತಿ ನೀಡಿದರು. ಮುನಿರಾಬಾದ್ ಉಪವಿಭಾಗದಲ್ಲಿ 27,914 ಫಲಾನುಭವಿಗಳಿದ್ದು, ಜುಲೈ ತಿಂಗಳಲ್ಲಿ ರೂ. 1.36 ಕೋಟಿಗೂ ಅಧಿಕ ವೆಚ್ಚವಾಗಿದ್ದು, ಇದುವರೆಗೆರೂ. 43.78 ಕೋಟಿ ವೆಚ್ಚವಾಗಿದೆ.

ಶೇ.83ರಷ್ಟು ಫಲಾನುಭವಿಗಳ ಪರಿಶೀಲನಾ ಸರ್ವೆ ಪೂರ್ಣಗೊಂಡಿದ್ದು, ಮುಂದಿನ ತಿಂಗಳಲ್ಲಿ ಸಂಪೂರ್ಣಗೊಳಿಸುವುದಾಗಿ ಅಧಿಕಾರಿಗಳು ತಿಳಿಸಿದರು.

ಪಂಚ ಗ್ಯಾರಂಟಿ ಯೋಜನೆಗಳ ತಾಲೂಕು ಮಟ್ಟದ ಅನುಷ್ಠಾನ ಸಮಿತಿ ಸದಸ್ಯರಾದ ದೇವರಾಜ ನಡುವಿನಮನಿ ಮಾತನಾಡಿ, ಗೃಹಜ್ಯೋತಿ ಯೋಜನೆಯಡಿ ವಿದ್ಯುತ್ ಬಳಕೆಯಲ್ಲಿ ಉಂಟಾಗುವ ವ್ಯತ್ಯಾಸಗಳ ಕುರಿತು ಫಲಾನುಭವಿಗಳಿಗೆ ಲೈನ್‌ಮನ್‌ಗಳ ಮೂಲಕ ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ತಿಳಿಸಿದರು. ಅಲ್ಲದೆ, ವಾರ್ಡ್ಗಳಲ್ಲಿ ವಿದ್ಯುತ್ ಟ್ರಾನ್ಸ್ಫಾರ್ಮರ್‌ಗಳ ಸುತ್ತ ಬೆಳೆದಿರುವ ಗಿಡಗಂಟಿಗಳಿದ ವಿದ್ಯುತ್ ಸರಬರಾಜಿಗೆ ವ್ಯತ್ಯಯವಾಗದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಪಡಿತರ ವಿತರಣೆಯಲ್ಲಿ ಸಮಸ್ಯೆ ನಿವಾರಣೆಗೆ ಸೂಚನೆ: ಎಪಿಎಲ್ ಕಾರ್ಡ್ದಾರರಿಗೆ ಆಹಾರ ಧಾನ್ಯ ವಿತರಣೆ ಇರುವುದಿಲ್ಲ ಎಂಬ ಮಾಹಿತಿ ಸಾರ್ವಜನಿಕರಿಗೆ ತಿಳಿದಿದ್ದರೂ, ಅರ್ಹರು ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಎಪಿಎಲ್ ಕಾರ್ಡ್ಗಳನ್ನು ತ್ವರಿತವಾಗಿ ವಿತರಿಸುವಂತೆ ಅನುಷ್ಠಾನಾಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.

ನ್ಯಾಯಬೆಲೆ ಅಂಗಡಿಗಳ ಮಾಲೀಕರಿಗೆ ಇಲಾಖೆಯಿಂದ ಸಮರ್ಪಕ ಮಾರ್ಗದರ್ಶನ ನೀಡಬೇಕು ಎಂದು ದೇವರಾಜ ನಡುವಿನಮನಿ ಒತ್ತಾಯಿಸಿದರು. ಮೆಹಬೂಬ ಪಾಶಾ ಮಾತನಾಡಿ, ಪಡಿತರ ಪಡೆಯಲು ಬರುವ ಕಾರ್ಡ್ದಾರರಿಗೆ ಸರ್ವರ್ ಬ್ಯುಸಿ ಎಂಬ ಕಾರಣ ನೀಡಿ ಹಿಂದಕ್ಕೆ ಕಳುಹಿಸಲಾಗುತ್ತಿದೆ ಎಂಬ ದೂರುಗಳಿದ್ದು, ಇಂತಹ ಸಮಸ್ಯೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಬಸ್‌ಗಳ ಸ್ವಚ್ಛತೆ, ನಾಮಫಲಕ ಸರಿಪಡಿಸಲು ಸೂಚನೆ: ಸಭೆಯಲ್ಲಿ ಸಾರಿಗೆ ವ್ಯವಸ್ಥೆಯ ಬಗ್ಗೆಯೂ ಚರ್ಚೆ ನಡೆಯಿತು. ಬಸ್‌ಗಳಲ್ಲಿ ಸ್ವಚ್ಛತೆ ಇಲ್ಲದಿರುವುದು ಹಾಗೂ ಮುಂಭಾಗ ಮತ್ತು ಹಿಂಭಾಗದಲ್ಲಿ ಬೇರೆ ಬೇರೆ ನಾಮಫಲಕಗಳಿರುವುದರಿಂದ ಪ್ರಯಾಣಿಕರಿಗೆ ಗೊಂದಲ ಉಂಟಾಗುತ್ತಿದೆ. ಈ ಸಮಸ್ಯೆಗಳನ್ನು ತಕ್ಷಣ ಸರಿಪಡಿಸುವಂತೆ ಸಮಿತಿ ಸದಸ್ಯರಾದ ಮೆಹಬೂಬ ಪಾಶಾ ತಿಳಿಸಿದರು.

ಕೊಪ್ಪಳ ವಿಭಾಗದ ಬಸ್‌ಗಳು ಟಣಕನಕಲ್ ಮೊರಾರ್ಜಿ ಶಾಲೆಯ ಬಳಿ ನಿಲುಗಡೆ ಮಾಡುವಂತೆ ಸೂಚಿಸಲಾಯಿತು. ಸದಸ್ಯ ಲಕ್ಷ್ಮಣ ಡೊಳ್ಳಿನ ಮಾತನಾಡಿ, ಜಿಲ್ಲಾಸ್ಪತ್ರೆ ಸ್ಥಳಾಂತರಗೊಂಡಿರುವ ಹಿನ್ನೆಲೆಯಲ್ಲಿ ಕೊಪ್ಪಳ ಡಿಪೋಗೆ ಸೇರಿದ ಬಸ್‌ಗಳು ಬೈಪಾಸ್ ಮೂಲಕ ತೆರಳದೆ ಜಿಲ್ಲಾಸ್ಪತ್ರೆ ಮುಂಭಾಗ ನಿಲುಗಡೆ ಮಾಡಿ, ಗಿಣಿಗೇರಾ ಮಾರ್ಗವಾಗಿ ಗಂಗಾವತಿಗೆ ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪಂಚ ಗ್ಯಾರಂಟಿ ಯೋಜನೆಗಳ ಪೈಕಿ ನಾಲ್ಕು ಯೋಜನೆಗಳು ಸಾರ್ವಜನಿಕರಿಗೆ ಸಮರ್ಪಕವಾಗಿ ತಲುಪುತ್ತಿದ್ದು, ಯುವನಿಧಿ ಯೋಜನೆ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಅನುಷ್ಠಾನವಾಗುತ್ತಿಲ್ಲ ಎಂದು ಸಮಿತಿ ಸದಸ್ಯರಾದ ಜ್ಯೋತಿ ಗೊಂಡಬಾಳ ಅವರು ಹೇಳಿದರು.

ಯುವನಿಧಿ ಕುರಿತು ಗ್ರಾಮವಾರು ಹಾಗೂ ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿರುವ ಬಗ್ಗೆ ಮಾಹಿತಿ ಕೇಳಿದಾಗ, ಗಂಗಾವತಿ ಮತ್ತು ಕುಷ್ಟಗಿ ಪಟ್ಟಣಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ಕೊಪ್ಪಳದಲ್ಲಿ ಕಾರ್ಯಕ್ರಮಕ್ಕೆ ದಿನಾಂಕ ನಿಗದಿಯಾದ ಕೂಡಲೇ ಎಲ್ಲ ಸಮಿತಿ ಸದಸ್ಯರಿಗೆ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸಭೆಯಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಅನುಷ್ಠಾನ ಸಮಿತಿ ಸದಸ್ಯರಾದ ದೇವರಾಜ ನಡುವಲಮನಿ, ಸವಿತಾ ಗೊರಂಟ್ಲಿ, ಪರಶುರಾಮು ಕೊರವರ, ಮೆಹಬೂಬ ಪಾಶಾ, ಜ್ಯೋತಿ ಗೊಂಡಬಾಳ, ಲಕ್ಷ್ಮಣ ಡೊಳ್ಳಿನ, ಅನ್ನದಾನಸ್ವಾಮಿ, ಆನಂದ ಹಿರೇಕಾಸನಕಂಡಿ, ಅನ್ವರ ಹುಸೇನ ಗಡಾದ, ಪಂಚ ಗ್ಯಾರಂಟಿ ಯೋಜನೆಗಳ ಇಲಾಖಾಧಿಕಾರಿಗಳು ಹಾಗೂ ತಾಲೂಕು ಪಂಚಾಯಿತಿ ಸಿಬ್ಬಂದಿ ಉಪಸ್ಥಿತರಿದ್ದರು.

ಹವಾಮಾನ ಸ್ನೇಹಿ, ಸುಸ್ಥಿರ ಭತ್ತದ ಕೃಷಿಗೆ ರೈತರು ಮುಂದಾಗಬೇಕು- ಡಾ.ಪ್ರಮೋದ ಕಟ್ಟಿ



ಕೊಪ್ಪಳ,ಆ.29-

ಜಾಗತಿಕ ತಾಪಮಾನ ಏರಿಕೆ, ಬರ ಹಾಗೂ ಪ್ರವಾಹದಂತಹ ಹವಾಮಾನ ವೈಪರೀತ್ಯಗಳಿಂದ ಕೃಷಿ ಕ್ಷೇತ್ರದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದ್ದು, ರೈತರು ಹವಾಮಾನ ಸ್ನೇಹಿ ಹಾಗೂ ಸುಸ್ಥಿರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ಎಂಪ್ರಿ, ಬೆಂಗಳೂರಿನ ನಿರ್ದೇಶಕ ಡಾ. ಪ್ರಮೋದ ಕಟ್ಟಿ ಕರೆ ನೀಡಿದರು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳದಲ್ಲಿ ಪ್ರಾಜೆಕ್ಟ್ ಸಮೃದ್ಧಿ ಸಹಯೋಗದೊಂದಿಗೆ ಆಗಸ್ಟ್ 27ರಂದು ಆಯೋಜಿಸಿದ್ದ ಹವಾಮಾನ ಸ್ನೇಹಿ ಮತ್ತು ಸುಸ್ಥಿರ ಭತ್ತದ ಕೃಷಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭತ್ತದ ಬೆಳೆಯಲ್ಲಿ ನೀರನ್ನು ಆರಿಸಿ ಬಿಡುವ ಪದ್ಧತಿ ಅಳವಡಿಸಿಕೊಂಡರೆ ನೀರಿನ ಬಳಕೆಯನ್ನು ಕಡಿಮೆ ಮಾಡುವುದರ ಜೊತೆಗೆ ರೋಗ ಮತ್ತು ಕೀಟಗಳ ಬಾಧೆಯನ್ನು ತಗ್ಗಿಸಬಹುದು.

ಅಲ್ಲದೆ, ಗದ್ದೆಗಳಿಂದ ವಾತಾವರಣಕ್ಕೆ ಬಿಡುಗಡೆ ಯಾಗುವ ಮೀಥೇನ್ ಅನಿಲದ ಪ್ರಮಾಣವನ್ನೂ ಕಡಿಮೆ ಮಾಡಬಹುದು ಎಂದು ಅವರು ತಿಳಿಸಿದರು.

ಸ್ಪ್ರಿಂಗ್ ಬಯೋ ಕಂಪನಿಯ ಬೆಂಗಳೂರು ಪ್ರತಿನಿಧಿ ಸಂಗ್ರಾಮ್ ನಾಯಕ್ ಮಾತನಾಡಿ, ಭತ್ತದ ಬೆಳೆಯಲ್ಲಿ ಕ್ಲೀನ್ ರೈಸ್ ಜೈವಿಕ ಉತ್ಪನ್ನ ಬಳಕೆಯಿಂದಾಗುವ ಪ್ರಯೋಜನಗಳ ಕುರಿತು ಮಾಹಿತಿ ನೀಡಿದರು. ಪ್ರಾಜೆಕ್ಟ್ ಸಮೃದ್ಧಿ ಯೋಜನೆಯಡಿ ಕ್ಲೀನ್ ರೈಸ್ ಜೈವಿಕ ಉತ್ಪನ್ನವನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದ್ದು, ಇದರ ಬಳಕೆಯಿಂದ ಮಣ್ಣಿನ ಫಲವತ್ತತೆ ಹಾಗೂ ಭತ್ತದ ಇಳುವರಿ ಹೆಚ್ಚುವುದರೊಂದಿಗೆ ಮೀಥೇನ್ ಅನಿಲದ ಹೊರಸೂಸುವಿಕೆಯೂ ಕಡಿಮೆಯಾಗುತ್ತದೆ ಎಂದರು.

ನ್ಯೂರಿಜೆನ್ ಕಂಪನಿ, ದಾವಣಗೆರೆಯ ನಿರ್ದೇಶಕ ಬಿ.ಪಿ. ಗಂಗಾಧರಸ್ವಾಮಿ ಮಾತನಾಡಿ, ಪ್ರಾಜೆಕ್ಟ್ ಸಮೃದ್ಧಿ ಯೋಜನೆಯು ಕ್ಲೀನ್ ರೈಸ್ ಬಳಕೆಯ ಮೂಲಕ ಭತ್ತದ ಇಳುವರಿಯನ್ನು ಹೆಚ್ಚಿಸುವುದರ ಜೊತೆಗೆ ಹಸಿರುಮನೆ ಅನಿಲಗಳ ಹೊರಸೂಸುವಿಕೆಯನ್ನು ತಗ್ಗಿಸುವ ಉದ್ದೇಶ ಹೊಂದಿದೆ ಎಂದು ವಿವರಿಸಿದರು. ಕ್ಲೀನ್ ರೈಸ್ ಭತ್ತದ ಬೆಳವಣಿಗೆಯನ್ನು ಉತ್ತೇಜಿಸುವ ಹಾಗೂ ಗದ್ದೆಗಳಿಂದ ಬಿಡುಗಡೆಯಾಗುವ ಮೀಥೇನ್ ಅನಿಲವನ್ನು ಕಡಿಮೆಗೊಳಿಸುವ ಜೀವಾಣು ಆಧಾರಿತ ಆಧುನಿಕ ಜೈವಿಕ ಉತ್ಪನ್ನವಾಗಿದೆ ಎಂದು ತಿಳಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಸೋನಿಯಾ ಆತ್ಮಕಥನ ಕುರಿತು ಮೋದಿಗೇಕೆ ಭಯ?

ಸೋನಿಯಾ ಅವರ ಪುಸ್ತಕದಲ್ಲಿ ಏನಿದೆ ಎಂಬುದಕ್ಕಿಂತ, ಅದರಲ್ಲಿ ಏನನ್ನು ಭಾರತೀಯರು ಓದಬಾರದು ಎಂಬುದು ಪ್ರಮುಖ ಪ್ರಶ್ನೆಯಾಗಿದೆ. ಈ ಜಟಿಲ ಪರಿಸ್ಥಿತಿಯಲ್ಲಿ; ಭಾರತದ ಆಳುವವರಿಗೆ ಮುಜುಗರ ಆಗಬಹುದಾದ ಸಂಗತಿಯನ್ನು ದಿಟ್ಟವಾಗಿ ಪ್ರಕಟಿಸಲು ಪ್ರಕಾಶಕರಿಗೆ ಹೆಚ್ಚಿನ ಧೈರ್ಯ ಬೇಕಾಗಿದೆ!

ಒಂದು ಪುಸ್ತಕ ಇನ್ನೂ ಭಾರತೀಯ ಓದುಗರ ಕೈಗೆ ಬಂದಿಲ್ಲ. ಅದರ ಸಂಪೂರ್ಣ ಪಠ್ಯ ಸಾರ್ವಜನಿಕವಾಗಿಲ್ಲ, ಯಾವ ಪುಟದಲ್ಲಿ ಯಾವ ವಾಕ್ಯ ಇದೆ ಎಂಬುದೂ ಬಹುತೇಕರಿಗೆ ಗೊತ್ತಿಲ್ಲ. ಆದರೂ ಆ ಪುಸ್ತಕ ಈಗಾಗಲೇ ರಾಜಕೀಯ ವಲಯದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದೆ. ಆಳುವವರಲ್ಲಿ ಆತಂಕ-ಭಯವನ್ನೂ ಹುಟ್ಟುಹಾಕಿರುವಂತೆಯೂ ತೋರುತ್ತದೆ.

ಸೋನಿಯಾ ಗಾಂಧಿ ಅವರ : ಆತ್ಮಕಥನದ ಭಾರತ ಪ್ರಕಟಣೆ ವಿಚಾರದಲ್ಲಿ ಸುತ್ತುವರಿದಿರುವ ವಿವಾದವು ಕೇವಲ ಪ್ರಕಾಶನ ಒಪ್ಪಂದದ ವೈಫಲ್ಯ ಮಾತ್ರವಲ್ಲ. ಪ್ರಧಾನಿ ನರೇಂದ್ರ ಮೋದಿ, ಮತ್ತು ಚೀನಾ ಗಡಿ ಅತಿಕ್ರಮಣಕ್ಕೆ ಸಂಬಂಧಿಸಿದ ಕೆಲವು ಭಾಗಗಳನ್ನು ಬದಲಾಯಿಸುವ ಅಥವಾ ತೆಗೆದುಹಾಕುವುದರ ಕುರಿತಾದ ಗಂಭೀರ ವಿಚಾರ.

ಆತ್ಮಕಥನದ ಪ್ರಕಟಣೆಗೆ ಮುಂದಾಗಿದ್ದ ಸಂಸ್ಥೆಯು ಪುಸ್ತಕದಲ್ಲಿನ ಪ್ರಮುಖ ವಿಚಾರಗಳನ್ನು ತಿದ್ದಲು, ತಿಳಿಗೊಳಿಸಲು ಹಾಗೂ ತೆಗೆದುಹಾಕಲು ಸೂಚಿಸಿತ್ತು. ಆದರೆ, ಸೋನಿಯಾ ಗಾಂಧಿ ಅದಕ್ಕೆ ಒಪ್ಪದ ಕಾರಣ, ಪ್ರಕಟಣೆಯ ಮಾತುಕತೆ ಮುರಿದುಬಿದ್ದಿದೆ ಎಂದು ವರದಿಗಳು ಹೇಳುತ್ತಿವೆ. ಅಂದರೆ, ಒಂದು ಆತ್ಮಕಥೆಯ ಮೂರು ಅಥವಾ ನಾಲ್ಕು ಭಾಗಗಳು ಆಳುವವರ ಆತಂಕಕ್ಕೆ ಕಾರಣವಾಗಿದೆ.

ಸೋನಿಯಾ ಗಾಂಧಿ ತಮ್ಮ ದೀರ್ಘ ರಾಜಕೀಯ ಜೀವನದಲ್ಲಿ ನೇರವಾಗಿ ಕಂಡದ್ದು, ಅನುಭವಿಸಿದ್ದು ಮತ್ತು ರಾಜಕೀಯವಾಗಿ ಎದುರಿಸಿದ ಘಟನೆಗಳನ್ನು ಆತ್ಮಕಥನದಲ್ಲಿ ಬರೆದಿದ್ದಾರೆ. ಪ್ರಧಾನಿ ಮೋದಿ ಅವರೊಂದಿಗಿನ ತಮ್ಮ ಭೇಟಿಗಳು, ಅವರ ಬಗ್ಗೆ ತಮ್ಮ ಅಭಿಪ್ರಾಯಗಳು, ಹಿಂದಿನ ಪ್ರಧಾನಿಗಳೊಂದಿಗೆ ಮೋದಿಯ ಹೋಲಿಕೆಗಳು ಹಾಗೂ ರಾಜಕೀಯ ಘಟನೆಗಳ ಕುರಿತ ತಮ್ಮ ಮೌಲ್ಯಮಾಪನಗಳನ್ನು ಪುಸ್ತಕದಲ್ಲಿ ದಾಖಲಿಸಿದ್ದಾರೆ. ಜೊತೆಗೆ, ತಮ್ಮನ್ನು ಮೋದಿ ಅವರು ಜರ್ಸಿ ಹಸು ಎಂದು ಮೂದಲಿಸಿದ್ದನ್ನೂ ಉಲ್ಲೇಖಿಸಿದ್ದಾರೆ. ಅದೇ ಕಾರಣಕ್ಕೆ ಪುಸ್ತಕದ ಕೆಲವು ಭಾಗಗಳು ಸಾಮಾನ್ಯ ರಾಜಕೀಯ ಟೀಕೆಗಿಂತ ಹೆಚ್ಚು ಪರಿಣಾಮಕಾರಿಯಾಗಿವೆ. ಇದು ಮೋದಿ ಮತ್ತು ಅವರ ಪಕ್ಷಕ್ಕೆ ಭೀತಿ ಸೃಷ್ಟಿಸಿದೆ.

ರಾಜಕಾರಣಿಯೊಬ್ಬರು ವೇದಿಕೆಯಲ್ಲಿ ಹೇಳುವ ಮಾತು ಒಂದು ದಿನ ಸುದ್ದಿಯಾಗಬಹುದು; ಆದರೆ ಆತ್ಮಕಥೆಯಲ್ಲಿ ಬರೆದಿರುವ ಮಾತು ಬೇರೆ ರೀತಿಯ ರಾಜಕೀಯ ದಾಖಲೆಯಾಗಿ ಉಳಿಯುತ್ತದೆ. ಅದು ಮುಂದಿನ ಪೀಳಿಗೆಗೆ ಇತಿಹಾಸವನ್ನು ವಿವರಿಸುತ್ತದೆ. ಇಂದಿನ ಆಡಳಿತಗಾರರ ಬಗ್ಗೆ ನಾಳೆಯ ಇತಿಹಾಸಕಾರರು ಯಾವ ದಾಖಲೆಗಳನ್ನು ಆಧರಿಸುತ್ತಾರೆ ಎಂಬುದರಲ್ಲಿ ಇಂತಹ ಆತ್ಮಕಥೆಗಳ ಪಾತ್ರ ದೊಡ್ಡದು. ಅದಕ್ಕೇ ಆತ್ಮಕಥೆಗಳು- ವಿಶೇಷವಾಗಿ ಅಧಿಕಾರದಲ್ಲಿರುವವರ ಕುರಿತು ವೈಯಕ್ತಿಕ ಅನುಭವ, ಆಪ್ತ ಭೇಟಿಗಳು, ಸಂಭಾಷಣೆಗಳು ಹಾಗೂ ರಾಜಕೀಯ ಮೌಲ್ಯಮಾಪನಗಳಿದ್ದಾಗ- ಆಳುವವರಿಗೆ ಅಸಹಜ ಆತಂಕ ಸೃಷ್ಟಿಸುತ್ತವೆ.

ಲಭ್ಯ ಮಾಹಿತಿ ಪ್ರಕಾರ, ಸೋನಿಯಾ ತಮ್ಮ ಆತ್ಮಕಥನದಲ್ಲಿ ಭಾರತಚೀನಾ ಸಂಬಂಧ, ಗಡಿ ನುಸುಳುವಿಕೆ ಹಾಗೂ ಅರುಣಾಚಲ ಪ್ರದೇಶ ಸೇರಿದಂತೆ ಭಾರತೀಯ ಭೂಪ್ರದೇಶದ ಮೇಲೆ ಚೀನಾದ ಅತಿಕ್ರಮಣದ ಕುರಿತು ಉಲ್ಲೇಖಿಸಿದ್ದಾರೆ. ಗಾಲ್ವಾನ್ ನಂತರದ ವಾಸ್ತವ ನಿಯಂತ್ರಣ ರೇಖೆಯ ಪರಿಸ್ಥಿತಿ, ಚೀನಾದ ಪ್ರವೇಶಗಳ ಕುರಿತು ವಿರೋಧ ಪಕ್ಷಗಳು ಎತ್ತಿದ ಪ್ರಶ್ನೆಗಳು, ಭಾರತೀಯ ಸೇನೆಯ ಪೆಟ್ರೋಲಿಂಗ್ ಹಕ್ಕುಗಳು, ಸರ್ಕಾರದ ಅಧಿಕೃತ ಹೇಳಿಕೆಗಳು ಹಾಗೂ ನೆಲಮಟ್ಟದ ವಾಸ್ತವ ಚಿತ್ರಣಗಳ ಕುರಿತು ಸೋನಿಯಾ ತಮ್ಮ ಪುಸ್ತಕದಲ್ಲಿ ಚರ್ಚಿಸಿದ್ದಾರೆ.

ಗಮನಾರ್ಹವಾಗಿ, ಕಳೆದೊಂದು ದಶಕದಲ್ಲಿ ''ಭಾರತದ ಭೂಪ್ರದೇಶದಲ್ಲಿ ಚೀನಾ ಎಷ್ಟು ಒಳಬಂದಿದೆ? ತನ್ನದೇ ನೆಲದಲ್ಲಿ ಭಾರತಕ್ಕೆ ಎಷ್ಟು ಪ್ರದೇಶಗಳ ಪ್ರವೇಶ ಕಳೆದುಹೋಗಿದೆ? ವಾಸ್ತವ ನಿಯಂತ್ರಣ ರೇಖೆಯಲ್ಲಿನ ಸ್ಥಿತಿ ಏನು? ಸಂಸತ್ತಿನಲ್ಲಿ ಸಂಪೂರ್ಣ ಚರ್ಚೆ ಯಾಕಿಲ್ಲ'' ಎಂಬ ಪ್ರಶ್ನೆಗಳನ್ನು ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ನಿರಂತರವಾಗಿ ಎತ್ತುತ್ತಿವೆ. ಇಂತಹ ಸಂದರ್ಭದಲ್ಲಿ ಮೂರು ದಶಕಗಳ ರಾಜಕೀಯ ಅನುಭವ ಹೊಂದಿರುವ ಸೋನಿಯಾ ಗಾಂಧಿ ತಮ್ಮ ಆತ್ಮಕಥೆಯಲ್ಲಿ ಚೀನಾ ಪ್ರಶ್ನೆಯನ್ನು ದಾಖಲಿಸಿದ್ದರೆ, ಅದು ಸಾಮಾನ್ಯ ಪಕ್ಷದ ಹೇಳಿಕೆಯಾಗಿ ಉಳಿಯುವುದಿಲ್ಲ, ಅದು ಅವರ ರಾಜಕೀಯ ಸಾಕ್ಷ್ಯವಾಗಿ ಓದಲಾಗುತ್ತದೆ. ಆದಾಗ್ಯೂ, ಈ ಉಲ್ಲೇಖಗಳಿಗೆ ಪೆಂಗ್ವಿನ್ ಇಂಡಿಯಾ ಆಕ್ಷೇಪ ವ್ಯಕ್ತಪಡಿಸಿದೆ.

ಮುಖ್ಯವಾಗಿ, ಸೋನಿಯಾ ಅವರು ಬರೆದಿರುವ ಪರಿಪೂರ್ಣ ಪುಸ್ತಕವನ್ನು ಯಥಾವತ್ತಾಗಿ ಪೆಂಗ್ವಿನ್ ರ್ಯಾಂಡಮ್ ಹೌಸ್‌ನ ಭಾಗವಾಗಿರುವ . ಜಾಗತಿಕವಾಗಿ ಪ್ರಟಿಸುತ್ತಿದೆ. ನವೆಂಬರ್ 10ರಂದು ಪುಸ್ತಕ ಪ್ರಕಟಣೆಗೊಳ್ಳಲಿದೆ. ಆದರೆ, ಪೆಂಗ್ವಿನ್‌ನ ಭಾರತೀಯ ಘಟಕ ಮಾತ್ರವೇ ಆಕ್ಷೇಪಗಳನ್ನು ಎತ್ತಿದೆ. ಇದರ ಹಿಂದೆ, ಮೋದಿ ಸರ್ಕಾರದ ಒತ್ತಡ ಇರುವುದನ್ನು ತಳ್ಳಿಹಾಕಲು ಸಾಧ್ಯವೇ ಇಲ್ಲ!

ಈ ಹಿಂದೆ, ಮಾಜಿ ಸೇನಾ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ಇನ್ನೂ ಪ್ರಕಟವಾಗದ ಆತ್ಮಕಥೆಯ ವಿಷಯದಲ್ಲಿಯೂ ಇದೇ ಪೆಂಗ್ವಿನ್ ಇಂಡಿಯಾ ಪ್ರಕಾಶನ ಸಂಸ್ಥೆ ವಿವಾದಕ್ಕೆ ಸಿಲುಕಿತ್ತು. ಆ ಪುಸ್ತಕದಲ್ಲಿನ ಚೀನಾ ಗಡಿ ಘಟನೆಗಳ ಉಲ್ಲೇಖಗಳು ಸಂಸತ್ತಿನಲ್ಲಿ ದೊಡ್ಡ ಗದ್ದಲಕ್ಕೆ ಕಾರಣವಾಗಿದ್ದವು. ರಾಹುಲ್ ಗಾಂಧಿ ಅದರ ಕೆಲವು ಅಂಶಗಳನ್ನು ಪ್ರಸ್ತಾಪಿಸಲು ಮುಂದಾದಾಗ ವಿರೋಧವೂ ಎದುರಾಗಿತ್ತು. ಇಂತಹ ಘಟನೆಗಳು ಒಂದಕ್ಕೊಂದು ಸೇರಿಕೊಂಡಾಗ, ಸಮಸ್ಯೆ ಒಂದೇ ಪುಸ್ತಕದ ಬಗ್ಗೆಯಲ್ಲ. ಅದರಲ್ಲಿ ಕಟು ವಾಸ್ತವಗಳ ಕುರಿತು ಆಳುವವರಿಗೆ ಇರುವ ಭಯ ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ.

ಆದ್ದರಿಂದಲೇ, ಸೋನಿಯಾ ಅವರ ಪುಸ್ತಕದ ವಿಚಾರದಲ್ಲಿ, ''ಜಗತ್ತಿನಾದ್ಯಂತ ಮುದ್ರಣವಾಗುತ್ತಿರುವ ಪುಸ್ತಕವನ್ನು ಭಾರತದಲ್ಲಿ ಪ್ರಕಟಿಸಲು ಯಾವ ಕಾರಣ ಅಥವಾ ಯಾವ ಒತ್ತಡ ತಡೆಯುತ್ತಿದೆ. ಮೋದಿ ಸರ್ಕಾರದ ಅವಧಿಯಲ್ಲಿ ಚೀನಾ ಭಾರತೀಯ ಭೂಪ್ರದೇಶವನ್ನು ಆಕ್ರಮಿಸಿಕೊಂಡಿರುವ ಕುರಿತು ಬರೆಯಲಾಗಿರುವ ಭಾಗಗಳನ್ನು ತೆಗೆದುಹಾಕುವಂತೆ ಪೆಂಗ್ವಿನ್ ಇಂಡಿಯಾ ಮೇಲೆ ಪ್ರಧಾನಿ ನರೇಂದ್ರ ಮೋದಿ, ಆರ್‌ಎಸ್‌ಎಸ್‌ನಿಂದ ಒತ್ತಡ ಹಾಕಲಾಗಿದೆ'' ಎಂದು ಕಾಂಗ್ರೆಸ್ ನಾಯಕರು ಕೂಡ ಆರೋಪಿಸಿದ್ದಾರೆ.

ಮಿಗಿಲಾಗಿ, ಆತ್ಮಕಥೆ ಎಂದರೆ ಲೇಖಕಿಯ ದೃಷ್ಟಿಕೋನವೇ ಕೇಂದ್ರವಾಗಿರುವ ಕೃತಿ. ಆ ದೃಷ್ಟಿಕೋನವನ್ನೇ ಬದಲಿಸಬೇಕು ಅಥವಾ ತಿಳಿಗೊಳಿಸಬೇಕು ಎಂಬುದು ಪರಿಷ್ಕರಣೆಗಿಂತ ಹೆಚ್ಚಾಗಿ ನಿಯಂತ್ರಣ-ನಿರ್ಬಂಧದ ಪ್ರಶ್ನೆಯಾಗುತ್ತದೆ.

ಒಂದು ವೇಳೆ, ಪುಸ್ತಕದಲ್ಲಿ ಕೆಲವು ಉಲ್ಲೇಖಗಳು ತಪ್ಪಾಗಿದ್ದರೆ ಅದನ್ನು ವಿಮರ್ಶಿಸಬಹುದು. ವಾಸ್ತವದೋಷವಿದ್ದರೆ ದಾಖಲೆಗಳೊಂದಿಗೆ ಬಯಲು ಮಾಡಬಹುದು, ಮಾನಹಾನಿಕರ ಅಂಶವಿದ್ದರೆ ಕಾನೂನಾತ್ಮಕವಾಗಿ ಎದುರಿಸಬಹುದು, ಮೋದಿ ಕುರಿತು ಸೋನಿಯಾ ಗಾಂಧಿ ಬರೆದಿರುವುದು ಪಕ್ಷಪಾತಪೂರ್ಣವೆಂದರೆ ಬಿಜೆಪಿ ತನ್ನ ಪ್ರತಿವಾದವನ್ನು ಪ್ರಕಟಿಸಬಹುದು, ಬಗ್ಗೆ ತಪ್ಪು ಬರಹವಿದ್ದರೆ, ದಾಖಲೆಗಳೊಂದಿಗೆ ಪ್ರತಿಕ್ರಿಯಿಸಬಹುದು ಹಾಗೂ ಚೀನಾ ಕುರಿತು ತಪ್ಪು ಮಾಹಿತಿ ಇದ್ದರೆ ಸರ್ಕಾರ ಅಧಿಕೃತ ದಾಖಲೆಗಳನ್ನು ಬಿಡುಗಡೆ ಮಾಡಬಹುದು. ಇದೇ ಪ್ರಜಾಪ್ರಭುತ್ವದ ಸರಿಯಾದ ವಿಧಾನ.

ಆದರೆ, ಓದುಗರಿಗೆ ತಲುಪುವ ಮೊದಲೇ ಪಠ್ಯವನ್ನು ಸರಳೀಕರಿಸುವುದು ಅಥವಾ ಅಳಿಸುವುದು ಅಕ್ಷಮ್ಯ. ಖಂಡನೀಯ.

ಪ್ರಜಾಪ್ರಭುತ್ವ ಎಂದರೆ, ಎಲ್ಲ ದನಿಗಳಿಗೂ ಮುಕ್ತ ಅಭಿವ್ಯಕ್ತಿಯ ಅವಕಾಶ ಇರಬೇಕು, ವಿಮರ್ಶೆಗೆ ಜಾಗ ಒದಗಿಸಬೇಕು. ಆದರೆ, ಮೋದಿ ಆಡಳಿತದಲ್ಲಿ ನಮಗೆ ಇಷ್ಟವಾದ ಮಾತುಗಳಿಗೆ ಸ್ವಾತಂತ್ರ್ಯ- ವಿರೋಧಿ ಧ್ವನಿಯ ದಮನ ವ್ಯವಸ್ಥಿತವಾಗಿ ನಡೆಯುತ್ತಿದೆ.

ಈಗ, ಸೋನಿಯಾ ಅವರ ಪುಸ್ತಕದಲ್ಲಿ ಏನಿದೆ ಎಂಬುದಕ್ಕಿಂತ, ಅದರಲ್ಲಿ ಏನನ್ನು ಭಾರತೀಯರು ಓದಬಾರದು ಎಂಬುದು ಪ್ರಮುಖ ಪ್ರಶ್ನೆಯಾಗಿದೆ. ಈ ಜಟಿಲ ಪರಿಸ್ಥಿತಿಯಲ್ಲಿ; ಭಾರತದ ಆಳುವವರಿಗೆ ಮುಜುಗರ ಆಗಬಹುದಾದ ಸಂಗತಿಯನ್ನು ದಿಟ್ಟವಾಗಿ ಪ್ರಕಟಿಸಲು ಪ್ರಕಾಶಕರಿಗೆ ಹೆಚ್ಚಿನ ಧೈರ್ಯ ಬೇಕಾಗಿದೆ!

ಮೋದಿ ಸರ್ಕಾರದಿಂದ ಕಾರ್ಪೊರೇಟ್‌ಗಳಿಗೆ 10 ಲಕ್ಷ ಕೋಟಿ ಸಾಲ ಮನ್ನಾ; ಕವಡೆ ಕಾಸಿನ ಪರಿಹಾರವಿಲ್ಲದೆ ನೇಣಿಗೇರಿದ ಲಕ್ಷಾಂತರ ರೈತರು

ಕಳೆದ ಒಂದು ದಶಕದ ಮೋದಿ ಸರ್ಕಾರದ ಆರ್ಥಿಕ ನೀತಿಯು ಬಂಡವಾಳಶಾಹಿಗಳಿಗೆ ಬೆಣ್ಣೆ, ರೈತರಿಗೆ ಸುಣ್ಣ ಎಂಬ ತಾರತಮ್ಯದ ಅಡಿಪಾಯದ ಮೇಲೆ ನಿಂತಿದೆ. ಉದ್ಯಮಿಗಳ ಲಕ್ಷಾಂತರ ಕೋಟಿ ರೂಪಾಯಿಗಳ ಎನ್‌ಪಿಎ ಸುಲಭವಾಗಿ ಲೆಕ್ಕದ ಪುಸ್ತಕದಿಂದ ಅಳಿಸಿಹೋಗುತ್ತಿರುವಾಗ, ಅದೇ ಲೆಕ್ಕದ ಪುಸ್ತಕದಲ್ಲಿರುವ ಕೆಲವು ಸಾವಿರಗಳ ಸಾಲದ ಬಾಕಿ ರೈತನ ಉಸಿರನ್ನೇ ಶಾಶ್ವತವಾಗಿ ಅಳಿಸುತ್ತಿದೆ. ಈ ಕಟು ವಾಸ್ತವವು, ನವ ಭಾರತದ ಅಭಿವೃದ್ಧಿಯ ಹಾದಿಯಲ್ಲಿ ಕಾರ್ಪೊರೇಟ್‌ಗಳು ಮತ್ತು ಬಂಡವಾಳಶಾಹಿಗಳು ಮಾತ್ರ ಲಾಭದ ಫಲಾನುಭವಿಗಳಾಗಿದ್ದು, ದೇಶಕ್ಕೆ ಅನ್ನ ನೀಡುವ ರೈತರು ಮಾತ್ರ ಸಾಲ, ಕಣ್ಣೀರು ಮತ್ತು ಸಾವಿನ ಸುಳಿಯಲ್ಲಿ ಅನಾಥರಾಗಿದ್ದಾರೆ

ಭಾರತದ ಆರ್ಥಿಕತೆಯು ಜಗತ್ತಿನಲ್ಲೇ ವೇಗವಾಗಿ ಬೆಳೆಯುತ್ತಿದೆ ಹಾಗೂ ದೇಶವು ವಿಶ್ವಗುರುವಾಗುವ ಹಾದಿಯಲ್ಲಿದೆ ಎಂದು ಕೇಂದ್ರ ಸರ್ಕಾರ ನಿರಂತರವಾಗಿ ಬೆನ್ನು ತಟ್ಟಿಕೊಳ್ಳುತ್ತಿರುವ ಬೆನ್ನಲ್ಲೇ, ದೇಶದ ಅನ್ನದಾತನ ಬದುಕು ಸಾಲದ ಸುಳಿಗೆ ಸಿಲುಕಿ ಛಿದ್ರವಾಗುತ್ತಿರುವ ಕಟು ವಾಸ್ತವವೊಂದು ಅನಾವರಣಗೊಂಡಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ಶ್ರೀಮಂತ ಕಾರ್ಪೊರೇಟ್ ಕುಳಗಳಿಗೆ, ಉದ್ಯಮಿಗಳಿಗೆ ಹಾಗೂ ಆಪ್ತ ಬಂಡವಾಳಶಾಹಿಗಳಿಗೆ ರತ್ನಗಂಬಳಿ ಹಾಸುತ್ತಿದ್ದರೆ, ದೇಶದ ಬೆನ್ನೆಲುಬಾದ ರೈತ ಕೃಷಿ ಮಾಡಲಾಗದೆ, ಮಾಡಿದ ಸಾಲ ತೀರಿಸಲಾಗದೆ ನೇಣುಹಗ್ಗಕ್ಕೆ ಶರಣಾಗುತ್ತಿದ್ದಾನೆ. ಇತ್ತೀಚಿನ ಸಂಸತ್ತಿನ ದಾಖಲೆಗಳು, ಆರ್‌ಬಿಐ ಅಂಕಿ-ಅಂಶಗಳು ಹಾಗೂ ಎನ್‌ಸಿಆರ್‌ಬಿ ವರದಿಗಳನ್ನು ಒಟ್ಟಾರೆಯಾಗಿ ಕುಲಂಕುಷವಾಗಿ ಗಮನಿಸಿದರೆ, ಇದು ಸರ್ಕಾರದ ಆರ್ಥಿಕ ನೀತಿಯಲ್ಲಿನ ಅಮಾನವೀಯ ದ್ವಂದ್ವ ಮಾನದಂಡವನ್ನು ಜಗಜ್ಜಾಹೀರು ಮಾಡುತ್ತದೆ.

ಸಂಸತ್ತು, ಆರ್‌ಬಿಐ ಮತ್ತು ಆರ್‌ಟಿಐ ಮೂಲಕ ಲಭ್ಯವಾಗಿರುವ ಅಧಿಕೃತ ಅಂಕಿ-ಅಂಶಗಳು ಮೋದಿ ಸರ್ಕಾರದ ಕಾರ್ಪೊರೇಟ್ ಪ್ರೇಮದ ಅಗಾಧತೆಯನ್ನು ಸ್ಪಷ್ಟವಾಗಿ ಬಿಚ್ಚಿಡುತ್ತವೆ. 2014-15ರಿಂದ 2022-23ರವರೆಗೆ ದೇಶದ ವಿವಿಧ ಬ್ಯಾಂಕುಗಳು ಒಟ್ಟು 14.56 ಲಕ್ಷ ಕೋಟಿ ರೂಪಾಯಿಗಳಷ್ಟು ಭಾರಿ ಪ್ರಮಾಣದ ಅನುತ್ಪಾದಕ ಆಸ್ತಿಯನ್ನು (ಎನ್‌ಪಿಎ) ರೈಟ್-ಆಫ್ (ಮನ್ನಾ ಅಥವಾ ಬ್ಯಾಂಕಿನ ಲೆಕ್ಕದ ಪುಸ್ತಕದಿಂದ ಅಳಿಸುವಿಕೆ) ಮಾಡಿವೆ. ಇದರಲ್ಲಿ ಬೃಹತ್ ಕೈಗಾರಿಕೆಗಳು ಮತ್ತು ಸೇವಾ ವಲಯದ ಪಾಲು ಬರೋಬ್ಬರಿ 7.40 ಲಕ್ಷ ಕೋಟಿ ರೂಪಾಯಿಗಳಷ್ಟಿದೆ. ಇನ್ನು 2014ರಿಂದ 2025ರ ಸೆಪ್ಟೆಂಬರ್ 30ರವರೆಗಿನ ರಾಜ್ಯಸಭೆಯಲ್ಲಿ ಸರ್ಕಾರವೇ ನೀಡಿರುವ ಉತ್ತರದ ಪ್ರಕಾರ, ಕೇವಲ ಕಾರ್ಪೊರೇಟ್ ವಲಯದ ಬರೋಬ್ಬರಿ 9.87 ಲಕ್ಷ ಕೋಟಿ ರೂಪಾಯಿಗಳಷ್ಟು ಭಾರಿ ಮೊತ್ತದ ಸಾಲವನ್ನು ಬ್ಯಾಂಕುಗಳು ರೈಟ್-ಆಫ್ ಮಾಡಿವೆ.

ಒಂದು ಕಡೆ ಕಾರ್ಪೊರೇಟ್ ಕಂಪನಿಗಳಿಗೆ ಲಕ್ಷಾಂತರ ಕೋಟಿ ರೂಪಾಯಿಗಳ ರಿಯಾಯಿತಿಯ ಮಳೆ ಸುರಿಸುತ್ತಿರುವ ಕೇಂದ್ರ ಸರ್ಕಾರ, ಬಿಕ್ಕಟ್ಟಿನಲ್ಲಿರುವ ಕೃಷಿ ವಲಯದ ಬಗ್ಗೆ ತೋರಿರುವ ನಿರ್ಲಕ್ಷ್ಯ ನಿಜಕ್ಕೂ ಆಘಾತಕಾರಿಯಾಗಿದೆ. ಕಾರ್ಪೊರೇಟ್ ವಲಯಕ್ಕೆ 9.87 ಲಕ್ಷ ಕೋಟಿ ರೂ. ವಿನಾಯಿತಿ ನೀಡಿರುವ ಇದೇ ಅವಧಿಯಲ್ಲಿ, ಕೃಷಿ ವಲಯಕ್ಕೆ ಹಾಗೂ



ರೈತರಿಗೆ ಸಿಕ್ಕಿರುವ ಸಾಲದ ಪರಿಹಾರ ಕೇವಲ 1.67 ಲಕ್ಷ ಕೋಟಿ ರೂಪಾಯಿ ಮಾತ್ರ. ಕಳೆದ ಐದು ವರ್ಷಗಳ ಅಂಕಿ-ಅಂಶಗಳನ್ನು ಪ್ರತ್ಯೇಕವಾಗಿ ಗಮನಿಸಿದರೂ, ಬ್ಯಾಂಕುಗಳು ಕಾರ್ಪೊರೇಟ್ ಕಂಪನಿಗಳ 3.20 ಲಕ್ಷ ಕೋಟಿ ರೂ. ಸಾಲವನ್ನು ಮನ್ನಾ ಮಾಡಿದ್ದರೆ, ಕೃಷಿ ಮತ್ತು ಪೂರಕ ವಲಯಕ್ಕೆ ಸಿಕ್ಕಿದ್ದು ಕೇವಲ 1.18 ಲಕ್ಷ ಕೋಟಿ ರೂ. ಮಾತ್ರ. ಅಂದರೆ, ನೇರ ಲೆಕ್ಕಾಚಾರದಲ್ಲಿ ನೋಡಿದರೆ, ದೇಶದ ಅನ್ನದಾತ ರೈತರಿಗೆ ಹೋಲಿಸಿದರೆ ಕಾರ್ಪೊರೇಟ್ ಕುಳಗಳಿಗೆ ಬ್ಯಾಂಕುಗಳು ಬರೋಬ್ಬರಿ ಮೂರು ಪಟ್ಟು ಹೆಚ್ಚು ವಿನಾಯಿತಿ ನೀಡಿವೆ.

ಬ್ಯಾಂಕುಗಳ ವಸೂಲಾತಿ ಪ್ರಕ್ರಿಯೆ ಮತ್ತು ನಿಯಮಗಳಲ್ಲಿರುವ ತಾರತಮ್ಯವಂತೂ ದಿಗಿಲು ಹುಟ್ಟಿಸುವಂತಿದೆ. ಶ್ರೀಮಂತ ಕಾರ್ಪೊರೇಟ್ ಸಂಸ್ಥೆಗಳು, ಬೃಹತ್ ಉದ್ಯಮಿಗಳು ಸಾವಿರಾರು ಕೋಟಿ ಸಾಲ ಮಾಡಿ ಸುಸ್ತಿದಾರರಾದರೆ, ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಕೋಡ್ () ಅಡಿಯಲ್ಲಿ ಹೇರ್‌ಕಟ್ () ಎಂಬ ಹೆಸರಿನಲ್ಲಿ ಭಾರಿ ರಿಯಾಯಿತಿ ನೀಡಿ ಅವರ ಆಸ್ತಿಗಳನ್ನು ಮತ್ತು ಕಂಪನಿಗಳನ್ನು ದಿವಾಳಿಯಿಂದ ರಕ್ಷಿಸಲಾಗುತ್ತದೆ. ಬ್ಯಾಂಕುಗಳು ಈ ಬಂಡವಾಳಶಾಹಿಗಳ ನಿಯಮಗಳಿಗೆ ತಕ್ಕಂತೆ ಬಾಗಿ ಮಂಡಿಯೂರುತ್ತವೆ. ಆದರೆ, ಅದೇ ಬ್ಯಾಂಕುಗಳು ಐವತ್ತು ಸಾವಿರ, ಒಂದು ಲಕ್ಷ ಸಾಲ ಮಾಡಿದ ಸಣ್ಣ ಮತ್ತು ಅತಿ ಸಣ್ಣ ರೈತನ ಮನೆಗೆ ಮುಲಾಜಿಲ್ಲದೆ ನೋಟಿಸ್ ಅಂಟಿಸಿ, ಆತನ ಟ್ರ್ಯಾಕ್ಟರ್ ಜಪ್ತಿ ಮಾಡಿ, ಸಾರ್ವಜನಿಕವಾಗಿ ಅವಮಾನಿಸಿ ಆತನನ್ನು ಆತ್ಮಹತ್ಯೆಯ ಕಡೆಗೆ ನೂಕುತ್ತಿವೆ. ತಾಂತ್ರಿಕವಾಗಿ ರೈಟ್-ಆಫ್ ಎಂದರೆ ಕಾನೂನಾತ್ಮಕ ಸಾಲಮನ್ನಾ ಅಲ್ಲ, ಅದೊಂದು ಲೆಕ್ಕಪತ್ರದ ಕ್ರಮ ಎಂದು ಸರ್ಕಾರ ಸಮರ್ಥಿಸಿಕೊಳ್ಳುತ್ತವಾದರೂ, ವಾಸ್ತವದಲ್ಲಿ ಇದು ಕಾರ್ಪೊರೇಟ್ ಸುಸ್ತಿದಾರರ ಮೇಲಿನ ಹೊರೆ ಇಳಿಸುವ ಮತ್ತು ಅವರನ್ನು ಬಚಾವು ಮಾಡುವ ತಂತ್ರವೇ ಆಗಿದೆ.

ಈ ಸಾಲದ ಹೊರೆ, ಬ್ಯಾಂಕುಗಳ ಕಿರುಕುಳ ಮತ್ತು ಸಾರ್ವಜನಿಕ ಅವಮಾನ ತಾಳಲಾರದೆ ದೇಶಾದ್ಯಂತ ಅನ್ನದಾತರು ಸದ್ದಿಲ್ಲದೆ ತಮ್ಮ ಜೀವ ಕಳೆದುಕೊಳ್ಳುತ್ತಲೇ ಇದ್ದಾರೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ () ದತ್ತಾಂಶದ ಆಧಾರದ ಮೇಲಿನ ವಿಶ್ಲೇಷಣೆಗಳು ಎದೆಗುಂದಿಸುವಂತಿವೆ. ಮೋದಿ ಸರ್ಕಾರ ಅಧಿಕಾರದಲ್ಲಿದ್ದ 2014-2022ರ ಅವಧಿಯಲ್ಲಿ ಕೃಷಿ ವಲಯದಲ್ಲಿ ಬರೋಬ್ಬರಿ 1,00,474 ಆತ್ಮಹತ್ಯೆಗಳು ನಡೆದಿವೆ. ಅಂದರೆ, ಈ ಎಂಟು ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಪ್ರತಿದಿನ ಸರಾಸರಿ 30 ರೈತರು ಕೃಷಿ ಬಿಕ್ಕಟ್ಟು ಮತ್ತು ಸಾಲದ ಬಾಧೆಗೆ ನೊಂದು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಇದು ಕೇವಲ ಅಂಕಿ-ಅಂಶವಲ್ಲ, ಸರ್ಕಾರದ ಕೃಷಿ ವಿರೋಧಿ ನೀತಿಗಳಿಗೆ ಬಲಿಯಾದ ಅಮಾಯಕ ಜೀವಗಳ ಲೆಕ್ಕಾಚಾರ.

ಪರಿಸ್ಥಿತಿ ವರ್ಷದಿಂದ ವರ್ಷಕ್ಕೆ ಸುಧಾರಿಸುವ ಬದಲು ಮತ್ತಷ್ಟು ಬಿಗಡಾಯಿಸುತ್ತಿರುವುದು ಅಂಕಿ-ಅಂಶಗಳಿಂದ ಸಾಬೀತಾಗಿದೆ. 2022ರ ದತ್ತಾಂಶದ ಪ್ರಕಾರ ದೇಶದಲ್ಲಿ ಪ್ರತಿ ಗಂಟೆಗೆ ಒಬ್ಬ ರೈತ ಅಥವಾ ಕೃಷಿ ಕಾರ್ಮಿಕ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಆ ವರ್ಷ 11,290 ಕೃಷಿ ವಲಯದ ಆತ್ಮಹತ್ಯೆಗಳು ವರದಿಯಾಗಿದ್ದವು. ಇನ್ನು 2024ರ ಇತ್ತೀಚಿನ ಎನ್‌ಸಿಆರ್‌ಬಿ ದತ್ತಾಂಶವು ಕೃಷಿ ವಲಯದ ಬಿಕ್ಕಟ್ಟಿನ ಭೀಕರತೆಯನ್ನು ಬಿಚ್ಚಿಟ್ಟಿದ್ದು, ದೇಶಾದ್ಯಂತ 10,546 ಕೃಷಿ ವಲಯದ ಆತ್ಮಹತ್ಯೆಗಳು ಸಂಭವಿಸಿವೆ. ಕನ್ನಡಿಗರಿಗೆ ಅತ್ಯಂತ ಕಳವಳಕಾರಿ ಸಂಗತಿಯೆಂದರೆ, ದೇಶದಲ್ಲಿ ಅತಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡ ರಾಜ್ಯಗಳ ಪೈಕಿ ಮಹಾರಾಷ್ಟ್ರದ ನಂತರದ ಸ್ಥಾನದಲ್ಲಿ ನಮ್ಮ ಕರ್ನಾಟಕವು ಎರಡನೇ ಸ್ಥಾನದಲ್ಲಿದೆ. ರಾಜ್ಯದ ಕೃಷಿ ವಲಯ ತೀವ್ರ ಸಂಕಷ್ಟದಲ್ಲಿದೆ ಎಂಬುದಕ್ಕೆ ಇದು ಜ್ವಲಂತ ಸಾಕ್ಷಿ.

ಪಂಜಾಬ್‌ನಿಂದ ಹಿಡಿದು ಕರ್ನಾಟಕದವರೆಗೆ ನಡೆಯುತ್ತಿರುವ ರೈತರ ಸರಣಿ ಆತ್ಮಹತ್ಯೆಗಳಿಗೆ ಪ್ರಮುಖ ಕಾರಣ ಸಾಲದ ಸುಳಿ ಮತ್ತು ಸರ್ಕಾರದ ನಿರ್ಲಕ್ಷ್ಯ. ದಿನೇ ದಿನೇ ಗಗನಕ್ಕೇರುತ್ತಿರುವ ಕೃಷಿ ಪರಿಕರಗಳ ಬೆಲೆ, ಹವಾಮಾನ ವೈಪರೀತ್ಯದಿಂದ ಉಂಟಾಗುವ ನಿರಂತರ ಬೆಳೆ ನಷ್ಟ, ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಸಿಗದಿರುವುದು ರೈತರನ್ನು ಆರ್ಥಿಕವಾಗಿ ಹೈರಾಣಾಗಿಸಿದೆ. ಸಾಂಸ್ಥಿಕ ಬ್ಯಾಂಕುಗಳಿಂದ ಸುಲಭವಾಗಿ ಸಾಲ ಸಿಗದೆ, ಖಾಸಗಿ ಲೇವಾದೇವಿಗಾರರ ಮೊರೆ ಹೋಗಿ ಅಸಲು-ಬಡ್ಡಿ ತೀರಿಸಲಾಗದೆ ರೈತರು ನರಳುತ್ತಿದ್ದಾರೆ. ಬೆಳೆ ನಷ್ಟದ ಸಂದರ್ಭದಲ್ಲಿ ಸರ್ಕಾರ ನೀಡುವ ಪರಿಹಾರವೂ ಏನೇನೂ ಸಾಲದಾಗಿದ್ದು, ಸಾಲದ ಕೂಪದಲ್ಲಿ ಸಿಲುಕಿದ ಅನ್ನದಾತ ಅನಿವಾರ್ಯವಾಗಿ ಸಾವಿನ ಕದ ತಟ್ಟುತ್ತಿದ್ದಾನೆ.

ತಮ್ಮ ಸಂಪೂರ್ಣ ಸಾಲಮನ್ನಾ ಮಾಡುವಂತೆ, ಹಾಗೂ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನಾತ್ಮಕ ಖಾತರಿ ನೀಡುವಂತೆ ಆಗ್ರಹಿಸಿ ಲಕ್ಷಾಂತರ ರೈತರು ಚಳಿ, ಮಳೆ, ಬಿಸಿಲೆನ್ನದೆ ದೆಹಲಿಯ ಗಡಿಗಳಲ್ಲಿ ತಿಂಗಳುಗಟ್ಟಲೆ ಐತಿಹಾಸಿಕ ಪ್ರತಿಭಟನೆ ನಡೆಸಿದರು. ಆದರೆ, ಕೇಂದ್ರ ಸರ್ಕಾರ ಮಾತ್ರ ರೈತರ ಸಾಲಮನ್ನಾ ಮಾಡುವ ಯಾವುದೇ ಪ್ರಸ್ತಾವನೆ ತನ್ನ ಮುಂದಿಲ್ಲ ಎಂದು ಸಂಸತ್ತಿನಲ್ಲಿ ಕಡ್ಡಿ ತುಂಡರಿಸಿದಂತೆ ನಿರ್ದಾಕ್ಷಿಣ್ಯವಾಗಿ ಹೇಳಿದೆ. ತಮ್ಮ ಕಾರ್ಪೊರೇಟ್ ಗೆಳೆಯರ ಪರವಾಗಿ ಬ್ಯಾಂಕುಗಳ ನಿಯಮಗಳನ್ನು ಸುಲಭವಾಗಿ ಸಡಿಲಿಸುವ, ರೈಟ್-ಆಫ್ ಮೂಲಕ ಅವರಿಗೆ ನಿರಾಳತೆ ಒದಗಿಸುವ ಸರ್ಕಾರ, ರೈತರ ಜೀವ ಉಳಿಸುವ, ಸಾಲಮನ್ನಾ ಮಾಡುವ ಬೇಡಿಕೆಗಳಿಗೆ ಮಾತ್ರ ಸಂಪೂರ್ಣವಾಗಿ ಕಿವುಡಾಗಿದೆ.

ಕಳೆದ ಒಂದು ದಶಕದ ಮೋದಿ ಸರ್ಕಾರದ ಆರ್ಥಿಕ ನೀತಿಯು ಬಂಡವಾಳಶಾಹಿಗಳಿಗೆ ಬೆಣ್ಣೆ, ರೈತರಿಗೆ ಸುಣ್ಣ ಎಂಬ ತಾರತಮ್ಯದ ಅಡಿಪಾಯದ ಮೇಲೆ ನಿಂತಿದೆ. ಉದ್ಯಮಿಗಳ ಲಕ್ಷಾಂತರ ಕೋಟಿ ರೂಪಾಯಿಗಳ ಎನ್‌ಪಿಎ ಸುಲಭವಾಗಿ ಲೆಕ್ಕದ ಪುಸ್ತಕದಿಂದ ಅಳಿಸಿಹೋಗುತ್ತಿರುವಾಗ, ಅದೇ ಲೆಕ್ಕದ ಪುಸ್ತಕದಲ್ಲಿರುವ ಕೆಲವು ಸಾವಿರಗಳ ಸಾಲದ ಬಾಕಿ ರೈತನ ಉಸಿರನ್ನೇ ಶಾಶ್ವತವಾಗಿ ಅಳಿಸುತ್ತಿದೆ. ಈ ಕಟು ವಾಸ್ತವವು, ನವ ಭಾರತದ ಅಭಿವೃದ್ಧಿಯ ಹಾದಿಯಲ್ಲಿ ಕಾರ್ಪೊರೇಟ್‌ಗಳು ಮತ್ತು ಬಂಡವಾಳಶಾಹಿಗಳು ಮಾತ್ರ ಲಾಭದ ಫಲಾನುಭವಿಗಳಾಗಿದ್ದು, ದೇಶಕ್ಕೆ ಅನ್ನ ನೀಡುವ ರೈತರು ಮಾತ್ರ ಸಾಲ, ಕಣ್ಣೀರು ಮತ್ತು ಸಾವಿನ ಸುಳಿಯಲ್ಲಿ ಅನಾಥರಾಗಿದ್ದಾರೆ.

ವಿಜಯಪುರ ಬೆಲೆ ಏರಿಕೆ: ಲಾಭದ ನಿರೀಕ್ಷೆಯಲ್ಲಿ ರೈತ, ನೀರಾವರಿ ಪ್ರದೇಶದಲ್ಲಿ ಈರುಳ್ಳಿ ನಾಟಿ

ವಿಜಯಪುರ ಜಿಲ್ಲಾದ್ಯಂತ ಕಾಲುವೆ ನೀರು ಹರಿದು ಜಮೀನುಗಳಲ್ಲಿ ಕೃಷಿ ಚಟುವಟಿಕೆ ಗರಿಗೆದರಿರುವ ನಡುವೆ, ಈರುಳ್ಳಿ ದರದಲ್ಲಿನ ಚೇತರಿಕೆ ಕಂಡುಬಂದಿರುವುದು ರೈತರ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸಿದೆ. ಈ ಬಾರಿ ಬೆಳೆ ಕೈಹಿಡಿದು ಶ್ರಮಕ್ಕೆ ತಕ್ಕ ಬೆಲೆ ಸಿಗುವುದೆಂಬ ವಿಶ್ವಾಸದೊಂದಿಗೆ ರೈತರು, ನೀರಾವರಿ ಭಾಗಗಳಲ್ಲಿ ವ್ಯಾಪಕವಾಗಿ ಈರುಳ್ಳಿ ನಾಟಿ ಮಾಡುತ್ತಿದ್ದು, ಉತ್ತಮ ಬೆಳೆ ಮತ್ತು ಸ್ಥಿರ ಬೆಲೆಯ ನಿರೀಕ್ಷೆಯಲ್ಲಿ ಮುಂದಿನ ಹಂಗಾಮಿನತ್ತ ದೃಷ್ಟಿ ನೆಟ್ಟಿದ್ದಾರೆ.

ಈರುಳ್ಳಿ ದರದಲ್ಲಿ ಚೇತರಿಕೆ ಕಂಡುಬರುತ್ತಿರುವ ಬೆನ್ನಲ್ಲೇ ವಿಜಯಪುರ ಜಿಲ್ಲೆಯ ನೀರಾವರಿ ಪ್ರದೇಶದ ರೈತರು ಈರುಳ್ಳಿ ನಾಟಿಗೆ ಒತ್ತು ನೀಡುತ್ತಿದ್ದಾರೆ. ಕಾಲುವೆಗಳಿಗೆ ನೀರು ಹರಿದು ಕೃಷಿ ಚಟುವಟಿಕೆಗಳು ಗರಿಗೆದರಿರುವುದರಿಂದ, ಹಲವು ಗ್ರಾಮಗಳ ಜಮೀನುಗಳಲ್ಲಿ ಈರುಳ್ಳಿ ನಾಟಿಗೆ ಸಿದ್ಧಗೊಳಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ನೀರಾವರಿ ಹಾಗೂ ಖುಷ್ಕಿ ಜಮೀನುಗಳಲ್ಲೂ ಈರುಳ್ಳಿ ಬೆಳೆಯುವುದು ಸಾಮಾನ್ಯ. ಆದರೆ ಈ ಬಾರಿ ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಈರುಳ್ಳಿ ಬಿತ್ತನೆ ಕ್ಷೇತ್ರ ಗಣನೀಯವಾಗಿ ಕುಸಿದಿದೆ. ಮಳೆಯ ನಿರೀಕ್ಷೆಯಲ್ಲಿ ಬಿತ್ತಿದ್ದ ಬೆಳೆ ಹಲವು ಕಡೆ ಮೊಳಕೆಯೊಡೆಯದೆ ಹಾಳಾಗಿದ್ದು, ಮೊಳಕೆಯೊಡೆದಿರುವ ಪ್ರದೇಶಗಳಲ್ಲಿಯೂ ಇಳುವರಿ ಕುಂಠಿತವಾಗಬಹುದೆಂಬ ಆತಂಕ ರೈತರಲ್ಲಿದೆ.

ಇದರ ಪರಿಣಾಮ ಮಾರುಕಟ್ಟೆಯಲ್ಲಿ ಈರುಳ್ಳಿಯ ಬೆಲೆ ಏರುಗತಿಯಲ್ಲಿದ್ದು, ಸದ್ಯ ಗಾತ್ರ ಹಾಗೂ ಗುಣಮಟ್ಟ ಆಧರಿಸಿ ಪ್ರತಿ ಕ್ವಿಂಟಲ್‌ಗೆ ₹3,500ರಿಂದ ₹5,000ರವರೆಗೆ ದರವಿದೆ. ಕನಿಷ್ಠ ₹2,000 ದರವಿದ್ದರೂ ಖರ್ಚು ಸರಿದೂಗಿಸಿಕೊಂಡು ಲಾಭ ಗಳಿಸಬಹುದು ಎಂಬ ಲೆಕ್ಕಾಚಾರ ರೈತರಲ್ಲಿದೆ. ಹೀಗಾಗಿ ನೀರಾವರಿ ಸೌಲಭ್ಯವಿರುವ ರೈತರು ಸದ್ಯ ಈರುಳ್ಳಿ ಬೆಳೆಯತ್ತ ಮುಖ ಮಾಡಿದ್ದಾರೆ.

ಕಾಲುವೆ ವ್ಯಾಪ್ತಿಯಲ್ಲಿ ಚಟುವಟಿಕೆ ಚುರುಕು

ಆಲಮಟ್ಟಿ ಜಲಾಶಯದ ಕೃಷ್ಣಾ ಕಾಲುವೆ ಜಾಲದ ವ್ಯಾಪ್ತಿಯಲ್ಲಿ ಕೃಷಿ ಚಟುವಟಿಕೆಗಳು ವೇಗ ಪಡೆದುಕೊಂಡಿದ್ದು, ಈರುಳ್ಳಿ ನಾಟಿ ಪ್ರಮುಖ ಬೆಳೆಯಾಗಿ ಹೊರಹೊಮ್ಮುತ್ತಿದೆ. ಬಸವನಬಾಗೇವಾಡಿ, ಕೊಲ್ಹಾರ, ನಿಡಗುಂದಿ ಹಾಗೂ ಮುದ್ದೇಬಿಹಾಳ ತಾಲೂಕುಗಳ ಹಲವು ಭಾಗಗಳಲ್ಲಿ ಹಿಂಗಾರು ಹಂಗಾಮಿನಲ್ಲಿ ಈರುಳ್ಳಿ ಬೆಳೆಯುವ ರೈತರ ಸಂಖ್ಯೆ ಅಧಿಕವಾಗಿದೆ.

ತೆಲಗಿ, ಕೂಡಗಿ, ಗೊಳಸಂಗಿ, ಹೆಬ್ಬಾಳ, ಮುಕರ್ತಿಹಾಳ, ಹುಲ್ಲೂರು, ಕಾಳಗಿ, ಉಣ್ಣಿಭಾವಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಈರುಳ್ಳಿ ಬೆಳೆಯುವುದನ್ನೇ ಕೆಲ ರೈತರು ನಿರಂತರ ಕೃಷಿ ಚಟುವಟಿಕೆಯನ್ನಾಗಿ ಮಾಡಿಕೊಂಡಿದ್ದಾರೆ. ಈರುಳ್ಳಿ ಬೀಜ ಆಯ್ಕೆ, ಸಸಿ ಮಡಿ ತಯಾರಿಕೆ, ನಾಟಿ, ನೀರು ಹಾಗೂ ಗೊಬ್ಬರ ನಿರ್ವಹಣೆಯಲ್ಲಿ ಇಲ್ಲಿನ ರೈತರಿಗೆ ಉತ್ತಮ ಅನುಭವವೂ ಇದೆ.



ಬೇಡಿಕೆ

ಮಳೆ ಕೊರತೆಯಿಂದ ಈರುಳ್ಳಿ ಸಸಿ ಮಡಿ ತಯಾರಿಕೆಯೂ ಈ ಬಾರಿ ನಿರೀಕ್ಷಿತ ಪ್ರಮಾಣದಲ್ಲಿ ನಡೆದಿಲ್ಲ. ಹೀಗಾಗಿ ಈಗಾಗಲೇ ಸಿದ್ಧವಾಗಿರುವ ಸಸಿಗಳಿಗೆ ಬೇಡಿಕೆ ಹೆಚ್ಚಾಗಿದೆ. ದೊಡ್ಡ ಸಸಿ ಮಡಿಗೆ ₹3,500ರಿಂದ ₹4,000ರವರೆಗೆ ಹಾಗೂ ಸಣ್ಣ ಮಡಿಗೆ ₹1,000ರಿಂದ ₹1,500ರವರೆಗೆ ದರವಿದೆ. ಒಟ್ಟಾರೆ ಒಂದು ಸಸಿ ಮಡಿಗೆ ಗಾತ್ರಕ್ಕೆ ಅನುಗುಣವಾಗಿ ₹1,000ರಿಂದ ₹4,000ರವರೆಗೆ ಬೆಲೆ ಇದೆ.

ಒಂದು ಎಕರೆ ಈರುಳ್ಳಿ ಬೆಳೆಯಲು ಸಸಿ, ಗೊಬ್ಬರ, ಕಳೆ ನಿಯಂತ್ರಣ, ಕೂಲಿ ಸೇರಿದಂತೆ ಸುಮಾರು ₹50 ಸಾವಿರದಿಂದ ₹60 ಸಾವಿರದವರೆಗೆ ವೆಚ್ಚವಾಗುತ್ತದೆ. ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 80ರಿಂದ 100 ಕ್ವಿಂಟಲ್‌ವರೆಗೆ ಇಳುವರಿ ಪಡೆಯುವ ಸಾಧ್ಯತೆಯಿದ್ದು, ಸಾಮಾನ್ಯವಾಗಿ ಸುಮಾರು 60 ಕ್ವಿಂಟಲ್ ಇಳುವರಿ ದೊರೆಯುತ್ತದೆ.

ಉತ್ತಮ ದರದ ನಿರೀಕ್ಷಯಲ್ಲಿ ಐದು ಎಕರೆ ನಾಟಿ

''ಮಳೆ ಕೊರತೆಯಿಂದ ಜೂನ್‌ಜುಲೈನಲ್ಲಿ ಬಿತ್ತನೆ ಮಾಡಿದ್ದ ಈರುಳ್ಳಿ ಬೆಳೆ ಹಲವು ಕಡೆ ಹಾನಿಗೊಳಗಾಗಿದೆ. ಸಸಿ ಮಡಿ ತಯಾರಿಕೆಯ ಮೇಲೂ ಇದರ ಪರಿಣಾಮ ಬಿದ್ದಿದೆ. ಇದೀಗ ಮಾರುಕಟ್ಟೆಯಲ್ಲಿ ದರ ಹೆಚ್ಚಿರುವುದರಿಂದ ಉಳಿದಿರುವ ಸಸಿಗಳಿಗೆ ಬೇಡಿಕೆ ಹೆಚ್ಚಾಗಿದೆ. ಮುಂದಿನ ದಿನಗಳಲ್ಲೂ ದರ ಉತ್ತಮವಾಗಿರಲಿದೆ ಎಂಬ ನಿರೀಕ್ಷೆಯಲ್ಲಿ ರೈತರು ಹೊಸದಾಗಿ ನಾಟಿ ಮಾಡಲು ಮುಂದಾಗಿದ್ದಾರೆ'' ಎಂದು ರೈತ ವಿಠ್ಠಲ್ ಬಿರಾದಾರ್ ಹೇಳಿದರು..

''ಈ ಬಾರಿ ಮಳೆ ಕೈಕೊಟ್ಟಿದ್ದರಿಂದ ಆರಂಭಿಕ ಹಂತದಲ್ಲೇ ಈರುಳ್ಳಿ ಬೆಳೆ ಹಾನಿಯಾಗಿದೆ. ಇದೀಗ ನೀರಾವರಿ ಸೌಲಭ್ಯವಿರುವ ಜಮೀನಿನಲ್ಲಿ ಈರುಳ್ಳಿ ನಾಟಿ ಮಾಡಲಾಗುತ್ತಿದೆ. ದರ ಉತ್ತಮವಾಗಿರುವುದರಿಂದ ಮುಂದಿನ ಬೆಳೆ ಕೈಹಿಡಿಯುವ ನಿರೀಕ್ಷೆಯಿದೆ. ಇದೇ ಭರವಸೆಯಲ್ಲಿ ನಾನೂ ಐದು ಎಕರೆ ಪ್ರದೇಶದಲ್ಲಿ ಈರುಳ್ಳಿ ನಾಟಿ ಮಾಡುತ್ತಿದ್ದೇನೆ'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಮಿಕರಿಗೆ ಮತ್ತೆ ಕೆಲಸ

ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳು ಕುಂಠಿತಗೊಂಡಿದ್ದರಿಂದ ಕೆಲಕಾಲ ಕೆಲಸದ ಕೊರತೆ ಎದುರಿಸಿದ್ದ ಕೃಷಿ ಕಾರ್ಮಿಕರಿಗೆ ಈರುಳ್ಳಿ ನಾಟಿ ಹೊಸ ಅವಕಾಶ ಕಲ್ಪಿಸಿದೆ. ಕಾಲುವೆ ಹಾಗೂ ನೀರಾವರಿ ಪ್ರದೇಶಗಳಲ್ಲಿ ನಾಟಿ ಕಾರ್ಯ ಭರದಿಂದ ಸಾಗುತ್ತಿರುವುದರಿಂದ ಮಹಿಳಾ ಕೃಷಿ ಕಾರ್ಮಿಕರಿಗೆ ಬೇಡಿಕೆ ಹೆಚ್ಚಾಗಿದೆ.

ಸಸಿ ಮಡಿಯಿಂದ ಸಸಿಗಳನ್ನು ಕೀಳುವುದು, ಗಾತ್ರಕ್ಕೆ ಅನುಗುಣವಾಗಿ ವಿಂಗಡಿಸುವುದು, ಜಮೀನನ್ನು ನಾಟಿಗೆ ಸಿದ್ಧಪಡಿಸುವುದು ಹಾಗೂ ಸಾಲುಗಳಲ್ಲಿ ಸಸಿ ನಾಟಿ ಮಾಡುವ ಕೆಲಸಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ತೊಡಗಿಸಿಕೊಂಡಿದ್ದಾರೆ. ಹೀಗಾಗಿ ಈರುಳ್ಳಿ ದರ ಏರಿಕೆಯ ನಿರೀಕ್ಷೆ ರೈತರ ಜಮೀನಿನಲ್ಲಷ್ಟೇ ಅಲ್ಲ, ಕೃಷಿ ಕಾರ್ಮಿಕರ ಕೈಗೂ ಕೆಲಸ ನೀಡಿದೆ.

ವಿಜಯಪುರ ಜಿಲ್ಲಾದ್ಯಂತ ಕಾಲುವೆ ನೀರು ಹರಿದು ಜಮೀನುಗಳಲ್ಲಿ ಕೃಷಿ ಚಟುವಟಿಕೆ ಗರಿಗೆದರಿರುವ ನಡುವೆ, ಈರುಳ್ಳಿ ದರದಲ್ಲಿನ ಚೇತರಿಕೆ ಕಂಡುಬಂದಿರುವುದು ರೈತರ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸಿದೆ. ಈ ಬಾರಿ ಬೆಳೆ ಕೈಹಿಡಿದು ಶ್ರಮಕ್ಕೆ ತಕ್ಕ ಬೆಲೆ ಸಿಗುವುದೆಂಬ ವಿಶ್ವಾಸದೊಂದಿಗೆ ರೈತರು, ನೀರಾವರಿ ಭಾಗಗಳಲ್ಲಿ ವ್ಯಾಪಕವಾಗಿ ಈರುಳ್ಳಿ ನಾಟಿ ಮಾಡುತ್ತಿದ್ದು, ಉತ್ತಮ ಬೆಳೆ ಮತ್ತು ಸ್ಥಿರ ಬೆಲೆಯ ನಿರೀಕ್ಷೆಯಲ್ಲಿ ಮುಂದಿನ ಹಂಗಾಮಿನತ್ತ ದೃಷ್ಟಿ ನೆಟ್ಟಿದ್ದಾರೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR

ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 229 RNI Number : KNKAN/25/A2770 30-08-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :229 ರಾಯಚೂರು 30-08-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

ಹಗರಣದ ಮುಜುಗರ ತಪ್ಪಿಸಿಕೊಳ್ಳಲು ನಾಗೇಂದ್ರರನ್ನ ರಾಜೀನಾಮೆ ಕೊಡಿಸಿದ್ದಾರೆ: ಕುಮಾರಸ್ವಾಮಿ

ಮಂಡ್ಯ: ಪಕ್ಷಕ್ಕೆ ಮುಜುಗರ ಆಗಬಾರದು ಎಂಬ ಕಾರಣಕ್ಕೆ ಸ್ವ-ಇಚ್ಛೆಯಿಂದ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿರುವುದಾಗಿ ಬಿ.ನಾಗೇಂದ್ರ ಹೇಳಿದ್ದಾರೆ. ಆದರೆ, ಕಾಂಗ್ರೆಸ್‌ಗೆ ಯಾವ ಕಾರಣಕ್ಕೆ ಮುಜುಗರ ಆಗುತ್ತಿದೆ?. ಹಗರಣದ ಮುಜುಗರ ತಪ್ಪಿಸಲು ರಾಜೀನಾಮೆ ಕೊಟ್ಟಿದ್ದಾ? ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

ನಾಗೇಂದ್ರ ರಾಜೀನಾಮೆ ವಿಚಾರವಾಗಿ ನಗರದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಕೇಂದ್ರ ಸಚಿವರು, ನಿನ್ನೆಯ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ ಕುಮಾರಸ್ವಾಮಿಯವರ ಮೇಲೆಯೂ ಆರೋಪ ಇಲ್ವಾ ಎಂದು ನಾಗೇಂದ್ರ ಹೇಳಿದ್ದಾರೆ. ನನ್ನ ಮೇಲೆ ಇರೋದು ರಾಜಕೀಯ ಆರೋಪ. ನಾನು ದುಡ್ಡು ಹೊಡೆದಿದ್ದೇನೆ ಎಂದು ಎಲ್ಲೂ ಹೇಳಿಲ್ಲ. ಕುಮಾರಸ್ವಾಮಿ ಬಾಯಿ ಮುಚ್ಚಿಸಲೆಂದು 14 ವರ್ಷಗಳ ಹಿಂದಿನ ಆರೋಪವನ್ನು ಮುಂದುವರಿಸಿಕೊಂಡು ಹೋಗುವ ಮೂಲಕ ಜೀವಂತವಾಗಿ ಇಟ್ಟುಕೊಂಡು ಬರುತ್ತಿದ್ದಾರೆ. ಕುಮಾರಸ್ವಾಮಿಯ ಬಾಯಿ ಮುಚ್ಚಿಸಲು ಯಾರಿಂದಲೂ ಸಾಧ್ಯವಿಲ್ಲ. ನಾನು ತಪ್ಪು ಮಾಡಿದ್ದರೆ ಮುಖ್ಯಮಂತ್ರಿ ಆಗಿದ್ದಾಗ ಮುಚ್ಚಿಹಾಕಬಹುದಿತ್ತು. ಯಾವುದನ್ನು ಮುಚ್ಚಿ ಹಾಕಿಲ್ಲ. ಹಾಗೆಯೇ ಬಿಟ್ಟಿದ್ದಿನಿ, ತನಿಖೆ ನಡೆಸಲಿ. ಕಾಂಗ್ರೆಸ್ ಹಣ ಹೊಡೆದು ಹಣ ಹಂಚಿದ್ದು, ಅದಕ್ಕೆ ಮುಜುಗರವನ್ನು ತಪ್ಪಿಸಲು ರಾಜೀನಾಮೆ ಕೊಡಿಸಿದ್ದಾರೆ ಎಂದರು.

ಪ್ರಿಯಾಂಕ್ ಖರ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದಾಗ 2022ರಲ್ಲಿ ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಲಾಗಿತ್ತು. 2024ರೊಳಗೆ ಉದ್ಯೋಗಗಳನ್ನು ನೀಡುವ ಬಗ್ಗೆ ತೀರ್ಮಾನ ಮಾಡಲಾಗಿತ್ತು. ಆದರೆ, ಅಕ್ರಮ ನಡೆದಿದ್ದರಿಂದ ಉದ್ಯೋಗಗಳಿಗೆ ನೇಮಕಾತಿ ಪತ್ರ ನೀಡದಂತೆ ಕೆಪಿಎಸ್‌ಸಿ ವರದಿ ನೀಡಿದ ನಂತರವೂ, ಇಲಾಖೆಯ ಮಂತ್ರಿಯಾಗಿ ಉದ್ಯೋಗಗಳಿಗೆ ಹೇಗೆ ನೇಮಕಾತಿ ಪತ್ರ ನೀಡಿದ್ದೀರಿ? ಎಂದು ಪ್ರಶ್ನಿಸಿದರು. ಓಎಂಆರ್ ಶೀಟ್ ತಿದ್ದಿರುವ ಆರೋಪಗಳಿದ್ದಾಗ ಹಾಗೂ ಭ್ರಷ್ಟಾಚಾರ ನಡೆದಿದೆ ಅಂತ ಗೊತ್ತಿದ್ದರೂ, ಅಕ್ರಮದ ಬಗ್ಗೆ ಕೆಪಿಎಸ್‌ಸಿ ವರದಿ ಕೊಟ್ಟ ಬಳಿಕವೂ ನೇಮಕಾತಿ ಪತ್ರ ನೀಡಿದಿರಿ. ಇದಕ್ಕೆ ಉತ್ತರ ನೀಡುವಂತೆ ಕುಮಾರಸ್ವಾಮಿ ಆಗ್ರಹಿಸಿದರು.

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ವಿಚಾರ ಕುರಿತು ಪ್ರತಿಕ್ರಿಯಿಸಿ, ಕಳೆದ ಒಂದು ತಿಂಗಳಿಂದ ತಮಿಳುನಾಡಿಗೆ ನೀರು ಹರಿದು ಹೋಗುತ್ತಿದೆ. ರಾಜ್ಯದ ಹಲವು ಜಲಾಶಯಗಳು ತುಂಬಿಲ್ಲ. ಆದರೆ, ನೀರು ಬಿಡುತ್ತಿದ್ದೇವೆ ಅಂತ ಹೇಳುವ ಧೈರ್ಯ ಕೂಡ ನಿಮಗೆ ಇಲ್ಲ. ಸರಿಯಾದ ರೀತಿಯಲ್ಲಿ ವಕೀಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮರ್ಪಕವಾಗಿ ಮನವರಿಗೆ ಮಾಡಿಕೊಡಿ. ಮೇಕೆದಾಟು ವಿಚಾರ ಅಮೇಲೆ ಮಾತನಾಡೋಣ ಎಂದು



ರಾಜ್ಯ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಕೆಲವು ಕಾಂಗ್ರೆಸ್ ಶಾಸಕರು ನನ್ನ ಮುಂದೆ ಇದ್ದಾಗ ಅಣ್ಣ ಎಂದು ಕರೆಯುತ್ತಾರೆ. ಮಾಧ್ಯಮಗಳ ಮುಂದೆ ಕುಮಾರಸ್ವಾಮಿ ಏನು ಕೆಲಸ ಮಾಡಿದ್ದಾರೆ ಎಂದು ಪ್ರಶ್ನಿಸುತ್ತಾರೆ. ಯಾರೆಲ್ಲ ಮಾತನಾಡುತ್ತಿದ್ದಾರೋ ಮಾತನಾಡಲಿ, ನಾನು ರಾಜಕೀಯ ಮಾಡುವುದಿಲ್ಲ. ಕಾಲವೇ ಎಲ್ಲವನ್ನು ನಿರ್ಧರಿಸುತ್ತದೆ. ಜಿಲ್ಲೆಯ ಜನರ ಆಕಾಂಕ್ಷೆಗಳನ್ನು ಈಡೇರಿಸಲು ನಾನು ಕೆಲಸ ಮಾಡುತ್ತೇನೆ ಎಂದು ಅವರು ಹೇಳಿದರು. ಇದೇ ವೇಳೆ ಜಿಲ್ಲೆಗೆ ಸಕ್ಕರೆ ಕಾರ್ಖಾನೆ ತರುವ ಬಗ್ಗೆಯೂ ಮಾತನಾಡಿದರು.

ಜಿಲ್ಲೆಯ ಸಮಸ್ಯೆಗಳ ಕುರಿತು ಅಧಿಕಾರಿಗಳೊಂದಿಗೆ ನಡೆದ ಸಭೆಯ ಬಳಿಕ ಮಾತನಾಡಿದ ಕೇಂದ್ರ ಸಚಿವರು, ಅಧಿಕಾರಿಗಳು ಕಾನೂನು ಬದ್ಧವಾಗಿ ಜನರ ಪರ ಕೆಲಸ ಮಾಡಬೇಕು. ರಾಜಕೀಯದವರು ಹೇಳಿದ ರೀತಿ ಮಾಡಬೇಡಿ. ಜವಾಬ್ದಾರಿಯುತವಾಗಿ ಕೆಲಸ ಮಾಡುವಂತೆ ಸಲಹೆ ನೀಡಿದರು.

ಸಚಿವ ಬಾಲಕೃಷ್ಣ ಹೇಳಿಕೆ ವಿಚಾರವಾಗಿ ಮಾತನಾಡಿದ ಅವರು, ಬಾಲಕೃಷ್ಣಗೆ ಉತ್ತರ ಕೊಡುವ ಅವಶ್ಯಕತೆ ಇಲ್ಲ. ಫೋನ್ ಟ್ಯಾಪ್ ಮಾಡೋದು ನನ್ನ ಕೆಲಸನಾ?. ನನ್ನ ವಿರುದ್ಧ ದಾಖಲೆಗಳನ್ನು ಬಿಡುಗಡೆ ಮಾಡಿ ಮಾತನಾಡಲಿ. ನಾನೇಕೆ ಫೋನ್ ಟ್ಯಾಪ್ ಮಾಡಿಸಬೇಕು? ಎಂದು ಪ್ರಶ್ನಿಸುತ್ತಾ ಹಲವು ವಿಚಾರಗಳನ್ನು ಪ್ರಸ್ತಾಪಿಸಿದರು.

ಕುಮಾರಸ್ವಾಮಿಗೆ ಅಸೂಯೆ ಎಂಬ ಸಿಎಂ ಡಿಕೆ ಶಿವಕುಮಾರ್ ಹೇಳಿಕೆ ವಿಚಾರವಾಗಿ ಮಾತನಾಡಿದ ಅವರು, ನಾನೇಕೆ ಅಸೂಯೆ ಮಾಡಿಕೊಳ್ಳಲಿ?. ಈ ರಾಜಕೀಯ ಜೀವನದಲ್ಲಿ ನಾನು ಎಷ್ಟು ಜನ ಮುಖ್ಯಮಂತ್ರಿಗಳನ್ನು ನೋಡಿಲ್ಲ. ಪ್ರಾಮಾಣಿಕವಾಗಿ ಕೆಲಸ ಮಾಡಿ ಜನರ ಕಷ್ಟ-ಸುಖಕ್ಕೆ ಸ್ಪಂದಿಸಿ ಆಗ ನಾನೇ ಅಭಿನಂದನೆ ಸಲ್ಲಿಸುತ್ತೇನೆ. ಇವರು ಸರಿಯಾಗಿ ಕೆಲಸ ಮಾಡಿದರೆ ನಾನೇಕೆ ಮಾತನಾಡಲಿ? ಎಂದು ಪ್ರಶ್ನಿಸಿದರು.

ಮೂರನೇಯ ಪುಟಕ್ಕೆ

ಮಟಮಾರಿ ಗ್ರಾಮದಲ್ಲಿ ಎನ್‌ಎಎಲ್‌ಎಸ್‌ಎ ಯೋಜನೆಗಳ ಅನುಷ್ಠಾನಕ್ಕೆ ಚಾಲನೆ

ಫಲಾನುಭವಿಗಳು ಯೋಜನೆಯ ಸದುಪಯೊಗ ಪಡಿಸಿಕೊಳ್ಳಬೇಕು: ನ್ಯಾ.ಸಿದ್ದರಾಮಪ್ಪ

ರಾಯಚೂರು ಆಗಸ್ಟ್ 29

ಗ್ರಾಮೀಣ ಭಾಗದ ಜನರ ಜೀವನಮಟ್ಟ ಸುಧಾರಿಸಲು ರಾಷ್ಟಿಯ ಕಾನೂನು ಸೇವಾ ಪ್ರಾಧಿಕಾರ ಶ್ರಮಿಸುತ್ತಿದ್ದು, ಫಲಾನುಭವಿಗಳು ಯೋಜನೆಯ ಸದುಪಯೊಗ ಪಡಿಸಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ.ಸಿದ್ದ ರಾಮಪ್ಪ ಕನಕಟ್ಟೆ ಅವರು ಹೇಳಿದರು.



ಆಗಸ್ಟ್ 28ರ ರಾಯಚೂರು ತಾಲೂಕಿನ ಮಟಮಾರಿ ಗ್ರಾಮದಲ್ಲಿ ಆಯೊಜಿಸಲಾಗಿದ್ದ ಎನ್‌ಎಎಲ್‌ಎಸ್‌ಎ ಯೋಜನೆಗೆ ಚಾಲನೆ ನೀಡಿ, ಅವರು ಮಾತನಾಡಿದರು.

ರಾಷ್ಟಿಯ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ಮಟಮಾರಿ ಗ್ರಾಮವನ್ನು ಪಾಯಲೆಟ್ ಪ್ರೊಜೆಕ್ಟ್ ಆಗಿ ಆಯ್ಕೆ ಮಾಡಲಾಗಿದೆ. ಕಾನೂನು ವಿಭಾಗದ ವಿದ್ಯಾರ್ಥಿಗಳು ಗ್ರಾಮದ ಪ್ರತಿ ಮನೆ ಮನೆಗೂ ತೆರಳಿ ನಾಲ್ಸಾ ಗುರುತಿಸಿರುವ ಶಿಕ್ಷಣ, ಅಂಗವೈಕಲ್ಯ, ಕಾನೂನು ಸೇವೆ, ಸೇರಿದಂತೆ ಹಲವು ಅಂಶಗಳ ಪಟ್ಟಿ ಮಾಡಲಾಗುತ್ತಿದೆ. ಜಿಲ್ಲಾಡಳಿತ ಕೂಡಾ ಈ ಕೆಲಸಕ್ಕೆ ಕೈ ಜೊಡಿಸಿರುವುದು ಸಂತಸ ಮೂಡಿಸಿದೆ ಆರ್ಥಿಕ ಅಥವಾ ಸಾಮಾಜಿಕ ಪರಿಸ್ಥಿತಿಯ ಕಾರಣದಿಂದ ಯಾವುದೇ ವ್ಯಕ್ತಿ ನ್ಯಾಯದಿಂದ ವಂಚಿತರಾಗಬಾರದು ಎಂಬ ಆಶಯದೊಂದಿಗೆ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ಗ್ರಾಮೀಣ ಜನರಿಗೆ ಕಾನೂನು ನೆರವು ತಲುಪಿಸುವ ಗುರಿ: ಸಮಾಜದ ದುರ್ಬಲ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗೆ ಉಚಿತ ಕಾನೂನು ನೆರವು, ಕಾನೂನು ಅರಿವು ಮತ್ತು ನ್ಯಾಯಕ್ಕೆ ಸುಲಭ ಪ್ರವೇಶ ಕಲ್ಪಿಸುವುದು ಎನ್‌ಎಎಲ್‌ಎಸ್‌ಎ ಯೋಜನೆಗಳ ಪ್ರಮುಖ ಉದ್ದೇಶವಾಗಿದೆ. ಈ ಯೋಜನೆಗಳ ಪ್ರಯೋಜನ ಕೇವಲ ಜಿಲ್ಲಾ ಅಥವಾ ತಾಲೂಕು ಕೇಂದ್ರಗಳಿಗೆ ಸೀಮಿತವಾಗದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಅರ್ಹ ಜನರಿಗೂ ತಲುಪಬೇಕು. ಎಂಬ ಉದ್ದೇಶದಿಂದ ಮಟಮಾರಿ ಗ್ರಾಮವನ್ನು ಪೈಲಟ್ ಪ್ರೊಜೆಕ್ಟ್ ಆಗಿ ಆಯ್ಕೆ ಮಾಡಲಾಗಿದೆ.

ಗ್ರಾಮದಲ್ಲಿ ಎನ್‌ಎಎಲ್‌ಎಸ್‌ಎಗೆ ಸಂಬಧಿಸಿದ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಅರ್ಹ ಫಲಾನುಭವಿಗಳನ್ನು

ಮೂರನೇಯ ಪುಟಕ್ಕೆ

ಗುಂಜಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಡಿಹೆಚ್‌ಒ ಭೇಟಿ ಪರಿಶೀಲನೆ

ಸರಕಾರಿ ಆಸ್ಪತ್ರೆಯಲ್ಲಿ ದೊರಕುವ ಸೇವೆಗಳನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಿ: ನಂದಿತಾ

ರಾಯಚೂರು,ಆ.29

ರಾಯಚೂರು ತಾಲೂಕಿನ ಗುಂಜಳ್ಳಿ ಪ್ರಾಥಮಿಕ ಅರೋಗ್ಯ ಕೇಂದ್ರಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ನಂದಿತಾ ಎಮ್.ಎನ್. ಅವರು ಆಗಸ್ಟ್ 29ರ ಶನಿವಾರ ದಂದು ಭೇಟಿ ನೀಡಿ, ವಿವಿಧ ವಾರ್ಡ್ಗಳನ್ನು ಪರಿಶೀಲನೆ ನಡಿಸಿದರು.

ಈ ವೇಳೆ ಮಾತನಾಡಿ, ಜಿಲ್ಲೆಯಲ್ಲಿ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗುತ್ತಿರುವ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಸಾರ್ವನಿಕರು ಪಡೆದು ಕೊಳ್ಳುಬೇಕು ಎಂದರು.

ನತರ ಹೆರಿಗೆ ವಾರ್ಡ್ ನಲ್ಲಿ



ಬಾಣಂತಿಯ ಆರೋಗ್ಯ ವಿಚಾರಿಸಿ ನವಜಾತ ಶಿಶುವಿಗೆ ಬೆಚ್ಚಗಿಡಲು ಹಾಗೂ ಆರು ತಿಂಗಳುವರೆಗೆ ಎದೆ ಹಾಲನ್ನು ಮಾತ್ರ ಕುಡಿಸಲು ಹಾಗೂ ಬಾಣಂತಿಗೆ ಯಾವುದೇ ಪತ್ಯವಿಲ್ಲದೆ ಪೌಷ್ಟಿಕಾಹಾರವನ್ನು ಊಣಿಸಲು ಹಾಗೂ ನವಜಾತ ಶಿಶುವಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ಹಾಕಿಸಲು ವಿನಂತಿಸಿದರು.

ನಂತರ ಆಸ್ಪತ್ರೆಯ ಔಷಧ ಕೊಠಡಿ, ಪ್ರಯೋಗಾಲಯ (ಲ್ಯಾಬ್) ಪರಿಶೀಲಿಸಿ, ಆಸ್ಪತ್ರೆಗೆ ಬರುವ ಸಾರ್ವಜನಿಕರಿಗೆ ಇಲಾಖೆಯಡಿ ಒದಗಿಸುವ ವೈದ್ಯಕೀಯ ಸೇವೆಗಳನ್ನು ಯಾವುದೇ ನ್ಯೂನ್ಯತೆಯಿಲ್ಲದೆ ಒದಗಿಸಲು ಹಾಗೂ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯವರು ಸೌಜನ್ಯದಿಂದ ವರ್ತಿಸಲು ತಿಳಿಸಿದರಲ್ಲದೆ ತಾಯಿ-ಮಕ್ಕಳ ಆರೋಗ್ಯ ಕಾರ್ಯಕ್ರಮದಡಿ ಅಗತ್ಯ ಔಷಧಗಳು, ಲಸಿಕೆಗಳು ಹಾಗೂ ನಾಯಿ ಕಡಿತ ಮತ್ತು ಹಾವು ಕಡಿತಕ್ಕೆ ನೀಡುವ ಜೀವರಕ್ಷಕ ಔಷಧಗಳನ್ನು ಆಸ್ಪತ್ರೆಯಲ್ಲಿ ಸದಾ ದಾಸ್ತಾನು ಇರಿಸಿಕೊಳ್ಳಲು ಸಂಬಧಿಸಿದ ಅಧಿಕಾರಿಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸೂಚಿಸಿದರು.

ಇದೇ ಸಂದರ್ಭದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ ಸತೀಶ್, ವೈದ್ಯಾಧಿಕಾರಿ ಡಾ ಸುಚಿತ್

ಮೂರನೇಯ ಪುಟಕ್ಕೆ

ದಲಿತರ ಸರಣಿ ಹತ್ಯೆ, ಅತ್ಯಾಚಾರ: ಸಿಐಡಿ ತನಿಖೆಗೆ ಆಗ್ರಹ

ರಾಯಚೂರು,ಆ.29-

ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಕಳೆದ ಒಂದು ತಿಂಗಳ ಅವಧಿಯಲ್ಲಿ ದಲಿತ ಸಮುದಾಯದವರ ಮೇಲೆ ನಡೆದಿರುವ ಸರಣಿ ಹತ್ಯೆ, ಅತ್ಯಾಚಾರ ಹಾಗೂ ದೌರ್ಜನ್ಯ ಪ್ರಕರಣಗಳು ಜಿಲ್ಲೆಯ ಜನರಲ್ಲಿ ಆತಂಕ ಮೂಡಿಸಿದ್ದು, ಭೂಮಾನಂದ, ಅಶ್ವಿನಿ ಹಾಗೂ ರಾಣೆಮ್ಮ ಪ್ರಕರಣಗಳನ್ನು ಸಿಐಡಿಗೆ ವಹಿಸಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ಕಾರ್ಯಾಧ್ಯಕ್ಷ ಕೆ.ಈ. ಕುಮಾರ್ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವದುರ್ಗ ತಾಲೂಕಿನ



ಹದ್ದಿನಾಳ ಗ್ರಾಮದ ದಲಿತ ಯುವಕ ಭೂಮಾನಂದ ಹತ್ಯೆ, ಸಿರವಾರ ತಾಲೂಕಿನ ಹೋಕ್ರಾಣಿ ಗ್ರಾಮದ ಯುವತಿ ಅಶ್ವಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಹಾಗೂ ಲಿಂಗ ಸೂಗೂರು ತಾಲೂಕಿನ ಕರಡಕಲ್ ಗ್ರಾಮದ ರಾಣೆಮ್ಮ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳು ಜಿಲ್ಲೆಯ ಕಾನೂನು ಸುವ್ಯವಸ್ಥೆಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿವೆ ಎಂದು ಹೇಳಿದರು.

ಹೋಕ್ರಾಣಿ ಗ್ರಾಮದಲ್ಲಿ ಅಶ್ವಿನಿ ಬಯಲು ಶೌಚಕ್ಕೆ ತೆರಳಿದ್ದ ಸಂದರ್ಭದಲ್ಲಿ ಘಟನೆ ನಡೆದಿರುವುದು ಅತ್ಯಂತ ಗಂಭೀರ ವಿಚಾರ. ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಜಿಲ್ಲೆಯನ್ನು ಬಯಲು ಶೌಚ ಮುಕ್ತ ಎಂದು ಘೋಷಿಸಲಾಗಿದ್ದರೂ, ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳ ವಾಸ್ತವ ಸ್ಥಿತಿ ಹಾಗೂ ಅವುಗಳ ಬಳಕೆಯ ಕುರಿತು ಸಮಗ್ರ ಮರುಪರಿಶೀಲನೆ ನಡೆಸಬೇಕು. ಶೌಚಾಲಯ ನಿರ್ಮಾಣ ಹಾಗೂ ಸಂಬಂಧಿತ ಯೋಜನೆಗಳಿಗೆ ಬಿಡುಗಡೆಯಾದ ಅನುದಾನದ ಬಳಕೆಯ ಕುರಿತು ತನಿಖೆ ನಡೆಸಿ, ಲೋಪ ಕಂಡುಬಂದರೆ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಡಿಸಿಇಆರ್ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯಿಂದ ದೌರ್ಜನ್ಯ ಹಾಗೂ ಅಟ್ರಾಸಿಟಿ ಪ್ರಕರಣಗಳ ತನಿಖೆ ವಿಳಂಬವಾಗುತ್ತಿದೆ ಎಂದು ಆರೋಪಿಸಿದ ಅವರು, ಪ್ರತಿ ತಾಲೂಕಿನಲ್ಲಿ ಡಿಸಿಇಆರ್ ಕಚೇರಿ ಸ್ಥಾಪಿಸಿ ಅಗತ್ಯ ಸಿಬ್ಬಂದಿಯನ್ನು ನೇಮಿಸಬೇಕು. ಅಟ್ರಾಸಿಟಿ ಪ್ರಕರಣಗಳಲ್ಲಿ ತ್ವರಿತ ತನಿಖೆ ಮತ್ತು ಆರೋಪಿಗಳ ಬಂಧನಕ್ಕೆ ಸ್ಥಳೀಯ ಡಿವೈಎಸ್ಪಿಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು ಎಂದು ಒತ್ತಾಯಿಸಿದರು.

ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ನಿರಂತರವಾಗಿ ನಡೆಯುತ್ತಿರುವುದು ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯ ಮೇಲಿನ ವಿಶ್ವಾಸಕ್ಕೆ ಧಕ್ಕೆ ತಂದಿದೆ. ಪೊಲೀಸ್ ಇಲಾಖೆ ಮತ್ತು ಜಿಲ್ಲಾಡಳಿತ ಪ'ರಿಣಾ'ಮ'ಕಾರಿಯಾಗಿ ಕಾ'ರ್ಯನಿರ್ವ'ಹಿಸ'ುವ'ಲ್ಲಿ ವಿಫಲವಾಗಿವೆ ಎಂದು

ಮೂರನೇಯ ಪುಟಕ್ಕೆ

ಜಿಲ್ಲೆಯಲ್ಲಿ ದಲಿತರ ಕೊಲೆ-ಅತ್ಯಾಚಾರಕ್ಕೆ ಕಡಿವಾಣ ಹಾಕಿ



ರಾಯಚೂರು,ಆ.29-

ಜಿಲ್ಲೆಯಲ್ಲಿ ದಲಿತ ಸಮುದಾಯದವರ ಮೇಲೆ ನಡೆಯುತ್ತಿರುವ ಕೊಲೆ, ಅತ್ಯಾಚಾರ ಹಾಗೂ ದೌರ್ಜನ್ಯ ಘಟನೆಗಳು ಇಡೀ ಜಿಲ್ಲೆಯ ಜನತೆಯನ್ನು ಬೆಚ್ಚಿಬೀಳಿಸಿವೆ. ಹದ್ದಿನಾಳದ ಭೀಮಾನಂದ ಕೊಲೆ, ಸಿರವಾರ ತಾಲೂಕಿನ ಹೊಕ್ರಾಣಿಯ ಅಶ್ವಿನಿ ಮೇಲಿನ ಅತ್ಯಾಚಾರ ಕೊಲೆ ಹಾಗೂ ಲಿಂಗಸುಗೂರು ತಾಲೂಕಿನ ತಡಕಲ್ ಗ್ರಾಮದ ರಾಣೆಮ್ಮ ಪ್ರಕರಣಗಳು ಅತ್ಯಂತ ಆತಂಕಕಾರಿ ಬೆಳವಣಿಗೆಗಳಾಗಿದ್ದು, ಇಂತಹ ಅಮಾನವೀಯ ಕೃತ್ಯಗಳನ್ನು ಕರ್ನಾಟಕ ರಾಜ್ಯ ರೈತ ಸಂಘ ತೀವ್ರವಾಗಿ ಖಂಡಿಸುತ್ತದೆ ಎಂದು ಸಂಘದ ರಾಜ್ಯಾಧ್ಯಕ್ಷ ಚಾಮರಸ ಮಾಲಿ ಪಾಟೀಲ್ ಹೇಳಿದರು.

ಜಿಲ್ಲೆಯಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಮೃತರ ಕುಟುಂಬಗಳಿಗೆ ಕೇವಲ ಸಾಂತ್ವನ ಹೇಳುವುದಷ್ಟೇ ಸಾಲದು; ಸರ್ಕಾರ ಭದ್ರತೆ, ಸೂಕ್ತ ಆರ್ಥಿಕ ನೆರವು ಹಾಗೂ ಪುನರ್ವಸತಿ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದರು.

ಕಾಟಾಚಾರದ ಬೀಟ್ ವ್ಯವಸ್ಥೆಯಿಂದ ಅಪರಾಧ ತಡೆಯಲು ಸಾಧ್ಯವೇ?

ಜಿಲ್ಲೆಯ ಪೊಲೀಸ್ ಕಾರ್ಯವೈಖರಿಯಲ್ಲಿ ಬದಲಾವಣೆ ತರುವ ಅಗತ್ಯವಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪರಿಣಾಮಕಾರಿ ಬೀಟ್ ವ್ಯವಸ್ಥೆ ಜಾರಿಗೊಳಿಸಿ ಪೊಲೀಸರು ಜನರೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಗ್ರಾಮಗಳಿಗೆ ನಿಯಮಿತವಾಗಿ ಭೇಟಿ ನೀಡಿ ಸ್ಥಳೀಯ ಸಮಸ್ಯೆಗಳು ಹಾಗೂ ಅಪರಾಧದ ಸಾಧ್ಯತೆಗಳ ಬಗ್ಗೆ

ಮೂರನೇಯ ಪುಟಕ್ಕೆ

ಹಾಸ್ಟೆಲ್‌ನಲ್ಲಿ ದುರ್ಘಟನೆ: ಆಹಾರ ಗುಣಮಟ್ಟದ ಬಗ್ಗೆ ಅಧಿಕಾರಿಗಳು ನಿಗಾ ವಹಿಸಬೇಕು : ಶಾಸಕ ಹಂಪನಗೌಡ ಬಾದರ್ಲಿ



ಸಿಂಧನೂರು: ತಾಲೂಕಿನ ಹಾಸ್ಟೆಲ್‌ನಲ್ಲಿ ನಡೆದ ದುರ್ಘಟನೆಯ ಹಿನ್ನೆಲೆಯಲ್ಲಿ ಸಿಂಧನೂರು ತಾಲೂಕಿನ ಶಾಸಕರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಹಾಸ್ಟೆಲ್‌ಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಹಿರಿಯ ಅಧಿಕಾರಿಗಳು ನಿರಂತರವಾಗಿ ನಿಗಾ ವಹಿಸಬೇಕು ಎಂದು ಅವರು ಸೂಚಿಸಿದ್ದಾರೆ.

ನಗರದ ತಾಯಿ ಮಕ್ಕಳು ಆಸ್ಪತ್ರೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ನೀಡಲಾಗುವ ಆಹಾರದ ಗುಣಮಟ್ಟ ಹಾಗೂ ಅಡುಗೆಗೆ ಬಳಸುವ ಸಾಮಗ್ರಿಗಳ ಬಗ್ಗೆ ವಿಶೇಷ ಗಮನ ಹರಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ತರಕಾರಿಗಳು, ಅಕ್ಕಿ ಸೇರಿದಂತೆ ಅಡುಗೆಗೆ ಬಳಸುವ ಪ್ರತಿಯೊಂದು ಆಹಾರ ಪದಾರ್ಥವನ್ನು ಪರಿಶೀಲಿಸಿದ ನಂತರವೇ ಬಳಕೆ ಮಾಡಬೇಕು. ಆಹಾರ ಪದಾರ್ಥಗಳ ಗುಣಮಟ್ಟದಲ್ಲಿ ಯಾವುದೇ ರೀತಿಯ ನಿರ್ಲಕ್ಷ್ಯ ಕಂಡುಬಂದರೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಶಾಸಕರು ಎಚ್ಚರಿಸಿದ್ದಾರೆ.

ವಿದ್ಯಾರ್ಥಿಗಳ ಆರೋಗ್ಯ ಮತ್ತು ಸುರಕ್ಷತೆ ಅತ್ಯಂತ ಪ್ರಮುಖವಾಗಿದ್ದು, ಹಾಸ್ಟೆಲ್‌ಗಳ ನಿರ್ವಹಣೆಯಲ್ಲಿ ಯಾವುದೇ ಲೋಪವಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ. ಡಾ.ಅಯ್ಯನಗೌಡ. ಡಿವೈಎಸ್ಪಿ ಚಂದ್ರಶೇಖರ್ ನಾಯಕ

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಗ್ರೇಡ್ 2 ನಟರಾಜ್ .ಡಾ.ನಾಗವೇಣಿ. ಖಾಜಿ ಮಲ್ಲಿಕಾ ವಕೀಲರು. ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಇದ್ದರು.

ಜಿಲ್ಲಾಡಳಿತದಿಂದ ಸೆಪ್ಟಂಬರ್ 02ರಂದು ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ

ರಾಯಚೂರು ಆಗಸ್ಟ್ 29

ರಾಯಚೂರಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಕಾರ್ಯಕ್ರಮವನ್ನು ಸೆಪ್ಟಂಬರ್ 02ರ ಬೆಳಿಗ್ಗೆ 11ಕ್ಕೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಅಜಯ್ ಧರ್ಮಸಿಂಗ್ ಅವರು ಉದ್ಘಾಟನೆ ನೆರವೇರಿಸುವರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ ಎಸ್.ತಂಗಡಗಿ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ಎಸ್.ಸಿ, ಎಸ್.ಟಿ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ ಜಿ. ಅವರು ಘನ ಉಪಸ್ಥಿತಿ ವಹಿಸುವರು.

ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎನ್.ಎಸ್.ಬೋಸರಾಜು, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಎಸ್.ಎಸ್.ನಕುಲ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ಪೂವಿತಾ

ಮೂರನೇಯ ಪುಟಕ್ಕೆ

ಜಿಲ್ಲಾಧಿಕಾರಿ ಕಚೇರಿ ಮುಂದೆ ಅನ್ನದಾತರ ಆಕ್ರೋಶ; ರೈತ ಆತ್ಮಹತ್ಯೆಗೆ ಯತ್ನ

ಕಲಬುರಗಿ ,ಆ.29-

ಮುಂಗಾರು ಮಳೆ ಕೊರತೆಯಿಂದ ಬೆಳೆಗಳು ಒಣಗುತ್ತಿದ್ದು, ಜಿಲ್ಲೆಯಲ್ಲಿ ಬರದ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಕಲಬುರಗಿ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸದಿರುವುದನ್ನು ಖಂಡಿಸಿ ಸಂಯುಕ್ತ ಹೋರಾಟ ಕರ್ನಾಟಕ ನೇತೃತ್ವದಲ್ಲಿ ರೈತರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಎದುರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಮುಂಗಾರು ಹಂಗಾಮಿನಲ್ಲಿ ಹೆಸರು, ಉದ್ದು, ಸೋಯಾಬಿನ್, ಎಳ್ಳು ಸೇರಿದಂತೆ ಹಲವು ಬೆಳೆಗಳು ಮಳೆ ಕೊರತೆಯಿಂದ ಹಾನಿಗೀಡಾಗಿವೆ. ಕೆಲ ರೈತರು ಎರಡು ಬಾರಿ ಬಿತ್ತನೆ ಮಾಡಿದ್ದರೂ ಸಮರ್ಪಕ ಮಳೆಯಾಗದೆ ಬೆಳೆ ಕೈಕೊಟ್ಟಿದೆ. ಆಗಸ್ಟ್‌ನಲ್ಲಿ ಸುರಿದ ಅಲ್ಪ ಮಳೆಗೆ ಕೆಲವೆಡೆ ತೊಗರಿ ಬಿತ್ತನೆ ಮಾಡಲಾಗಿದ್ದು, ಇದೀಗ ಬಿಸಿಲಿನ ತಾಪ ಹೆಚ್ಚಾಗಿರುವುದರಿಂದ ಬೆಳೆಗಳು ಬಾಡುತ್ತಿವೆ ಎಂದು ರೈತ ಮುಖಂಡರು ದೂರಿದರು.

ಜಿಲ್ಲೆಯ ಹಳ್ಳ, ಕೊಳ್ಳ ಹಾಗೂ ನಾಲೆಗಳು ಬತ್ತಿದ್ದು, ಬಾವಿ ಮತ್ತು ಕೊಳವೆಬಾವಿಗಳಲ್ಲಿಯೂ ನೀರಿನ ಮಟ್ಟ ಕುಸಿದಿದೆ. ಇದರಿಂದ ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವಿನ ಕೊರತೆ ಎದುರಾಗಿದೆ. ಪರಿಸ್ಥಿತಿಯನ್ನು ಸರ್ಕಾರ ತಕ್ಷಣ ಮರುಪರಿಶೀಲಿಸಿ ಕಲಬುರಗಿ ಜಿಲ್ಲೆಯನ್ನು ಬರಪೀಡಿತವೆಂದು ಘೋಷಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.



ಆತ್ಮಹತ್ಯೆಗೆ ಯತ್ನ: ಪ್ರತಿಭಟನೆ ವೇಳೆ ರೈತನೊಬ್ಬ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಕೆಲಕಾಲ ಆತಂಕಕ್ಕೆ ಕಾರಣವಾಯಿತು. ತಕ್ಷಣ ಮಧ್ಯಪ್ರವೇಶಿಸಿದ ಪೊಲೀಸರು ರೈತನನ್ನು ತಡೆದು ಸುರಕ್ಷಿತವಾಗಿ ಕರೆದೊಯ್ದರು. ರಸ್ತೆ ತಡೆ ನಡೆಸುತ್ತಿದ್ದ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು.

1,000 ಕೋಟಿ ವಿಶೇಷ ಪ್ಯಾಕೇಜ್‌ಗೆ ಒತ್ತಾಯ: ಜಿಲ್ಲೆಯನ್ನು ಬರಪೀಡಿತವೆಂದು ಘೋಷಿಸಿ 1,000 ಕೋಟಿ ವಿಶೇಷ ಪ್ಯಾಕೇಜ್ ಬಿಡುಗಡೆ ಮಾಡಬೇಕು. ಪ್ರತಿ ಎಕರೆಗೆ 50 ಸಾವಿರ ಬರ ಪರಿಹಾರ ನೀಡಬೇಕು. ರಾಷ್ಟ್ರೀಕೃತ ಬ್ಯಾಂಕ್‌ಗಳ ರೈತರ ಸಾಲ ಮನ್ನಾ ಮಾಡಬೇಕು ಅಥವಾ ಸಾಲ ಮರುಪಾವತಿಗೆ ಕಾಲಾವಕಾಶ ವಿಸ್ತರಿಸಬೇಕು ಎಂದು ರೈತ ಮುಖಂಡರು ಆಗ್ರಹಿಸಿದರು.

ಅಲ್ಪಾವಧಿಸಾಲ ಪಡೆಯುವುದು

ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಕರ್ನಾಟಕದ ಪಾಲಿನ 15 ಟಿಎಂಸಿ ನೀರನ್ನು ಬಿಡುಗಡೆ ಮಾಡಿ ಭೀಮಾ ನದಿಗೆ ಹರಿಸಬೇಕು. ಬರ ಕಾಮಗಾರಿಗಳನ್ನು ತಕ್ಷಣ ಆರಂಭಿಸಿ ಗ್ರಾಮೀಣ ಜನರಿಗೆ ಉದ್ಯೋಗ ಕಲ್ಪಿಸಬೇಕು. ಜಾನುವಾರುಗಳಿಗಾಗಿ ಗೋಶಾಲೆ ಹಾಗೂ ಮೇವಿನ ವ್ಯವಸ್ಥೆ ಮಾಡಬೇಕು. ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಬೇಕು ಎಂದು ಒತ್ತಾಯಿಸಿದರು.

ಬೆಳೆ ವಿಮೆ ತಾರತಮ್ಯ ಆರೋಪ:

ಬೆಳೆ ವಿಮೆ ಪರಿಹಾರ ನೀಡುವಲ್ಲಿ ತಾರತಮ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿದ ರೈತ ಮುಖಂಡರು, ವಿಮೆ ಪಡೆಯಲು ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲದ ದೃಢೀಕರಣವನ್ನು ಕಡ್ಡಾಯಗೊಳಿಸಬಾರದು ಎಂದು ಒತ್ತಾಯಿಸಿದರು. ಬೆಳೆ ಹಾನಿಗೊಳಗಾದ ಎಲ್ಲ ರೈತರಿಗೆ ವಿಮೆ ಪರಿಹಾರ ನೀಡಬೇಕು. ಎರಡನೇ ಕಂತಿನ ವಿಮೆ ಹಣದಿಂದ ವಂಚಿತರಾದ ರೈತರಿಗೂ ಪರಿಹಾರ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯ ಶಾಸಕರು, ಸಚಿವರು ಹಾಗೂ ವಿರೋಧ ಪಕ್ಷದ ನಾಯಕರು ರೈತರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವಲ್ಲಿ ವಿಫಲರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಮುಖಂಡರು, ತಕ್ಷಣ ಕೇಂದ್ರದ ಬರ ಅಧ್ಯಯನ ತಂಡವನ್ನು ಕಲಬುರಗಿ ಜಿಲ್ಲೆಗೆ ಕಳುಹಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಂಚಾಲಕ ಶರಣಬಸಪ್ಪ ಮಮಶೆಟ್ಟಿ, ಭೀಮಾಶಂಕರ ಮಾಡಿಯಾಳ, ಕರೆಪ್ಪ ಕರಗೊಂಡ, ಎಂ.ಬಿ. ಸಜ್ಜನ, ಮೌಲಾ ಮುಲ್ಲಾ, ರೈತ ಮುಖಂಡರಾದ ಸಿದ್ದಪ್ಪ ಕಲಶೆಟ್ಟಿ, ಭೀಮಶಾ ಬಡದಾಳ, ದಿಲೀಪ್ ನಾಗೂರ, ಉಮಾಪತಿ ಪಾಟೀಲ, ನಾಗಯ್ಯ ಸ್ವಾಮಿ, ಚಂದ್ರಕಾಂತ ಪಾಟೀಲ, ವೀರಣ್ಣ ಗೌಡ, ಮಹೇಶ್ ಕುಮಾರ್ ರಾಠೋಡ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಸಚಿವರು-ಶಾಸಕರ ಮನೆ ಮುಂದೆ ಧರಣಿಯ ಎಚ್ಚರಿಕೆ: ಕಲಬುರಗಿ ಜಿಲ್ಲೆಯನ್ನು ತಕ್ಷಣ ಬರಪೀಡಿತ ಪ್ರದೇಶವೆಂದು ಘೋಷಿಸದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸು ವುದಾಗಿ ಸಂಯುಕ್ತ ಹೋರಾಟ ಕರ್ನಾಟಕ ರೈತ ಮುಖಂಡರು ಎಚ್ಚರಿಸಿದ್ದಾರೆ. ಜಿಲ್ಲೆಯ ಸಚಿವರು ಹಾಗೂ ಶಾಸಕರ ಮನೆಗಳ ಎದುರು ಧರಣಿ ನಡೆಸಲಾಗುವುದು. ಜಿಲ್ಲೆಗೆ ಆಗಮಿಸು ವ ಸಚಿವರಿಗೆ ಕಪ್ಪುಪಟ್ಟಿ ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ತಡೆಹಿಡಿದ ಪಿಂಚಣಿಗೆ ತಕ್ಷಣ ದಾಖಲೆ ಸಲ್ಲಿಸಿ: ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಸೂಚನೆ

ಕಲಬುರಗಿ,ಆ.29-

ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ತಡೆಹಿಡಿಯಲಾಗಿರುವ ಪಿಂಚಣಿಯನ್ನು ಮರುಚಾಲನೆಗೊಳಿಸಲು ಅರ್ಹ ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ತಮ್ಮ ವ್ಯಾಪ್ತಿಯ ತಹಸೀಲ್ದಾರ್ ಕಚೇರಿಗೆ ತಕ್ಷಣ ಸಲ್ಲಿಸುವಂತೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ತಿಳಿಸಿದ್ದಾರೆ.



ಆಧಾರ್ ಕಾರ್ಡ್, ಪಾನ್ ಕಾರ್ಡ್, ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿಯಲ್ಲಿ ವಯಸ್ಸಿನ ವ್ಯತ್ಯಾಸ ಕಂಡುಬಂದಿರುವುದು, ಎಪಿಎಲ್ ಪಡಿತರ ಚೀಟಿ ಹೊಂದಿರುವುದು, ಆದಾಯ ತೆರಿಗೆ ಪಾವತಿಸುತ್ತಿರುವುದು, ಯುಡಿಐಡಿ ಕಾರ್ಡ್ ಹೊಂದಿರದಿರುವುದು ಹಾಗೂ ಕುಟುಂಬದ ವಾರ್ಷಿಕ ಆದಾಯ 32,000ಕ್ಕಿಂತ ಹೆಚ್ಚಿರುವುದು ಸೇರಿದಂತೆ ವಿವಿಧ ಕಾರಣಗಳಿಂದ ಕೆಲವು ಫಲಾನುಭವಿಗಳ ಪಿಂಚಣಿಯನ್ನು ಸರ್ಕಾರ ಅನುಮಾನಾಸ್ಪದವೆಂದು ಗುರುತಿಸಿ ತಾತ್ಕಾಲಿಕವಾಗಿ ತಡೆಹಿಡಿದಿದೆ ಎಂದು ಅವರು ತಿಳಿಸಿದ್ದಾರೆ.

ಈಗಾಗಲೇ ಸಂಯೋಜನೆ ಮೊಬೈಲ್ ಆ್ಯಪ್ ಮೂಲಕ ಗ್ರಾಮ ಆಡಳಿತಾಧಿಕಾರಿಗಳು ಫಲಾನುಭವಿಗಳ ಭೌತಿಕ ಪರಿಶೀಲನೆ ನಡೆಸಿದ್ದಾರೆ. ಪರಿಶೀಲನೆ ಸಂದರ್ಭದಲ್ಲಿ ವಿಳಾಸದಲ್ಲಿ ಲಭ್ಯವಿಲ್ಲದ ಹಾಗೂ ಇನ್ನೂ ಪರಿಶೀಲನೆಗೆ ಒಳಪಡದ ಅರ್ಹ ಪಿಂಚಣಿದಾರರು ತಮ್ಮ ಪಿಂಚಣಿ ಮುಂದುವರಿಸಲು ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕಾಗಿದೆ.

ಅರ್ಹ ಫಲಾನುಭವಿಗಳು ವಯಸ್ಸಿನ ದೃಢೀಕರಣ ಪ್ರಮಾಣಪತ್ರ, ಬಿಪಿಎಲ್ ಪಡಿತರ ಚೀಟಿ ಹಾಗೂ ಕುಟುಂಬದ ವಾರ್ಷಿಕ ಆದಾಯ 1.20 ಲಕ್ಷಕ್ಕಿಂತ ಕಡಿಮೆ ಇರುವ ಪ್ರಮಾಣಪತ್ರ ಸಲ್ಲಿಸಬೇಕು. ಅಂಗವಿಕಲ ಪಿಂಚಣಿದಾರರು ಯುಡಿಐಡಿ ಕಾರ್ಡ್ ಹಾಗೂ ನಿರ್ಗತಿಕ ವಿಧವಾ ಪಿಂಚಣಿ ಪಡೆಯುತ್ತಿರುವವರು ಗಂಡನ ಮರಣ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಅರ್ಹ ಫಲಾನುಭವಿಗಳು ಅಗತ್ಯ ದಾಖಲೆಗಳನ್ನು ತಮ್ಮ ವ್ಯಾಪ್ತಿಯ ತಹಸೀಲ್ದಾರ್ ಕಚೇರಿಗೆ ಸಲ್ಲಿಸಿದಲ್ಲಿ, ಸ್ಥಗಿತಗೊಂಡಿರುವ ಪಿಂಚಣಿಯನ್ನು ನಿಯಮಾನುಸಾರ ಮರುಚಾಲನೆಗೊಳಿಸಲಾಗುವುದು. ನಿಗದಿತ ಹಾಗೂ ಸೂಕ್ತ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಅಂತಹ ಫಲಾನುಭವಿಗಳ ಪಿಂಚಣಿಯನ್ನು ಖಾಯಂ ಆಗಿ ಸ್ಥಗಿತಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಸ್ಪಷ್ಟಪಡಿಸಿದ್ದಾರೆ.

ಜಿಮ್ಸ್ ಜಿಲ್ಲಾಸ್ಪತ್ರೆಯಲ್ಲಿ ನಾರಾಯಣ ಗುರು, ನೂಲಿಯ ಚಂದಯ್ಯ ಜಯಂತಿ ಆಚರಣೆ



ಕಲಬುರಗಿ ,ಆ.29-

ನಗರದ ಜಿಮ್ಸ್ ಜಿಲ್ಲಾ ಆಸ್ಪತ್ರೆಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ 172ನೇ ಜಯಂತಿ ಹಾಗೂ ದಾಸೋಹಿ, ಜ್ಞಾನಿ, ಕಾಯಕಯೋಗಿ ಶರಣ ನೂಲಿಯ ಚಂದಯ್ಯ ಜಯಂತಿಯನ್ನು ಶುಕ್ರವಾರ ಆಚರಿಸಲಾಯಿತು.

ಜಿಲ್ಲಾ ಶಸ್ತ್ರಜ್ಞರ ಹಾಗೂ ಅಧೀಕ್ಷಕರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಶಸ್ತ್ರಜ್ಞರು ಹಾಗೂ ಅಧೀಕ್ಷಕರಾದ ಡಾ.ರೂಕೀಯಾ ಆಸ್ನಾರಬಾ ಅವರು ಬ್ರಹ್ಮಶ್ರೀ ನಾರಾಯಣ ಗುರು ಹಾಗೂ ಶರಣ ನೂಲಿಯ ಚಂದಯ್ಯ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗಣ್ಯರು, ಸಮಾಜದಲ್ಲಿ ಸಮಾನತೆ, ಮಾನವೀಯತೆ, ಕಾಯಕ ಮತ್ತು ದಾಸೋಹದ ಮೌಲ್ಯಗಳನ್ನು ಬಿತ್ತಿದ ಮಹನೀಯರ ಆದರ್ಶಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ತತ್ವ ಹಾಗೂ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಒಳಿತಿಗಾಗಿ ಶ್ರಮಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಶಾಲಿನಿ ಸಜ್ಜನಶೆಟ್ಟಿ, ಸ್ಥಳೀಯ ವೈದ್ಯಾಧಿಕಾರಿಗಳಾದ ಡಾ. ನಾಗರಾಜ್ ಪಾಟೀಲ, ಡಾ. ಸಂತೋಷ್ ಕಟ್ಟಿಮನಿ, ಡಾ. ಪ್ರತಿಭಾ, ಚೀಫ್ ಮೆಡಿಕಲ್ ಆಫೀಸರ್ ಡಾ. ವಿನೋದ್ ಕುಮಾರ ಹೊಸಳ್ಳಿ, ಕಚೇರಿ ಸಹಾಯಕ ಆಡಳಿತಾಧಿಕಾರಿ ಅಂಬಾರಾಯ ಸಂಕಾ, ಕಚೇರಿ ಅಧೀಕ್ಷಕಿ ಸಂಗೀತಾ, ಎಚ್‌ಎಫ್‌ಡಬ್ಲ್ಯೂ ಸಿಬ್ಬಂದಿ ಇಮ್ತಿಯಾಜ್ ಅಲಿ, ಎಫ್‌ಡಿಎ ಕಾವ್ಯ ಹನಚೇಟಕಿ, ಶಿಬಾರಾಣಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಜಿಲ್ಲಾ ತಂಬಾಕು ವ್ಯಸನ ಮುಕ್ತ ಕೇಂದ್ರದ ಸೈಕಾಲಜಿಸ್ಟ್ ಕೌನ್ಸಿಲರ್ ಮಂಜುನಾಥ ಕಂಬಾಳಿಮಠ, ಎನ್‌ಎಚ್‌ಎಂ ಲೆಕ್ಕಪರಿಶೋಧಕ ಸಿದ್ದಪ್ಪ ಹಾಲಪ್ಪನೂರ, ಆರೋಗ್ಯ ನಿರೀಕ್ಷಣಾಧಿಕಾರಿ ಚನ್ನಮಲ್ಲಪ್ಪ ಬುಕ್ಕಾ, ಸರ್ಕಾರಿ ನೌಕರರ ಸಂಘದ ಕ್ರೀಡಾ ಕಾರ್ಯದರ್ಶಿ ರಾಚಣ್ಣ ಬಿಸಿಗೊಂಡ, ಅವಿನಾಶ್ ಪಾಟೀಲ, ಶರಣು, ಪೃಥ್ವಿ ಸೇರಿದಂತೆ ಜಿಮ್ಸ್ ಜಿಲ್ಲಾ ಆಸ್ಪತ್ರೆಯ ವಿವಿಧ ವಿಭಾಗಗಳ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ಉಪಸ್ಥಿತರಿದ್ದರು.

ದಂಡಗುಂಡ ಬಸವಣ್ಣನವರ ಜಾತ್ರೆ ಪ್ರಯುಕ್ತ ಶಾಂತಿ ಸಭೆ

ಚಿತ್ತಾಪುರ,ಆ.29-

ತಾಲೂಕಿನ ದಂಡಗುಂಡ ಗ್ರಾಮದಲ್ಲಿ ಆ.31ರ ಸೋಮವಾರದಂದು ನಡೆಯಲಿರುವ ಐತಿಹಾಸಿಕ ದಂಡಗುಂಡ ಬಸವಣ್ಣನವರ ಜಾತ್ರೆ ಪ್ರಯುಕ್ತ ಚಿತ್ತಾಪುರ ಪೊಲೀಸ್ ಠಾಣೆ ವತಿಯಿಂದ ಶಾಂತಿ ಸಭೆ ಹಮ್ಮಿಕೊಳ್ಳಲಾಯಿತು.

ನಂತರ ಡಿವೈಎಸ್‌ಪಿ ಶಂಕರಗೌಡ ಪಾಟೀಲ್ ಮಾತನಾಡಿ, ಈ ಭಾಗದಲ್ಲಿ ದಂಡಗುಂಡ ಬಸವಣ್ಣನವರ ಜಾತ್ರೆ ಅದ್ದೂರಿಯಾಗಿ ಜರುಗುತ್ತದೆ. ಕಳೆದ ಭಾರಿ ಏನೆಲ್ಲ ತಪ್ಪುಗಳಾಗಿವೆ. ಅವುಗಳು ಈ ಭಾರಿ ನಡೆಯದಂತೆ ಪೊಲೀಸ್ ಇಲಾಖೆಯವರು ನೋಡಿಕೊಳ್ಳುವುದರ ಜೊತೆಗೆ ಸೂಕ್ತ ಪೊಲೀಸ್ ಬಂದೋಬಸ್ತ್ ಒದಗಿಸುವುದರ ಮೂಲಕ ದಂಡಗುಂಡ ಬಸವಣ್ಣನವರ ಜಾತ್ರೆಯ ಯಶಸ್ವಿಗೆ ನಾವೆಲ್ಲರು ಶ್ರಮಿಸೋಣಾ ಎಂದರು.

ಅಳ್ಳೊಳ್ಳಿ ಗ್ರಾಮದಿಂದ ದಂಡಗುಂಡ ಗ್ರಾಮದ ಬಸವಣ್ಣನವರ ದೇವಸ್ಥಾನಕ್ಕೆ ಆಗಮಿಸುವ ಭಕ್ತರು ರಸ್ತೆಯ ಮೇಲೆ ಎಲ್ಲಿಯೂ ವಾಹನಗಳನ್ನು ನಿಲ್ಲಿಸಬಾರದು. ನೀವು ವಾಹನಗಳನ್ನು ನಿಲ್ಲಿಸಿ ಲಾಕ್ ಮಾಡಿ ದರ್ಶನ ಪಡೆದುಕೊಳ್ಳಲು ಹೋದರೆ ಸಾಕಷ್ಟು ತೊಂದರೆಯಾಗುತ್ತದೆ. ವಾಹನಗಳನ್ನು ಪಾರ್ಕಿಂಗ್ ನಲ್ಲೇ ನಿಲ್ಲಿಸಬೇಕು ಎಂದರು.

ದೇವಸ್ಥಾನದ ಗರ್ಭಗುಡಿಯ ಮುಖ್ಯದ್ವಾರವನ್ನು ಹಿಡಿದು 5 ದ್ವಾರಗಳಿವೆ. ಮುಖ್ಯ ದ್ವಾರದಿಂದ ಪ್ರತಿಯೊಬ್ಬರಿಗೆ ದರ್ಶನ ಪಡೆದುಕೊಳ್ಳಲು ಅವಕಾಶ ಕಲ್ಪಿಸಿಕೊಡಲಾಗುವುದು, ಬಲಗಡೆಯಿಂದ ಮಹಿಳೆಯರಿಗೆ, ಎಡಗಡೆಯಿಂದ ಪುರುಷರಿಗೆ ಅವಕಾಶ ಕೊಡಲಾಗುತ್ತಿದೆ. ಅದರಂತೆ ತಾವುಗಳು ದರ್ಶನ ಪಡೆದುಕೊಂಡು ಹೋಗಲು ಅವಕಾಶ ನೀಡಲಾಗುವುದು. ಪ್ರದಕ್ಷಣೆಗೆ ನಾವು ಯಾವುದೇ ಕಾರಣಕ್ಕೂ ಅವಕಾಶ ನೀಡಲ್ಲ. ಹೀಗಾಗಿ ಎಲ್ಲರು ಸಹಕರಿಸಬೇಕು ಎಂದರು.



ಸುರಕ್ಷತೆಗೆ ಹೆಚ್ಚಿನ ಮಹತ್ವ ಕೊಡಬೇಕು. ಅಂಗಡಿ ಮುಗ್ಗಂಟ್ಟುಗಳು ಸ್ವಲ್ಪ ಒಳಗಡೆ ಹಾಕಬೇಕು. ರಥದ ಗಾಲಿಗಳು ಸುಗಮವಾಗಿ ಹೋಗಲು ಸಹಕರಿಸಬೇಕು. ಇಲ್ಲದ್ದಿದ್ದರೆ ಅನಾಹುತಗಳು ಸಂಭವಿಸುವ ಸಾಧ್ಯತೆಗಳಿರುತ್ತವೆ. ದಾಸೋಹ ಮಾಡುವ ಸ್ಥಳದಲ್ಲೇ ಸ್ವಚ್ಚತೆ ಕಾಪಾಡಿಕೊಳ್ಳಬೇಕು ಎಂದರು.

ಎಂ.ಎಲ್.ಸಿ, ದೇವಸ್ಥಾನ ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ಬಿ.ಜಿ ಪಾಟೀಲ್ ಮಾತನಾಡಿ, ಕಳೆದ ವರ್ಷ ಪೊಲೀಸ್ ಇಲಾಖೆಯಿಂದ ಎಲ್ಲಾ ರೀತಿಯ ಸಕಲ ಸಿದ್ಧತೆಗಳನ್ನು ಮಾಡಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಕ್ರಮ ಕೈಗೊಂಡು ಜಾತ್ರೆ ಯಶಸ್ವಿಯಾಗಲು ಸಹಕರಿಸಿದರು. ಅದೇ ರೀತಿ ಈ ವರ್ಷವು ಕೂಡ ಪೊಲೀಸ್ ಇಲಾಖೆಯವರು ಎಲ್ಲಾ ರೀತಿಯ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೆ ಗ್ರಾಮದ ಮುಖಂಡರು, ಭಕ್ತರು ಸೇರಿದಂತೆ ಪ್ರತಿಯೊಬ್ಬರು ಸಹಕಾರ ನೀಡಬೇಕು ಎಂದರು.


ತಹಶೀಲ್ದಾರ್ ನಾಗಯ್ಯ ಹಿರೇಮಠ ಮಾತನಾಡಿ, ತಾಲೂಕು ಆಡಳಿತದ ವತಿಯಿಂದ ಭಕ್ತರಿಗೆ ಯಾವುದೇ ರೀತಿಯಿಂದ ತೊಂದರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಾವೆಲ್ಲರು ಸೇರಿ ಜಾತ್ರೆ ಯಶಸ್ವಿಗೆ ಶ್ರಮಿಸೋಣ, ಜಾತ್ರೆಯಲ್ಲಿ ಯಾವುದೇ ರೀತಿಯ ಘಟನೆಗಳು ಜರುಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ವಿದ್ಯುತ್ ವ್ಯವಸ್ಥೆ, ಉಚಿತ ವೈದ್ಯಕೀಯ ಚಿಕಿತ್ಸೆ , ಅಂಬುಲೆನ್ಸ್ ವ್ಯವಸ್ಥೆ ಮಾಡಲು ತಾಲೂಕು ಆರೋಗ್ಯಾಧಿಕಾರಿಗೆ ಸೂಚಿಸಲಾಗುವುದು ಎಂದು ಭರವಸೆ ನೀಡಿದರು. ಪಿಎಸ್ಐ ಮಂಜುನಾಥ ರೆಡ್ಡಿ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವು ಕೂಡ ಆ.31ರಂದು ದಂಡಗುಂಡ ಬಸವಣ್ಣನವರ ಜಾತ್ರೆ ಇರುವುದರಿಂದ ಯಾವುದೇ ರೀತಿಯ ಅಹಿತಕರ ಘಟನೆ ಜರುಗದಂತೆ ಮುನ್ನೆಚ್ಚರಿಕೆ ಕೈಗೊಂಡಿದ್ದು, ಗ್ರಾಮಸ್ಥರು ಹಾಗೂ ಭಕ್ತರು ಕೂಡ ಸಹಕಾರ ನೀಡಬೇಕು ಎಂದರು.

ದೇವಸ್ಥಾನ ಕಮಿಟಿ ಕಾರ್ಯದರ್ಶಿ ಚಂದ್ರಶೇಖರ ಆವಂಟಿ ಮಾತನಾಡಿದರು. ಈ ಸಂದರ್ಭದಲ್ಲಿ ದೇವಸ್ಥಾನ ಟ್ರಸ್ಟ್ ಸಮಿತಿ ಅಧ್ಯಕ್ಷ ಭಾಗಣ್ಣಗೌಡ ಸಂಕನೂರ, ಮಹಾಂತಗೌಡ, ರಾಜಶೇಖರ ಪಾಟೀಲ್ ಸೇರಿದಂತೆ ಗ್ರಾಮದ ಅನೇಕ ಮುಖಂಡರು ಹಾಗೂ ಭಕ್ತರು ಇದ್ದರು.

ನುಲಿಯ ಚಂದಯ್ಯನವರ ತತ್ತ್ವ-ಸಂದೇಶ ಸದಾ ಸರ್ವಕಾಲಿಕ: ಅಲ್ಲಮಪ್ರಭು ಪಾಟೀಲ್

ಕಲಬುರಗಿ,ಆ.29-

ಕಾಯಕವೇ ಕೈಲಾಸ ಎಂಬ ತತ್ತ್ವದಡಿ ಬದುಕಿದ ಶರಣ ನುಲಿಯ ಚಂದಯ್ಯ ಅವರು ಕಾಯಕಕ್ಕೆ ಮೊದಲ ಆದ್ಯತೆ ನೀಡಿದ ಮಹಾನ್ ಶರಣರಾಗಿದ್ದರು. ಅವರ ತತ್ತ್ವ, ಸಂದೇಶ ಹಾಗೂ ಕಾಯಕ ನಿಷ್ಠೆ ಸದಾ ಸರ್ವಕಾಲಿಕವಾಗಿದ್ದು, ಇಂದಿನ ಪೀಳಿಗೆಗೂ ಮಾದರಿಯಾಗಿದೆ ಎಂದು ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ ಹೇಳಿದರು.



ನಗರದ ಡಾ.ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಶುಕ್ರವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯಿತಿ ಕಲಬುರಗಿ ಇದರ ಸ'ಂಯುುಕ್ತಾ'ಶ್'ರ್ಯುದ'ಲ್ಲಿ ಆಯೋಜಿಸಿದ್ದ 919ನೇ ನುಲಿಯ ಚಂದಯ್ಯ ಜಯಂತಿ ಕಾರ್ಯಕ್ರಮದಲ್ಲಿ ಶರಣ ನುಲಿಯ ಚಂದಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಹುಲ್ಲು ಕೊಯ್ಯುವ ಕಾಯಕದಲ್ಲಿ ತೊಡಗಿದ್ದ ಸಂದರ್ಭದಲ್ಲಿ ಕೊರಳಿನಲ್ಲಿದ್ದ ಲಿಂಗ ಕೆಳಗೆ ಬಿದ್ದರೂ, ಕಾಯಕಕ್ಕೆ ಧಕ್ಕೆಯಾಗಬಾರದು ಎಂಬ ದೃಢನಿಷ್ಠೆಯಿಂದ ನಾನು ಕಾಯಕ ಮಾಡುತ್ತಿದ್ದೇನೆ, ನಿನಗೆ ಬೇಕಿದ್ದರೆ ಅಲ್ಲೇ ಇರು ಎಂಬ ಮನೋಭಾವ ತೋರಿದ ನುಲಿಯ ಚಂದಯ್ಯ ಅವರು ಕಾಯಕದ ಮಹತ್ವವನ್ನು ಸಾರಿದ ಶರಣರಾಗಿದ್ದರು ಎಂದು ಅಲ್ಲಮಪ್ರಭು ಪಾಟೀಲ ಸ್ಮರಿಸಿದರು.

ನಂತರ ಮಡಿವಾಳ ವ'ಾ ಚಿ ದ'ೀ ವ' ರ'ೂ ಂ ದಿ ಗ' ಬಸವಕಲ್ಯಾಣದ ಅನುಭವ ಮಂಟಪಕ್ಕೆ ತೆರಳಿ ವಚನ ಕ್ರಾಂತಿಯಲ್ಲಿ ಭಾಗವಹಿಸಿದ್ದರು. 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಶರಣರು ಸಮಾಜದಲ್ಲಿದ್ದ ಮೂಢನಂಬಿಕೆ, ಜಾತೀಯತೆ ಹಾಗೂ ಅಸ್ಪೃಶ್ಯತೆ ವಿರುದ್ಧ ವಚನ ಸಾಹಿತ್ಯದ ಮೂಲಕ ಕ್ರಾಂತಿಕಾರಿ ಬದಲಾವಣೆಗೆ ಕಾರಣರಾದರು. ಶರಣರ ತತ್ತ್ವ, ಸಂದೇಶ ಹಾಗೂ ಕಾಯಕನಿಷ್ಠೆ ಮುಂದಿನ ಪೀಳಿಗೆಗೆ ದಾರಿದೀಪವಾಗಬೇಕು ಎಂದರು.

ಸಾಮಾಜಿಕ ಕ್ರಾಂತಿಗೆ ಶರಣರ ಕೊಡುಗೆ ಅಪಾರ: ಎಂ.ವೈ. ಪಾಟೀಲ

ಅಫಜಲಪುರ ಶಾಸಕ ಎಂ.ವೈ. ಪಾಟೀಲ ಮಾತನಾಡಿ, ಶರಣರ ಕಾಲದಲ್ಲಿ ಸಮಾಜದಲ್ಲಿ ಬೇರೂರಿದ್ದ ಜಡತ್ವ, ಅಸ್ಪೃಶ್ಯತೆ ಹಾಗೂ ಮೇಲು ಕೀಳು ಎಂಬ ಭಾವನೆಗಳನ್ನು ತೊಡೆದುಹಾಕಲು ಬಸವಣ್ಣನವರ ನೇತೃತ್ವದಲ್ಲಿ ಅನುಭವ ಮಂಟಪದ ಮೂಲಕ ಶರಣರು ಬೃಹತ್ ಸಾಮಾಜಿಕ ಕ್ರಾಂತಿಯನ್ನೇ ಹುಟ್ಟುಹಾಕಿದರು ಎಂದು ಹೇಳಿದರು.

ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಅನೇಕ ಶರಣರ ತ್ಯಾಗ ಮತ್ತು ಬಲಿದಾನ ಅಪಾರವಾಗಿತ್ತು. ಆ ಸಂದರ್ಭದಲ್ಲಿ ಅನೇಕ ವಚನಗಳು ನಾಶವಾದರೂ, ಹಿರಿಯರು ಪ್ರಾಣದ ಹಂಗು ತೊರೆದು ರಕ್ಷಿಸಿದ ವಚನ ಸಾಹಿತ್ಯವೇ ಇಂದು ಸಮಾಜಕ್ಕೆ ಪ್ರಗತಿಯ ಬೆಳಕಾಗಿದೆ ಎಂದರು.

ನುಲಿಯ ಚಂದಯ್ಯನವರ ಜೀವನ, ಕಾಯಕ ನಿಷ್ಠೆ ಹಾಗೂ ಸಮಾಜಕ್ಕೆ ಅವರು ನೀಡಿದ ಕೊಡುಗೆ ಕುರಿತು ಡಾ. ಶಿವರಂಜನ್ ಸತ್ಯಂಪೇಟೆ ಅವರು ವಿಶೇಷ ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ 2025-26ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಮತ್ತು ಸರ್ಕಾರಿ ಸೇವೆ ಸಲ್ಲಿಸಿ ನಿವೃತ್ತರಾದ ಸರ್ಕಾರಿ ನೌಕರರನ್ನು ಸನ್ಮಾನಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರ ನಾಶಿ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕೊರಮ ಸಮಾಜದ ಅಧ್ಯಕ್ಷ ಶ್ರೀಮಂತ ಎಲ್. ಜಾಧವ, ಸಮಾಜದ ಜಿಲ್ಲಾಧ್ಯಕ್ಷ ಹಣಮಂತ ಕರ್ಜಗಿ, ಪೊಲೀಸ್ ಇಲಾಖೆಯ ಸಿಪಿಐ ರಾಘವೇಂದ್ರ ಭಜಂತ್ರಿ, ಸಹಾಯಕ ಕಾರ್ಯಪಾಲಕ ಅಭಿಯಂತರ ಶಾಂತಪ್ಪ ಜಾಧವ, ಜಗನ್ನಾಥ ಭಜಂತ್ರಿ, ಮಹಾದೇವಿ ಭಜಂತ್ರಿ, ಸುನೀಲ್ ಮಾನ್ಪಡೆ ಸೇರಿದಂತೆ ಸಮಾಜದ ಮುಖಂಡರು ಹಾಗೂ ಗಣ್ಯರು ಭಾಗವಹಿಸಿದ್ದರು.

ಕಾಂಗ್ರೆಸ್ ದುರಾಡಳಿತದ ವಿರುದ್ಧ ಬಿಜೆಪಿಯಿಂದ ಹೋರಾಟ : ರಾಜಕುಮಾರ್ ಪಾಟೀಲ್



ಸೇಡಂ ,ಆ.29-

ಕ್ಷೇತ್ರದಲ್ಲಿ ಕಾಂಗ್ರೆಸ್ ಸರಕಾರದ ದುರಾಡಳಿತ, ಶಾಸಕರ ನಿಷ್ಕ್ರಿಯತೆ ಹಾಗೂ ಜನವಿರೋಧಿ ಧೋರಣೆಗಳನ್ನು ಖಂಡಿಸಿ ಮುಂಬರುವ ದಿನಗಳಲ್ಲಿ ತಾಲೂಕಿನಾದ್ಯಂತ ಹೋರಾಟ ರೂಪಿಸಲಾಗುವುದು ಎಂದು ಮಾಜಿ ಶಾಸಕ ರಾಜಕುಮಾರ್ ಪಾಟೀಲ್ ತೇಲ್ಕೂರ್ ಘೋಷಿಸಿದರು.

ನಗರದ ಬಾಲಾಜಿ ಕಲ್ಯಾಣ ಮಂಟಪದಲ್ಲಿ ಭಾರತೀಯ ಜನತಾ ಪಕ್ಷ ಆಯೋಜಿಸಿದ ಕರಡು ಮತದಾರರ ಪಟ್ಟಿ ವಿತರಣೆ ಹಾಗೂ ಬಿಎಲ್‌ಎ 2 ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಮುಂದಿನ ದಿನಗಳಲ್ಲಿ ತಾಲೂಕಿನ ಪ್ರತಿಯೊಂದು ಹಳ್ಳಿಯ ಮೂಲಸೌಕರ್ಯ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಪಕ್ಷ ಸಂಘಟನೆಯೊಂದಿಗೆ ಬೀದಿಗಿಳಿದು ಹೋರಾಟ ನಡೆಸಲಾಗುವುದು ಎಂದು ಹೇಳಿದರು.

ಇತ್ತೀಚಿಗೆ ರಂಜೋಳದಲ್ಲಿ ಭಜನೆ ಮಾಡಲು ಹೋದರೆ ಅದನ್ನು ಗೂಂಡಾಗಿರಿ, ಭಯದ ವಾತಾವರಣ ಸೃಷ್ಟಿ ಎಂದು ಬಿಂಬಿಸಲಾಯಿತು. ಆದರೆ ವಾಸ್ತವದಲ್ಲಿ ಲಾಠಿ, ಕಟ್ಟಿಗೆ ಹಾಗೂ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಬಂದು ಗೂಂಡಾಗಿರಿ ಮಾಡಿದ್ದು ಕಾಂಗ್ರೆಸ್‌ನವರು. ಗೂಂಡಾಗಿರಿ ಮಾಡುವುದೇ ಕಾಂಗ್ರೆಸ್‌ನ ಸಂಸ್ಕೃತಿ ಎಂದು ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅವರಿಗೆ ತೇಲ್ಕೂರ್ ಖಾರವಾಗಿ ತಿರುಗೇಟು ನೀಡಿದರು. ಕ್ಷೇತ್ರದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು,

ಇಂತಹ ದುರಾಡಳಿತ ಮತ್ತು ತುಷ್ಟೀಕರಣ ನೀತಿಯನ್ನು ಜನತೆಯ ಮುಂದೆ ಬಯಲು ಮಾಡಲಾಗುವುದು ಎಂದರು.

ಪಕ್ಷದಲ್ಲಿ ಯಾವುದೇ ವ್ಯಕ್ತಿಪೂಜೆ ಅಥವಾ ಪ್ರತ್ಯೇಕ ಬಣಗಳಿಗೆ ಅವಕಾಶವಿಲ್ಲ, ನಾವೆಲ್ಲರೂ ಕೇವಲ ಬಿಜೆಪಿ ಬಣದಡಿ ಕಾರ್ಯನಿರ್ವಹಿಸಬೇಕು. ಯಾರೊಬ್ಬರೂ ಜಾತಿಯ ಆಧಾರದ ಮೇಲೆ ಟಿಕೆಟ್ ಅಥವಾ ಸ್ಥಾನಮಾನ ನಿರೀಕ್ಷಿಸದೆ, ಸರ್ವ ಜನಾಂಗದ ನಾಯಕರಾಗಿ ಬೆಳೆಯಬೇಕು. ಗ್ರಾಮ ಮಟ್ಟದಲ್ಲಿ ನಡೆಯುವ ಸಾರ್ವಜನಿಕ ಸಮಸ್ಯೆಗಳ ಪರಿಹಾರ ಹ ಾ ಗ ' ೂ ನ್ಯಾಯ-ಪಂಚಾಯಿತಿಗಳಲ್ಲಿ ಬಿಜೆಪಿ ಕ ಾ ಯ ರ್ ಕ ' ತ ' ರ ' ರ ' ು ಮುಂಚೂಣಿಯಲ್ಲಿದ್ದು ಜನರಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಬಿಜೆಪಿ ಸೇಡಂ ಮಂಡಲ ಪ್ರಭಾರಿ ಸಿದ್ದಾಜಿ ಪಾಟೀಲ, ಬಿಜೆಪಿ ಮಂಡಲ ಅಧ್ಯಕ್ಷ ಶಿವಶರಣಪ್ಪ ಶಂಕರ್ ಮೆಡಿಕಲ್, ನಾಗರೆಡ್ಡಿ ಪಾಟೀಲ ದೇಶಮುಖ ಮದನಾ, ಅನೀಲ ಪಾಟೀಲ ತೆಲ್ಕೂರ, ಸಂತೋಷಿರಾಣಿ ಪಾಟೀಲ ತೆಲ್ಕೂರ, ವಿಜಯಕುಮಾರ್ ಆಡಕಿ, ನಾಗರೆಡ್ಡಿ ಪಾಟೀಲ ಮುಧೋಳ, ಸಿದ್ದು ಬಾನಾರ ಕೋಡ್ಲಾ, ಮಹಾದೇವಪ್ಪ ಗೋಣಿ, ಬಸವರಾಜ ಪಾಟೀಲ ದೇವನೂರು, ಶಿವಕುಮಾರ ತೊಟ್ನಳ್ಳಿ, ರಾಮು ಕಣೇಕಲ್, ವಿನೋದ ಸಾಹುಕಾರ್ನ ನಾಗಪ್ಪ ಕೊಳ್ಳಿ, ಪಂಡರಿ ಮುನಿ ಇಟಕಾಲ, ಅಬ್ದುಲ್ ಜಾಫರ್ ಭೀಮು ನಾಯಕ ಹೂಡಾ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರಿದ್ದರು.

ಒಂದನೇಯ ಪುಟದಿಂದ

ಹಗರಣದ ಮುಜುಗರ ತಪ್ಪಿಸಿಕೊಳ್ಳಲು ನಾಗೇಂದ್ರರನ್ನ ರಾಜೀನಾಮೆ ಕೊಡಿಸಿದ್ದಾರೆ: ಕುಮಾರಸ್ವಾಮಿ

ಇದಕ್ಕೂ ಮುನ್ನ ನಗರದಲ್ಲಿ ಇಂದು ನಡೆದ ದಿವ್ಯಾಂಗ ಚೇತನರಿಗೆ ಕೃತಕ ಉಪಕರಣಗಳ ವಿತರಣಾ ಕಾರ್ಯಕ್ರಮಲ್ಲೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭಾಗಿಯಾಗಿದ್ದರು. ಇದಾದ ಬಳಿಕ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ನಡೆದ ದಿಶಾ ಸಭೆಯಲ್ಲೂ ಪಾಲ್ಗೊಂಡಿದ್ದರು. ಮಳೆ ಕೊರತೆಯಿಂದಾಗಿ ಎದುರಾಗಿರುವ ಸಮಸ್ಯೆ, ಕೆಆರ್‌ಎಸ್ ಡ್ಯಾಂನಿಂದ ನಾಲೆಗಳಿಗೆ ಕಟ್ಟು ಪದ್ಧತಿಯಲ್ಲಿ ನೀರು ಬಿಡುಗಡೆ ಸೇರಿದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಮಟಮಾರಿ ಗ್ರಾಮದಲ್ಲಿ ಎನ್‌ಎಎಲ್‌ಎಸ್‌ಎ ಯೋಜನೆಗಳ ಅನುಷ್ಠಾನಕ್ಕೆ ಚಾಲನೆ ಫಲಾನುಭವಿಗಳು ಯೋಜನೆಯ ಸದುಪಯೋಗ ಪಡಿಸಿಕೊಳ್ಳಬೇಕು: ನ್ಯಾ.ಸಿದ್ಧರಾಮಪ್ಪ

ಗುರುತಿಸಿ ಅವರಿಗೆ ಅಗತ್ಯವಿರುವ ಕಾನೂನು ಸಲಹೆ, ಉಚಿತ ಕಾನೂನು ನೆರವು ಹಾಗೂ ವಿವಿಧ ಸರ್ಕಾರಿ ಸೌಲಭ್ಯಗಳೊಂದಿಗೆ ಸಂಪರ್ಕ ಕಲ್ಪಿಸುವ ಕಾರ್ಯ ಕೈಗೊಳ್ಳಲಾಗುತ್ತದೆ. ಕಾನೂನು ಸಮಸ್ಯೆಗಳನ್ನು ಹೊಂದಿರುವವರು, ಮಹಿಳೆಯರು, ಮಕ್ಕಳು, ಹಿರಿಯ ನಾಗರಿಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಆರ್ಥಿಕವಾಗಿ ದುರ್ಬಲರು ಸೇರಿದಂತೆ ಕಾನೂನು ನೆರವಿನ ಅಗತ್ಯವಿರುವ ಅರ್ಹರಿಗೆ ಉಚಿತ ಕಾನೂನು ಸೇವೆ ದೊರೆಯುವಂತೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ ಅವರು ಮಾತನಾಡಿದ, ಗ್ರಾಮೀಣ ಭಾಗದ ಜನ ಈಗಲು ಬಹಿರ್ದೆಸೆಗೆ ಬಯಲನ್ನು ಅವಲಂಬಿಸುತ್ತಿರುವುದು ಶೋಚನೀಯವಾಗಿದೆ. ಜನ ಸರಕಾರದ ಯೋಜನೆಗಳನ್ನು ಸದುಪಯೋಗ ಪಡೆದು ಕೊಂಡು ಮನೆಯಲ್ಲಿ ಪ್ರತಿಯೊಬ್ಬರು ಶೌಚಾಲಯ ಕಟ್ಟಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ರಾಯಚೂರು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಪವಾ್ರ, ರಾಯಚೂರು ಸಿಡಿಪಿಒ ಮನ್ಸೂ ರ್ ಅಮಹದ್ ಸೇರಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಪ್ರತಿನಿಧಿಗಳು, ಪ್ಯಾರಾ ಲೀಗಲ್ ವಾಲಂಟಿಯರ್‌ಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಗುಂಜಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಡಿಹೆಚ್‌ಒ ಭೇಟಿ ಪರಿಶೀಲನೆ ಸರಕಾರಿ ಆಸ್ಪತ್ರೆಯಲ್ಲಿ ದೊರಕುವ ಸೇವೆಗಳನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಿ: ನಂದಿತಾ

ಪಾಟೀಲ್, ಶುಶ್ರೂಷಣಾಧಿಕಾರಿ ಆರೀಫ್, ಎಲ್‌ಟಿಓ ಸೈಯದ್ ಆರೀಫಾ, ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಹಾಗೂ ತಾಯಂದಿರು, ಸಾರ್ವಜನಕರು ಇದ್ದರು.

ದಲಿತರ ಸರಣಿ ಹತ್ಯೆ, ಅತ್ಯಾಚಾರ: ಸಿಐಡಿ ತನಿಖೆಗೆ ಆಗ್ರಹ

ಆರೋಪಿಸಿದ ಅವರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳನ್ನು ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿದರು.

ಭೂಮಾನಂದ, ಅಶ್ವಿನಿ ಹಾಗೂ ರಾಣೆಮ್ಮ ಅವರ ಪ್ರಕರಣಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ ಸಿಐಡಿ ತನಿಖೆಗೆ ವಹಿಸಬೇಕು. ತನಿಖೆ ತ್ವರಿತವಾಗಿ ಪೂರ್ಣಗೊಳಿಸಿ ತಪ್ಪಿತಸ್ಥರಿಗೆ ಕಾನೂನುಬದ್ಧ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಆ.30ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಸದಸ್ಯರು ರಾಯಚೂರು ಜಿಲ್ಲೆಗೆ ಭೇಟಿ ನೀಡಲಿದ್ದು, ಜಿಲ್ಲೆಯಲ್ಲಿನ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು, ತನಿಖೆಯಲ್ಲಿನ ವಿಳಂಬ ಹಾಗೂ ಆಡಳಿತಾತ್ಮಕ ಲೋಪದೋಷಗಳ ಕುರಿತು ಆಯೋಗಕ್ಕೆ ಸಮಗ್ರ ಮಾಹಿತಿ ಹಾಗೂ ದಾಖಲೆಗಳನ್ನು ನೀಡಲಾಗುವುದು ಎಂದು ಕೆ.ಈ. ಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಭೀಮಣ್ಣ ಮಂಚಾಲ್, ಆರ್. ಬಸವರಾಜ್, ಆರ್. ರಾಮಕೃಷ್ಣ, ಶಶಿಧ್ರ, ಬಾಬು, ಪ್ರಾಣೇಶ ಮಂಚಾಲ್ ಹಾಗೂ ನಾಗರಾಜ ಉಪಸ್ಥಿತರಿದ್ದರು.

ಜಿಲ್ಲೆಯಲ್ಲಿ ದಲಿತರ ಕೊಲೆ-ಅತ್ಯಾಚಾರಕ್ಕೆ ಕಡಿವಾಣ ಹಾಕಿ

ಮಾಹಿತಿ ಪಡೆದುಕೊಂಡರೆ ಹಲವು ಘಟನೆಗಳನ್ನು ಮುಂಚಿತವಾಗಿಯೇ ತಡೆಯಬಹುದು ಎಂದರು.

ಹಿಂದೆ ಒಂದು ಹಳ್ಳಿಗೆ ಇಬ್ಬರು ಜಿಪಿಎಸ್ ಆಧಾರಿತ ಬೀಟ್ ಸಿಬ್ಬಂದಿ ವ್ಯವಸ್ಥೆ ಜಾರಿಯಲ್ಲಿತ್ತು. ಆದರೆ ಇದೀಗ ಆ ವ್ಯವಸ್ಥೆ ಇಲ್ಲವಾಗಿದೆ. ಕೇವಲ ಕಾಟಾಚಾರಕ್ಕೆ ಬೀಟ್ ವ್ಯವಸ್ಥೆ ನಡೆಸಿದರೆ ಗ್ರಾಮೀಣ ಪ್ರದೇಶಗಳಲ್ಲಿ ಅಹಿತಕರ ಘಟನೆಗಳನ್ನು ತಡೆಯಲು ಹೇಗೆ ಸಾಧ್ಯ? ಎಂದು ಅವರು ಪ್ರಶ್ನಿಸಿದರು.

ಅಶ್ವಿನಿ ಪ್ರಕರಣದಲ್ಲಿ ಕರ್ತವ್ಯಲೋಪದ ಆರೋಪದಡಿ ಸಿರವಾರ ಠಾಣೆಯ ನಾಲ್ವರು ಸಿಬ್ಬಂದಿಯನ್ನು ಅಮಾನತುಗೊಳಿಸಿರುವ ಬೆಳವಣಿಗೆಯೂ ಪೊಲೀಸ್ ವ್ಯವಸ್ಥೆಯ ಕಾರ್ಯವೈಖರಿಯ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಮಾನ್ವಿಯನ್ನು ಬರಪೀಡಿತ ತಾಲೂಕು ಎಂದು ಘೋಷಿಸಿ

ಬರ ಪರಿಸ್ಥಿತಿಯಲ್ಲಿಯೂ ರಾಜ್ಯ ಸರ್ಕಾರ ಮಾನ್ವಿ ತಾಲೂಕನ್ನು ಬರಪೀಡಿತ ತಾಲೂಕುಗಳ ಪಟ್ಟಿಯಿಂದ ಕೈಬಿಟ್ಟಿರುವುದು ಸರಿಯಲ್ಲ. ಮುಂದಿನ ದಿನಗಳಲ್ಲಿ ಪರಿಸ್ಥಿತಿಯನ್ನು ಪುನಃ ಪರಿಶೀಲಿಸಿ ಮಾನ್ವಿ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸಿ ರೈತರಿಗೆ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ರೈತರಿಂದ ಹಿಂಗಾರು ಜೋಳ ಖರೀದಿಸಿದ್ದರೂ ಇದುವರೆಗೂ ಖರೀದಿ ಹಣವನ್ನು ರೈತರ ಖಾತೆಗಳಿಗೆ ಜಮೆ ಮಾಡಿಲ್ಲ. ಕೂಡಲೇ ರೈತರ ಖಾತೆಗಳಿಗೆ ಹಣ ಜಮೆ ಮಾಡಬೇಕು ಎಂದರು.

ಕೆಳಭಾಗದ ರೈತರಿಗೆ ನೀರು ತಲುಪಿಸಿ

ತುಂಗಭದ್ರಾ ಎಡದಂಡೆ ಕಾಲುವೆಯ ಕೆಳಭಾಗದ ರೈತರಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ. ಅನಧಿಕೃತವಾಗಿ ಅಳವಡಿಸಿರುವ ಪೈಪ್‌ಲೈನ್‌ಗಳನ್ನು ಕೂಡಲೇ ತೆರವುಗೊಳಿಸಿ, ಕಾಲುವೆಯ ನೀರನ್ನು ಕೊನೆಯ ಭಾಗದ ರೈತರಿಗೆ ನ್ಯಾಯಯುತವಾಗಿ ತಲುಪಿಸುವ ವ್ಯವಸ್ಥೆ ಮಾಡಬೇಕು ಎಂದು ಚಾಮರಸ ಮಾಲಿ ಪಾಟೀಲ್ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಪ್ರಭಾಕರ ಪಾಟೀಲ್, ಬೂದಯ್ಯ ಸ್ವಾಮಿ, ಮಲ್ಲಯ್ಯ, ದೇವರಾಜ್ ನಾಯಕ ಸೇರಿದಂತೆ ಹಲವರು ಉಪಸ್ಥಿತರಿದ್ದರು.

02ರಂದು ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ

ಎಸ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಬಾಗಿಯಾಗಲಿದ್ದಾರೆ.

ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಕುರಿತು ಗಂಗಾವತಿ ವಕೀಲರಾದ ನಾಗರಾಜ ಎಸ್. ಅವರು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾದ ಡಾ.ಮೂರ್ತಿ ಎಲ್. ಜಿಲ್ಲಾ ಪ್ರವಾಸ

ರಾಯಚೂರು ಆಗಸ್ಟ್ 29

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾದ ಡಾ.ಮೂರ್ತಿ ಎಲ್. ಅವರು ಆಗಸ್ಟ್ 30 ಹಾಗೂ 31ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಅವರು ಆಗಸ್ಟ್ 30ರ ಬೆಳಿಗ್ಗೆ 8.30 ರಿಂದ ರಾಯಚೂರು ನಗರದಿಂದ ನಿರ್ಗಮಿಸಿ, ಮಧ್ಯಾಹ್ನ 1.45ಕ್ಕೆ ಗಂಟೆಯವರೆಗೆ ದೌರ್ಜನ್ಯ ಪ್ರಕರಣದಲ್ಲಿ ಮೃತಪಟ್ಟ ದೇವದುರ್ಗ ತಾಲೂಕಿನ ಹದ್ದಿನಾಳ, ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮ ಮತ್ತು ಲಿಂಗಸುಗೂರು ತಾಲೂಕಿನ ಕರಡಕಲ್ ಗ್ರಾಮಗಳಿಗೆ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಲಿದ್ದಾರೆ.

ಮಧ್ಯಾಹ್ನ 3ಗಂಟೆಯಿದ ಸಮಾಜ ಕಲ್ಯಾಣ ಇಲಾಖೆಯ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಭೇಟಿ ನೀಡಲಿದ್ದಾರೆ.

ಆಗಸ್ಟ್ 31ರ ಬೆಳಗ್ಗೆ 10.30ಗಂಟೆಗೆ ರಾಯಚೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಪೊಲೀಸ್ ಅಧೀಕ್ಷಕರು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಂಘ-ಸಸ್ಥೆಯ ಪದಾಧಿಕಾರಿಗಳೊಂದಿಗೆ ಸಭೆ ಮತ್ತು ಅಹ್ವಾಲು ಸ್ವೀಕರಿಸಲಿದ್ದಾರೆ.

ಮಧ್ಯಾಹ್ನ 1.30 ಗಂಟೆಗೆ ಪತ್ರಿಕಾ ಗೋಷ್ಠಿ ನಡೆಸಲಿದ್ದಾರೆ.

ಮಧ್ಯಾಹ್ನ 2.15 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮರ್ಜಾ ಡ್ಯಾಂಗೆ ನೀರು ತುಂಬಿಸುವ ಯೋಜನೆಗೆ ಅಡ್ಡಿ ಆರೋಪ; ರೈತರಿಂದ ಪಾದಯಾತ್ರೆ



ಆಳಂದ,ಆ.29-

ಬೋರಿ ನದಿಯಿಂದ ಅಮರ್ಜಾ ಡ್ಯಾಂಗೆ ನೀರು ತುಂಬಿಸುವ ಪೈಪ್‌ಲೈನ್ ಅನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಅಫಜಲಪುರ ತಾಲೂಕಿನ ಅರ್ಜುಣಗಿ ಬಳಿ ಕಡಿತಗೊಳಿಸಿರುವುದನ್ನು ವಿರೋಧಿಸಿ ಕೆಎಂಎಫ್ ಅಧ್ಯಕ್ಷ ಆರ್.ಕೆ. ಪಾಟೀಲ್ ಅವರ ನೇತೃತ್ವದಲ್ಲಿ ಸಾವಿರಾರು ರೈತರು ಗುರುವಾರ ಪಾದಯಾತ್ರೆ ನಡೆಸಿದರು.

ತಾಲೂಕಿನ ಹಡಲಗಿ ಗ್ರಾಮದ ಶ್ರೀ ಯಲ್ಲಮ್ಮ ದೇವಿ ದೇವಸ್ಥಾನದಿಂದ ಅರ್ಜುಣಗಿ ರಾಷ್ಟ್ರೀಯ ಹೆದ್ದಾರಿವರೆಗೆ ಪಾದಯಾತ್ರೆ ನಡೆಯಿತು. ಬೋರಿ ನದಿಯಿಂದ ಅಮರ್ಜಾ ಡ್ಯಾಂಗೆ ನೀರು ತುಂಬಿಸುವ ಕಾಮಗಾರಿ ಪೂರ್ಣಗೊಂಡು ಪ್ರಗತಿಯಲ್ಲಿರುವ ಹಂತದಲ್ಲಿಯೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಯಾವುದೇ ಮಾಹಿತಿ ನೀಡದೆ ಪೈಪ್‌ಲೈನ್ ಕಡಿತಗೊಳಿಸಿದ್ದಾರೆ ಎಂದು ಆರೋಪಿಸಿ ರೈತರು ಆಕ್ರೋಶ ವ್ಯಕ್ತಪಡಿಸಿದರು.

ಪಾದಯಾತ್ರೆ ವೇಳೆ ಮಾತನಾಡಿದ ಆರ್.ಕೆ. ಪಾಟೀಲ, ಪೈಪ್‌ಲೈನ್ ಕಡಿತಗೊಳಿಸಿರುವುದನ್ನು ಸರಿಪಡಿಸುವಂತೆ ಶಾಸಕ ಬಿ.ಆರ್. ಪಾಟೀಲ ಅವರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನಾಲ್ಕು ಬಾರಿ ಪತ್ರ ಬರೆದಿದ್ದರೂ ಅಧಿಕಾರಿಗಳು ಯಾವುದೇ ಸ್ಪಂದನೆ ನೀಡುತ್ತಿಲ್ಲ ಎಂದು ಆರೋಪಿಸಿದರು. ಈ ಯೋಜನೆಯಿಂದ ಅಫಜಲಪುರ ತಾಲೂಕಿನ 10 ಕೆರೆಗಳಿಗೆ ನೀರು ಒದಗಿಸಲು ಸಾಧ್ಯವಾಗಲಿದ್ದು, ಇದು ರೈತರ ಪಾಲಿಗೆ ಮಹತ್ವದ ಯೋಜನೆಯಾಗಿದೆ. ಹೀಗಾಗಿ ಪೈಪ್‌ಲೈನ್ ಕಡಿತಗೊಳಿಸಿರುವುದನ್ನು ತಕ್ಷಣ ಸರಿಪಡಿಸಿ ಕಾಮಗಾರಿ ಮುಂದುವರಿಸಬೇಕು. ಈ ನಿಟ್ಟಿನಲ್ಲಿ ರೈತರು ಹೋರಾಟಕ್ಕೆ ಸಹಕಾರ ಹಾಗೂ ಬೆಂಬಲ ನೀಡಬೇಕು ಎಂದು ಅವರು ಮನವಿ ಮಾಡಿದರು.

ಪಾದಯಾತ್ರೆಯಲ್ಲಿ ಅಶೋಕ ಸವಳೇಶ್ವರ, ಗುರುಶಾಂತಪ್ಪ ಪಾಟೀಲ, ಶರಣಬಸಪ್ಪ ಭೋಸನೂರ, ಈರಣ್ಣ ಝುಳಕಿ, ರೇವಣಸಿದ್ದಪ್ಪ ನಾಗೂರ, ಆದಿನಾಥ ಹೀರಾ, ಸಿದ್ದರಾಮ ಪ್ಯಾಟಿ, ಬಾಬು ಗೊಬ್ಬುರ, ವೀರೇಂದ್ರ ಶೇಗಜಿ, ಆಸಿಫ್ ಮುಲ್ಲಾ ಯಳಸಂಗಿ, ಶ್ರೀಮಂತ ವಾಗದರ್ಗಿ, ಬಸವರಾಜ ಆಳಂದ, ಈರಣ್ಣ ಹತ್ತರಕಿ, ಲಿಂಗರಾಜ ಪಾಟೀಲ, ರೇವಣಪ್ಪ ನಾಗೂರೆ, ಆಲೂಗೌಡ ಪಾಟೀಲ, ಶಿವಕಿರಣ ಪಾಟೀಲ ಸೇರಿದಂತೆ ಸಾವಿರಾರು ರೈತರು ಭಾಗವಹಿಸಿದ್ದರು. ಪಾದಯಾತ್ರೆ ಹಿನ್ನೆಲೆಯಲ್ಲಿ ನಿಂಬರ್ಗಾ ಹಾಗೂ ಮಾದನ ಹಿಪ್ಪರಗಾ ಪೊಲೀಸ್ ಠಾಣೆಗಳ ವತಿಯಿಂದ ಇಂದೂಮತಿ ಹಾಗೂ ಮಹಾಂತೇಶ ಪಾಟೀಲ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.



ನುಲಿಯ ಚಂದಯ್ಯ ಜಯಂತಿ ಆಚರಣೆ

ಕನಕಗಿರಿ,ಆ.29-

ಪಟ್ಟಣದ ಕೊರವರ/ ಭಜಂತ್ರಿ ಸಮಾಜದ ಆಶ್ರಯದಲ್ಲಿ ನುಲಿಯ ಚಂದಯ್ಯ ಅವರ ಜಯಂತಿ ಶುಕ್ರವಾರ ಆಚರಿಸಲಾಯಿತು.

ನುಲಿಯ ಚಂದಯ್ಯ ಅವರ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಮಾಜದ ಅಧ್ಯಕ್ಷ ಚಿದಾನಂದ ಭಜಂತ್ರಿ ಅವರು ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

ನಂತರ ಮಾತನಾಡಿದ ಅವರು ಎಲ್ಲಾ ಸಮಸ್ಯೆಗಳಿಗೆ ಶಿಕ್ಷಣದಿಂದ ಪರಿಹಾರ ನೀಡಲು ಸಾಧ್ಯವಿದೆ ಸಮಾಜದವರು ವೃತ್ತಿ ಜೀವನದ ಜತೆಗೆ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕೆಂದು ತಿಳಿಸಿದರು.

ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಬೇಕೆಂದು ತಿಳಿಸಿದರು.

ಭಜಂತ್ರಿ ಸಮಾಜದವರು ಶ್ರಮ ಜೀವಿಗಳಾಗಿದ್ದು ಕುಲ ಕಸುಬುಗಳ ಜತೆಗೆ ಹಣ್ಣು ಮಾರಾಟ? ಮಾಡಿ ಜೀವನ ಸಾಗಿಸುತ್ತಿದ್ದಾರೆ, ಸರ್ಕಾರ ಸಾಲ ಸೌಲಭ್ಯಗಳನ್ನು ಒದಗಿಸಬೇಕೆಂದು? ಹೇಳಿದರು.

ಈ ವೇಳೆ ಪ್ರಮುಖರಾದ ಶೇಠ್ ಯಮನಪ್ಪ ಭಜಂತ್ರಿ, ಈರಪ್ಪ ಖ್ಯಾಡೆದ, ಹನುಮಂತಪ್ಪ ಮಾಳಗಿಮನೆ, ಹನುಮಂತಪ್ಪ ಲಸ್ಕರ್, ಲಕ್ಷ್ಮಣ ಭಜಂತ್ರಿ, ವೀರೇಶ ಭಜಂತ್ರಿ, ತಿಮ್ಮಣ್ಣ ಹಸ್ತಮನೆ, ಹುಲಗಪ್ಪ ಖ್ಯಾಡೆದ, ಕೆ. ಹುಲಗಪ್ಪ, ಹುಲಗಪ್ಪ ಮೀನಗಾರ ಇತರರು ಇದ್ದರು.

ಕೊಪ್ಪಳ ತಾಲೂಕಿನಲ್ಲಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ

ಕೊಪ್ಪಳ ಆ.29-

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ತಾಲೂಕಿನಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿರುವ ಕುರಿತು ಕೊಪ್ಪಳ ತಾಲೂಕು ಮಟ್ಟದ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆ ಗುರುವಾರ (ಆ.27) ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಸಮಿತಿ ಅಧ್ಯಕ್ಷರಾದ ಬಾಲಚಂದ್ರನ್ ಎಸ್. ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಗೃಹಲಕ್ಷ್ಮಿ ಯೋಜನೆ ಕುರಿತು ಮಾಹಿತಿ ನೀಡಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು, ಕೊಪ್ಪಳ ತಾಲೂಕಿನಲ್ಲಿ ಒಟ್ಟು 89,305 ಫಲಾನುಭವಿಗಳಿದ್ದು, ಈ ಪೈಕಿ 83,028 ಫಲಾನುಭವಿಗಳಿಗೆ ಜೂನ್ 2026ರವರೆಗೆ ತಲಾ ರೂ. 2,000 ರಂತೆ ಅನುದಾನ ಜಮೆಯಾಗಿದೆ ಎಂದು ತಿಳಿಸಿದರು.

ಸಮಿತಿ ಸದಸ್ಯರಾದ ಜ್ಯೋತಿ ಗೊಂಡಬಾಳ ಮಾತನಾಡಿ, ವಿವಿಧ ವಾರ್ಡ್ಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಗೃಹಲಕ್ಷ್ಮಿ ಯೋಜನೆಗೆ ಹೊಸ ಅರ್ಜಿಗಳನ್ನು ಸಲ್ಲಿಸುವಂತೆ ಸಾರ್ವಜನಿಕರಿಗೆ ಮಾಹಿತಿ ನೀಡುತ್ತಿದ್ದಾರೆ. ಈ ಕುರಿತು ಕಾರ್ಯಕರ್ತೆಯರಿಗೆ ಸ್ಪಷ್ಟ ಮಾರ್ಗದರ್ಶನ ನೀಡಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಅಧಿಕಾರಿಗಳು, ಹೊಸ ಅರ್ಜಿಗಳನ್ನು ಸ್ವೀಕರಿಸುವ ಕುರಿತು ಇಲಾಖೆಯಿಂದ ಯಾವುದೇ ನಿರ್ದೇಶನ ಬಂದಿಲ್ಲ ಎಂದು ಸ್ಪಷ್ಟಪಡಿಸಿದರು.

ಕೊಪ್ಪಳ ತಾಲೂಕಿನಲ್ಲಿ 1,913 ಗೃಹಲಕ್ಷ್ಮಿ ಫಲಾನುಭವಿಗಳು ಮೃತಪಟ್ಟಿದ್ದು, ಅವರ ವಿವರಗಳನ್ನು ಅಪ್‌ಡೇಟ್ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ಜುಲೈ ತಿಂಗಳಲ್ಲಿ 13 ಫಲಾನುಭವಿಗಳು ಮೃತಪಟ್ಟಿರುವ ಮಾಹಿತಿಯನ್ನೂ ಸಭೆಗೆ ನೀಡಲಾಯಿತು. ಮೃತ ಫಲಾನುಭವಿಗಳ ಗ್ರಾಮವಾರು ಮಾಹಿತಿಯನ್ನು ಪ್ರತಿ ತಿಂಗಳ ಪ್ರಗತಿ ವರದಿಯಲ್ಲಿ ಮಂಡಿಸುವತೆ ಪಂಚ ಗ್ಯಾರಂಟಿ ಯೋಜನೆಗಳ ತಾಲೂಕು ಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷರಾದ



ಬಾಲಚಂದ್ರನ್ ಎಸ್. ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗೃಹಜ್ಯೋತಿ ಯೋಜನೆ ಪರಿಶೀಲನೆ: ಗೃಹಜ್ಯೋತಿ ಯೋಜನೆಯ ಪರಿಶೀಲನಾ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು, ಕೊಪ್ಪಳ ತಾಲೂಕಿನಲ್ಲಿ 56,999 ಫಲಾನುಭವಿಗಳಿದ್ದಾರೆ. ಜುಲೈ 2026ರಲ್ಲಿ ರೂ. 2.84 ಕೋಟಿಗೂ ಅಧಿಕ ಸಹಾಯಧನ ವೆಚ್ಚವಾಗಿದ್ದು, ಕೊಪ್ಪಳ ವಿಭಾಗದಲ್ಲಿ ಇದುವರೆಗೆ ರೂ. 91.28 ಕೋಟಿ ವೆಚ್ಚವಾಗಿದೆ ಎಂದು ಜೆಸ್ಕಾಂ ಅಧಿಕಾರಿಗಳು ಮಾಹಿತಿ ನೀಡಿದರು. ಮುನಿರಾಬಾದ್ ಉಪವಿಭಾಗದಲ್ಲಿ 27,914 ಫಲಾನುಭವಿಗಳಿದ್ದು, ಜುಲೈ ತಿಂಗಳಲ್ಲಿ ರೂ. 1.36 ಕೋಟಿಗೂ ಅಧಿಕ ವೆಚ್ಚವಾಗಿದ್ದು, ಇದುವರೆಗೆರೂ. 43.78 ಕೋಟಿ ವೆಚ್ಚವಾಗಿದೆ.

ಶೇ.83ರಷ್ಟು ಫಲಾನುಭವಿಗಳ ಪರಿಶೀಲನಾ ಸರ್ವೆ ಪೂರ್ಣಗೊಂಡಿದ್ದು, ಮುಂದಿನ ತಿಂಗಳಲ್ಲಿ ಸಂಪೂರ್ಣಗೊಳಿಸುವುದಾಗಿ ಅಧಿಕಾರಿಗಳು ತಿಳಿಸಿದರು.

ಪಂಚ ಗ್ಯಾರಂಟಿ ಯೋಜನೆಗಳ ತಾಲೂಕು ಮಟ್ಟದ ಅನುಷ್ಠಾನ ಸಮಿತಿ ಸದಸ್ಯರಾದ ದೇವರಾಜ ನಡುವಿನಮನಿ ಮಾತನಾಡಿ, ಗೃಹಜ್ಯೋತಿ ಯೋಜನೆಯಡಿ ವಿದ್ಯುತ್ ಬಳಕೆಯಲ್ಲಿ ಉಂಟಾಗುವ ವ್ಯತ್ಯಾಸಗಳ ಕುರಿತು ಫಲಾನುಭವಿಗಳಿಗೆ ಲೈನ್‌ಮನ್‌ಗಳ ಮೂಲಕ ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ತಿಳಿಸಿದರು. ಅಲ್ಲದೆ, ವಾರ್ಡ್ಗಳಲ್ಲಿ ವಿದ್ಯುತ್ ಟ್ರಾನ್ಸ್ಫಾರ್ಮರ್‌ಗಳ ಸುತ್ತ ಬೆಳೆದಿರುವ ಗಿಡಗಂಟಿಗಳಿದ ವಿದ್ಯುತ್ ಸರಬರಾಜಿಗೆ ವ್ಯತ್ಯಯವಾಗದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಪಡಿತರ ವಿತರಣೆಯಲ್ಲಿ ಸಮಸ್ಯೆ ನಿವಾರಣೆಗೆ ಸೂಚನೆ: ಎಪಿಎಲ್ ಕಾರ್ಡ್ದಾರರಿಗೆ ಆಹಾರ ಧಾನ್ಯ ವಿತರಣೆ ಇರುವುದಿಲ್ಲ ಎಂಬ ಮಾಹಿತಿ ಸಾರ್ವಜನಿಕರಿಗೆ ತಿಳಿದಿದ್ದರೂ, ಅರ್ಹರು ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಎಪಿಎಲ್ ಕಾರ್ಡ್ಗಳನ್ನು ತ್ವರಿತವಾಗಿ ವಿತರಿಸುವಂತೆ ಅನುಷ್ಠಾನಾಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.

ನ್ಯಾಯಬೆಲೆ ಅಂಗಡಿಗಳ ಮಾಲೀಕರಿಗೆ ಇಲಾಖೆಯಿಂದ ಸಮರ್ಪಕ ಮಾರ್ಗದರ್ಶನ ನೀಡಬೇಕು ಎಂದು ದೇವರಾಜ ನಡುವಿನಮನಿ ಒತ್ತಾಯಿಸಿದರು. ಮೆಹಬೂಬ ಪಾಶಾ ಮಾತನಾಡಿ, ಪಡಿತರ ಪಡೆಯಲು ಬರುವ ಕಾರ್ಡ್ದಾರರಿಗೆ ಸರ್ವರ್ ಬ್ಯುಸಿ ಎಂಬ ಕಾರಣ ನೀಡಿ ಹಿಂದಕ್ಕೆ ಕಳುಹಿಸಲಾಗುತ್ತಿದೆ ಎಂಬ ದೂರುಗಳಿದ್ದು, ಇಂತಹ ಸಮಸ್ಯೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಬಸ್‌ಗಳ ಸ್ವಚ್ಛತೆ, ನಾಮಫಲಕ ಸರಿಪಡಿಸಲು ಸೂಚನೆ: ಸಭೆಯಲ್ಲಿ ಸಾರಿಗೆ ವ್ಯವಸ್ಥೆಯ ಬಗ್ಗೆಯೂ ಚರ್ಚೆ ನಡೆಯಿತು. ಬಸ್‌ಗಳಲ್ಲಿ ಸ್ವಚ್ಛತೆ ಇಲ್ಲದಿರುವುದು ಹಾಗೂ ಮುಂಭಾಗ ಮತ್ತು ಹಿಂಭಾಗದಲ್ಲಿ ಬೇರೆ ಬೇರೆ ನಾಮಫಲಕಗಳಿರುವುದರಿಂದ ಪ್ರಯಾಣಿಕರಿಗೆ ಗೊಂದಲ ಉಂಟಾಗುತ್ತಿದೆ. ಈ ಸಮಸ್ಯೆಗಳನ್ನು ತಕ್ಷಣ ಸರಿಪಡಿಸುವಂತೆ ಸಮಿತಿ ಸದಸ್ಯರಾದ ಮೆಹಬೂಬ ಪಾಶಾ ತಿಳಿಸಿದರು.

ಕೊಪ್ಪಳ ವಿಭಾಗದ ಬಸ್‌ಗಳು ಟಣಕನಕಲ್ ಮೊರಾರ್ಜಿ ಶಾಲೆಯ ಬಳಿ ನಿಲುಗಡೆ ಮಾಡುವಂತೆ ಸೂಚಿಸಲಾಯಿತು. ಸದಸ್ಯ ಲಕ್ಷ್ಮಣ ಡೊಳ್ಳಿನ ಮಾತನಾಡಿ, ಜಿಲ್ಲಾಸ್ಪತ್ರೆ ಸ್ಥಳಾಂತರಗೊಂಡಿರುವ ಹಿನ್ನೆಲೆಯಲ್ಲಿ ಕೊಪ್ಪಳ ಡಿಪೋಗೆ ಸೇರಿದ ಬಸ್‌ಗಳು ಬೈಪಾಸ್ ಮೂಲಕ ತೆರಳದೆ ಜಿಲ್ಲಾಸ್ಪತ್ರೆ ಮುಂಭಾಗ ನಿಲುಗಡೆ ಮಾಡಿ, ಗಿಣಿಗೇರಾ ಮಾರ್ಗವಾಗಿ ಗಂಗಾವತಿಗೆ ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪಂಚ ಗ್ಯಾರಂಟಿ ಯೋಜನೆಗಳ ಪೈಕಿ ನಾಲ್ಕು ಯೋಜನೆಗಳು ಸಾರ್ವಜನಿಕರಿಗೆ ಸಮರ್ಪಕವಾಗಿ ತಲುಪುತ್ತಿದ್ದು, ಯುವನಿಧಿ ಯೋಜನೆ ಮಾತ್ರ ನಿರೀಕ್ಷಿತ ಮಟ್ಟದಲ್ಲಿ ಅನುಷ್ಠಾನವಾಗುತ್ತಿಲ್ಲ ಎಂದು ಸಮಿತಿ ಸದಸ್ಯರಾದ ಜ್ಯೋತಿ ಗೊಂಡಬಾಳ ಅವರು ಹೇಳಿದರು.

ಯುವನಿಧಿ ಕುರಿತು ಗ್ರಾಮವಾರು ಹಾಗೂ ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿರುವ ಬಗ್ಗೆ ಮಾಹಿತಿ ಕೇಳಿದಾಗ, ಗಂಗಾವತಿ ಮತ್ತು ಕುಷ್ಟಗಿ ಪಟ್ಟಣಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ಕೊಪ್ಪಳದಲ್ಲಿ ಕಾರ್ಯಕ್ರಮಕ್ಕೆ ದಿನಾಂಕ ನಿಗದಿಯಾದ ಕೂಡಲೇ ಎಲ್ಲ ಸಮಿತಿ ಸದಸ್ಯರಿಗೆ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸಭೆಯಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಅನುಷ್ಠಾನ ಸಮಿತಿ ಸದಸ್ಯರಾದ ದೇವರಾಜ ನಡುವಲಮನಿ, ಸವಿತಾ ಗೊರಂಟ್ಲಿ, ಪರಶುರಾಮು ಕೊರವರ, ಮೆಹಬೂಬ ಪಾಶಾ, ಜ್ಯೋತಿ ಗೊಂಡಬಾಳ, ಲಕ್ಷ್ಮಣ ಡೊಳ್ಳಿನ, ಅನ್ನದಾನಸ್ವಾಮಿ, ಆನಂದ ಹಿರೇಕಾಸನಕಂಡಿ, ಅನ್ವರ ಹುಸೇನ ಗಡಾದ, ಪಂಚ ಗ್ಯಾರಂಟಿ ಯೋಜನೆಗಳ ಇಲಾಖಾಧಿಕಾರಿಗಳು ಹಾಗೂ ತಾಲೂಕು ಪಂಚಾಯಿತಿ ಸಿಬ್ಬಂದಿ ಉಪಸ್ಥಿತರಿದ್ದರು.


ಹವಾಮಾನ ಸ್ನೇಹಿ, ಸುಸ್ಥಿರ ಭತ್ತದ ಕೃಷಿಗೆ ರೈತರು ಮುಂದಾಗಬೇಕು- ಡಾ.ಪ್ರಮೋದ ಕಟ್ಟಿ

ಕೊಪ್ಪಳ,ಆ.29-

ಜಾಗತಿಕ ತಾಪಮಾನ ಏರಿಕೆ, ಬರ ಹಾಗೂ ಪ್ರವಾಹದಂತಹ ಹವಾಮಾನ ವೈಪರೀತ್ಯಗಳಿಂದ ಕೃಷಿ ಕ್ಷೇತ್ರದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದ್ದು, ರೈತರು ಹವಾಮಾನ ಸ್ನೇಹಿ ಹಾಗೂ ಸುಸ್ಥಿರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ಎಂಪ್ರಿ, ಬೆಂಗಳೂರಿನ ನಿರ್ದೇಶಕ ಡಾ. ಪ್ರಮೋದ ಕಟ್ಟಿ ಕರೆ ನೀಡಿದರು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳದಲ್ಲಿ ಪ್ರಾಜೆಕ್ಟ್ ಸಮೃದ್ಧಿ ಸಹಯೋಗದೊಂದಿಗೆ ಆಗಸ್ಟ್ 27ರಂದು ಆಯೋಜಿಸಿದ್ದ ಹವಾಮಾನ ಸ್ನೇಹಿ ಮತ್ತು ಸುಸ್ಥಿರ ಭತ್ತದ ಕೃಷಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭತ್ತದ ಬೆಳೆಯಲ್ಲಿ ನೀರನ್ನು



ಆರಿಸಿ ಬಿಡುವ ಪದ್ಧತಿ ಅಳವಡಿಸಿಕೊಂಡರೆ ನೀರಿನ ಬಳಕೆಯನ್ನು ಕಡಿಮೆ ಮಾಡುವುದರ ಜೊತೆಗೆ ರೋಗ ಮತ್ತು ಕೀಟಗಳ ಬಾಧೆಯನ್ನು ತಗ್ಗಿಸಬಹುದು.

ಅಲ್ಲದೆ, ಗದ್ದೆಗಳಿಂದ ವಾತಾವರಣಕ್ಕೆ ಬಿಡುಗಡೆ ಯಾಗುವ ಮೀಥೇನ್ ಅನಿಲದ ಪ್ರಮಾಣವನ್ನೂ ಕಡಿಮೆ ಮಾಡಬಹುದು ಎಂದು ಅವರು ತಿಳಿಸಿದರು.

ಸ್ಟ್ರಿಂಗ್ ಬಯೋ ಕಂಪನಿಯ ಬೆಂಗಳೂರು ಪ್ರತಿನಿಧಿ ಸಂಗ್ರಾಮ್ ನಾಯಕ್ ಮಾತನಾಡಿ, ಭತ್ತದ ಬೆಳೆಯಲ್ಲಿ ಕ್ಲೀನ್ ರೈಸ್ ಜೈವಿಕ ಉತ್ಪನ್ನ ಬಳಕೆಯಿಂದಾಗುವ ಪ್ರಯೋಜನಗಳ ಕುರಿತು ಮಾಹಿತಿ ನೀಡಿದರು. ಪ್ರಾಜೆಕ್ಟ್ ಸಮೃದ್ಧಿ ಯೋಜನೆಯಡಿ ಕ್ಲೀನ್ ರೈಸ್ ಜೈವಿಕ ಉತ್ಪನ್ನವನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದ್ದು, ಇದರ ಬಳಕೆಯಿಂದ ಮಣ್ಣಿನ ಫಲವತ್ತತೆ ಹಾಗೂ ಭತ್ತದ ಇಳುವರಿ ಹೆಚ್ಚುವುದರೊಂದಿಗೆ ಮೀಥೇನ್ ಅನಿಲದ ಹೊರಸೂಸುವಿಕೆಯೂ ಕಡಿಮೆಯಾಗುತ್ತದೆ ಎಂದರು.

ನ್ಯೂರಿಜೆನ್ ಕಂಪನಿ, ದಾವಣಗೆರೆಯ ನಿರ್ದೇಶಕ ಬಿ.ಪಿ. ಗಂಗಾಧರಸ್ವಾಮಿ ಮಾತನಾಡಿ, ಪ್ರಾಜೆಕ್ಟ್ ಸಮೃದ್ಧಿ ಯೋಜನೆಯು ಕ್ಲೀನ್ ರೈಸ್ ಬಳಕೆಯ ಮೂಲಕ ಭತ್ತದ ಇಳುವರಿಯನ್ನು ಹೆಚ್ಚಿಸುವುದರ ಜೊತೆಗೆ ಹಸಿರುಮನೆ ಅನಿಲಗಳ ಹೊರಸೂಸುವಿಕೆಯನ್ನು ತಗ್ಗಿಸುವ ಉದ್ದೇಶ ಹೊಂದಿದೆ ಎಂದು ವಿವರಿಸಿದರು. ಕ್ಲೀನ್ ರೈಸ್ ಭತ್ತದ ಬೆಳವಣಿಗೆಯನ್ನು ಉತ್ತೇಜಿಸುವ ಹಾಗೂ ಗದ್ದೆಗಳಿಂದ ಬಿಡುಗಡೆಯಾಗುವ ಮೀಥೇನ್ ಅನಿಲವನ್ನು ಕಡಿಮೆಗೊಳಿಸುವ ಜೀವಾಣು ಆಧಾರಿತ ಆಧುನಿಕ ಜೈವಿಕ ಉತ್ಪನ್ನವಾಗಿದೆ ಎಂದು ತಿಳಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಸೋನಿಯಾ ಆತ್ಮಕಥನ ಕುರಿತು ಮೋದಿಗೇಕೆ ಭಯ?

ಸೋನಿಯಾ ಅವರ ಪುಸ್ತಕದಲ್ಲಿ ಏನಿದೆ ಎಂಬುದಕ್ಕಿಂತ, ಅದರಲ್ಲಿ ಏನನ್ನು ಭಾರತೀಯರು ಓದಬಾರದು ಎಂಬುದು ಪ್ರಮುಖ ಪ್ರಶ್ನೆಯಾಗಿದೆ. ಈ ಜಟಿಲ ಪರಿಸ್ಥಿತಿಯಲ್ಲಿ; ಭಾರತದ ಆಳುವವರಿಗೆ ಮುಜುಗರ ಆಗಬಹುದಾದ ಸಂಗತಿಯನ್ನು ದಿಟ್ಟವಾಗಿ ಪ್ರಕಟಿಸಲು ಪ್ರಕಾಶಕರಿಗೆ ಹೆಚ್ಚಿನ ಧೈರ್ಯ ಬೇಕಾಗಿದೆ!

ಒಂದು ಪುಸ್ತಕ ಇನ್ನೂ ಭಾರತೀಯ ಓದುಗರ ಕೈಗೆ ಬಂದಿಲ್ಲ. ಅದರ ಸಂಪೂರ್ಣ ಪಠ್ಯ ಸಾರ್ವಜನಿಕವಾಗಿಲ್ಲ, ಯಾವ ಪುಟದಲ್ಲಿ ಯಾವ ವಾಕ್ಯ ಇದೆ ಎಂಬುದೂ ಬಹುತೇಕರಿಗೆ ಗೊತ್ತಿಲ್ಲ. ಆದರೂ ಆ ಪುಸ್ತಕ ಈಗಾಗಲೇ ರಾಜಕೀಯ ವಲಯದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದೆ. ಆಳುವವರಲ್ಲಿ ಆತಂಕ-ಭಯವನ್ನೂ ಹುಟ್ಟುಹಾಕಿರುವಂತೆಯೂ ತೋರುತ್ತದೆ.

ಸೋನಿಯಾ ಗಾಂಧಿ ಅವರ : ಆತ್ಮಕಥನದ ಭಾರತ ಪ್ರಕಟಣೆ ವಿಚಾರದಲ್ಲಿ ಸುತ್ತುವರಿದಿರುವ ವಿವಾದವು ಕೇವಲ ಪ್ರಕಾಶನ ಒಪ್ಪಂದದ ವೈಫಲ್ಯ ಮಾತ್ರವಲ್ಲ. ಪ್ರಧಾನಿ ನರೇಂದ್ರ ಮೋದಿ, ಮತ್ತು ಚೀನಾ ಗಡಿ ಅತಿಕ್ರಮಣಕ್ಕೆ ಸಂಬಂಧಿಸಿದ ಕೆಲವು ಭಾಗಗಳನ್ನು ಬದಲಾಯಿಸುವ ಅಥವಾ ತೆಗೆದುಹಾಕುವುದರ ಕುರಿತಾದ ಗಂಭೀರ ವಿಚಾರ.

ಆತ್ಮಕಥನದ ಪ್ರಕಟಣೆಗೆ ಮುಂದಾಗಿದ್ದ ಸಂಸ್ಥೆಯು ಪುಸ್ತಕದಲ್ಲಿನ ಪ್ರಮುಖ ವಿಚಾರಗಳನ್ನು ತಿದ್ದಲು, ತಿಳಿಗೊಳಿಸಲು ಹಾಗೂ ತೆಗೆದುಹಾಕಲು ಸೂಚಿಸಿತ್ತು. ಆದರೆ, ಸೋನಿಯಾ ಗಾಂಧಿ ಅದಕ್ಕೆ ಒಪ್ಪದ ಕಾರಣ, ಪ್ರಕಟಣೆಯ ಮಾತುಕತೆ ಮುರಿದುಬಿದ್ದಿದೆ ಎಂದು ವರದಿಗಳು ಹೇಳುತ್ತಿವೆ. ಅಂದರೆ, ಒಂದು ಆತ್ಮಕಥೆಯ ಮೂರು ಅಥವಾ ನಾಲ್ಕು ಭಾಗಗಳು ಆಳುವವರ ಆತಂಕಕ್ಕೆ ಕಾರಣವಾಗಿದೆ.

ಸೋನಿಯಾ ಗಾಂಧಿ ತಮ್ಮ ದೀರ್ಘ ರಾಜಕೀಯ ಜೀವನದಲ್ಲಿ ನೇರವಾಗಿ ಕಂಡದ್ದು, ಅನುಭವಿಸಿದ್ದು ಮತ್ತು ರಾಜಕೀಯವಾಗಿ ಎದುರಿಸಿದ ಘಟನೆಗಳನ್ನು ಆತ್ಮಕಥನದಲ್ಲಿ ಬರೆದಿದ್ದಾರೆ. ಪ್ರಧಾನಿ ಮೋದಿ ಅವರೊಂದಿಗಿನ ತಮ್ಮ ಭೇಟಿಗಳು, ಅವರ ಬಗ್ಗೆ ತಮ್ಮ ಅಭಿಪ್ರಾಯಗಳು, ಹಿಂದಿನ ಪ್ರಧಾನಿಗಳೊಂದಿಗೆ ಮೋದಿಯ ಹೋಲಿಕೆಗಳು ಹಾಗೂ ರಾಜಕೀಯ ಘಟನೆಗಳ ಕುರಿತ ತಮ್ಮ ಮೌಲ್ಯಮಾಪನಗಳನ್ನು ಪುಸ್ತಕದಲ್ಲಿ ದಾಖಲಿಸಿದ್ದಾರೆ. ಜೊತೆಗೆ, ತಮ್ಮನ್ನು ಮೋದಿ ಅವರು ಜರ್ಸಿ ಹಸು ಎಂದು ಮೂದಲಿಸಿದ್ದನ್ನೂ ಉಲ್ಲೇಖಿಸಿದ್ದಾರೆ. ಅದೇ ಕಾರಣಕ್ಕೆ ಪುಸ್ತಕದ ಕೆಲವು ಭಾಗಗಳು ಸಾಮಾನ್ಯ ರಾಜಕೀಯ ಟೀಕೆಗಿಂತ ಹೆಚ್ಚು ಪರಿಣಾಮಕಾರಿಯಾಗಿವೆ. ಇದು ಮೋದಿ ಮತ್ತು ಅವರ ಪಕ್ಷಕ್ಕೆ ಭೀತಿ ಸೃಷ್ಟಿಸಿದೆ.

ರಾಜಕಾರಣಿಯೊಬ್ಬರು ವೇದಿಕೆಯಲ್ಲಿ ಹೇಳುವ ಮಾತು ಒಂದು ದಿನ ಸುದ್ದಿಯಾಗಬಹುದು; ಆದರೆ ಆತ್ಮಕಥೆಯಲ್ಲಿ ಬರೆದಿರುವ ಮಾತು ಬೇರೆ ರೀತಿಯ ರಾಜಕೀಯ ದಾಖಲೆಯಾಗಿ ಉಳಿಯುತ್ತದೆ. ಅದು ಮುಂದಿನ ಪೀಳಿಗೆಗೆ ಇತಿಹಾಸವನ್ನು ವಿವರಿಸುತ್ತದೆ. ಇಂದಿನ ಆಡಳಿತಗಾರರ ಬಗ್ಗೆ ನಾಳೆಯ ಇತಿಹಾಸಕಾರರು ಯಾವ ದಾಖಲೆಗಳನ್ನು ಆಧರಿಸುತ್ತಾರೆ ಎಂಬುದರಲ್ಲಿ ಇಂತಹ ಆತ್ಮಕಥೆಗಳ ಪಾತ್ರ ದೊಡ್ಡದು. ಅದಕ್ಕೇ ಆತ್ಮಕಥೆಗಳು- ವಿಶೇಷವಾಗಿ ಅಧಿಕಾರದಲ್ಲಿರುವವರ ಕುರಿತು ವೈಯಕ್ತಿಕ ಅನುಭವ, ಆಪ್ತ ಭೇಟಿಗಳು, ಸಂಭಾಷಣೆಗಳು ಹಾಗೂ ರಾಜಕೀಯ ಮೌಲ್ಯಮಾಪನಗಳಿದ್ದಾಗ- ಆಳುವವರಿಗೆ ಅಸಹಜ ಆತಂಕ ಸೃಷ್ಟಿಸುತ್ತವೆ.

ಲಭ್ಯ ಮಾಹಿತಿ ಪ್ರಕಾರ, ಸೋನಿಯಾ ತಮ್ಮ ಆತ್ಮಕಥನದಲ್ಲಿ ಭಾರತಚೀನಾ ಸಂಬಂಧ, ಗಡಿ ನುಸುಳುವಿಕೆ ಹಾಗೂ ಅರುಣಾಚಲ ಪ್ರದೇಶ ಸೇರಿದಂತೆ ಭಾರತೀಯ ಭೂಪ್ರದೇಶದ ಮೇಲೆ ಚೀನಾದ ಅತಿಕ್ರಮಣದ ಕುರಿತು ಉಲ್ಲೇಖಿಸಿದ್ದಾರೆ. ಗಾಲ್ವಾನ್ ನಂತರದ ವಾಸ್ತವ ನಿಯಂತ್ರಣ ರೇಖೆಯ ಪರಿಸ್ಥಿತಿ, ಚೀನಾದ ಪ್ರವೇಶಗಳ ಕುರಿತು ವಿರೋಧ ಪಕ್ಷಗಳು ಎತ್ತಿದ ಪ್ರಶ್ನೆಗಳು, ಭಾರತೀಯ ಸೇನೆಯ ಪೆಟ್ರೋಲಿಂಗ್ ಹಕ್ಕುಗಳು, ಸರ್ಕಾರದ ಅಧಿಕೃತ ಹೇಳಿಕೆಗಳು ಹಾಗೂ ನೆಲಮಟ್ಟದ ವಾಸ್ತವ ಚಿತ್ರಣಗಳ ಕುರಿತು ಸೋನಿಯಾ ತಮ್ಮ ಪುಸ್ತಕದಲ್ಲಿ ಚರ್ಚಿಸಿದ್ದಾರೆ.

ಗಮನಾರ್ಹವಾಗಿ, ಕಳೆದೊಂದು ದಶಕದಲ್ಲಿ ''ಭಾರತದ ಭೂಪ್ರದೇಶದಲ್ಲಿ ಚೀನಾ ಎಷ್ಟು ಒಳಬಂದಿದೆ? ತನ್ನದೇ ನೆಲದಲ್ಲಿ ಭಾರತಕ್ಕೆ ಎಷ್ಟು ಪ್ರದೇಶಗಳ ಪ್ರವೇಶ ಕಳೆದುಹೋಗಿದೆ? ವಾಸ್ತವ ನಿಯಂತ್ರಣ ರೇಖೆಯಲ್ಲಿನ ಸ್ಥಿತಿ ಏನು? ಸಂಸತ್ತಿನಲ್ಲಿ ಸಂಪೂರ್ಣ ಚರ್ಚೆ ಯಾಕಿಲ್ಲ'' ಎಂಬ ಪ್ರಶ್ನೆಗಳನ್ನು ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ನಿರಂತರವಾಗಿ ಎತ್ತುತ್ತಿವೆ. ಇಂತಹ ಸಂದರ್ಭದಲ್ಲಿ ಮೂರು ದಶಕಗಳ ರಾಜಕೀಯ ಅನುಭವ ಹೊಂದಿರುವ ಸೋನಿಯಾ ಗಾಂಧಿ ತಮ್ಮ ಆತ್ಮಕಥೆಯಲ್ಲಿ ಚೀನಾ ಪ್ರಶ್ನೆಯನ್ನು ದಾಖಲಿಸಿದ್ದರೆ, ಅದು ಸಾಮಾನ್ಯ ಪಕ್ಷದ ಹೇಳಿಕೆಯಾಗಿ ಉಳಿಯುವುದಿಲ್ಲ, ಅದು ಅವರ ರಾಜಕೀಯ ಸಾಕ್ಷ್ಯವಾಗಿ ಓದಲಾಗುತ್ತದೆ. ಆದಾಗ್ಯೂ, ಈ ಉಲ್ಲೇಖಗಳಿಗೆ ಪೆಂಗ್ವಿನ್ ಇಂಡಿಯಾ ಆಕ್ಷೇಪ ವ್ಯಕ್ತಪಡಿಸಿದೆ.

ಮುಖ್ಯವಾಗಿ, ಸೋನಿಯಾ ಅವರು ಬರೆದಿರುವ ಪರಿಪೂರ್ಣ ಪುಸ್ತಕವನ್ನು ಯಥಾವತ್ತಾಗಿ ಪೆಂಗ್ವಿನ್ ರ್ಯಾಂಡಮ್ ಹೌಸ್‌ನ ಭಾಗವಾಗಿರುವ . ಜಾಗತಿಕವಾಗಿ ಪ್ರಟಿಸುತ್ತಿದೆ. ನವೆಂಬರ್ 10ರಂದು ಪುಸ್ತಕ ಪ್ರಕಟಣೆಗೊಳ್ಳಲಿದೆ. ಆದರೆ, ಪೆಂಗ್ವಿನ್‌ನ ಭಾರತೀಯ ಘಟಕ ಮಾತ್ರವೇ ಆಕ್ಷೇಪಗಳನ್ನು ಎತ್ತಿದೆ. ಇದರ ಹಿಂದೆ, ಮೋದಿ ಸರ್ಕಾರದ ಒತ್ತಡ ಇರುವುದನ್ನು ತಳ್ಳಿಹಾಕಲು ಸಾಧ್ಯವೇ ಇಲ್ಲ!

ಈ ಹಿಂದೆ, ಮಾಜಿ ಸೇನಾ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ಇನ್ನೂ ಪ್ರಕಟವಾಗದ ಆತ್ಮಕಥೆಯ ವಿಷಯದಲ್ಲಿಯೂ ಇದೇ ಪೆಂಗ್ವಿನ್ ಇಂಡಿಯಾ ಪ್ರಕಾಶನ ಸಂಸ್ಥೆ ವಿವಾದಕ್ಕೆ ಸಿಲುಕಿತ್ತು. ಆ ಪುಸ್ತಕದಲ್ಲಿನ ಚೀನಾ ಗಡಿ ಘಟನೆಗಳ ಉಲ್ಲೇಖಗಳು ಸಂಸತ್ತಿನಲ್ಲಿ ದೊಡ್ಡ ಗದ್ದಲಕ್ಕೆ ಕಾರಣವಾಗಿದ್ದವು. ರಾಹುಲ್ ಗಾಂಧಿ ಅದರ ಕೆಲವು ಅಂಶಗಳನ್ನು ಪ್ರಸ್ತಾಪಿಸಲು ಮುಂದಾದಾಗ ವಿರೋಧವೂ ಎದುರಾಗಿತ್ತು. ಇಂತಹ ಘಟನೆಗಳು ಒಂದಕ್ಕೊಂದು ಸೇರಿಕೊಂಡಾಗ, ಸಮಸ್ಯೆ ಒಂದೇ ಪುಸ್ತಕದ ಬಗ್ಗೆಯಲ್ಲ. ಅದರಲ್ಲಿ ಕಟು ವಾಸ್ತವಗಳ ಕುರಿತು ಆಳುವವರಿಗೆ ಇರುವ ಭಯ ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ.

ಆದ್ದರಿಂದಲೇ, ಸೋನಿಯಾ ಅವರ ಪುಸ್ತಕದ ವಿಚಾರದಲ್ಲಿ, ''ಜಗತ್ತಿನಾದ್ಯಂತ ಮುದ್ರಣವಾಗುತ್ತಿರುವ ಪುಸ್ತಕವನ್ನು ಭಾರತದಲ್ಲಿ ಪ್ರಕಟಿಸಲು ಯಾವ ಕಾರಣ ಅಥವಾ ಯಾವ ಒತ್ತಡ ತಡೆಯುತ್ತಿದೆ. ಮೋದಿ ಸರ್ಕಾರದ ಅವಧಿಯಲ್ಲಿ ಚೀನಾ ಭಾರತೀಯ ಭೂಪ್ರದೇಶವನ್ನು ಆಕ್ರಮಿಸಿಕೊಂಡಿರುವ ಕುರಿತು ಬರೆಯಲಾಗಿರುವ ಭಾಗಗಳನ್ನು ತೆಗೆದುಹಾಕುವಂತೆ ಪೆಂಗ್ವಿನ್ ಇಂಡಿಯಾ ಮೇಲೆ ಪ್ರಧಾನಿ ನರೇಂದ್ರ ಮೋದಿ, ಆರ್‌ಎಸ್‌ಎಸ್‌ನಿಂದ ಒತ್ತಡ ಹಾಕಲಾಗಿದೆ'' ಎಂದು ಕಾಂಗ್ರೆಸ್ ನಾಯಕರು ಕೂಡ ಆರೋಪಿಸಿದ್ದಾರೆ.

ಮಿಗಿಲಾಗಿ, ಆತ್ಮಕಥೆ ಎಂದರೆ ಲೇಖಕಿಯ ದೃಷ್ಟಿಕೋನವೇ ಕೇಂದ್ರವಾಗಿರುವ ಕೃತಿ. ಆ ದೃಷ್ಟಿಕೋನವನ್ನೇ ಬದಲಿಸಬೇಕು ಅಥವಾ ತಿಳಿಗೊಳಿಸಬೇಕು ಎಂಬುದು ಪರಿಷ್ಕರಣೆಗಿಂತ ಹೆಚ್ಚಾಗಿ ನಿಯಂತ್ರಣ-ನಿರ್ಬಂಧದ ಪ್ರಶ್ನೆಯಾಗುತ್ತದೆ.

ಒಂದು ವೇಳೆ, ಪುಸ್ತಕದಲ್ಲಿ ಕೆಲವು ಉಲ್ಲೇಖಗಳು ತಪ್ಪಾಗಿದ್ದರೆ ಅದನ್ನು ವಿಮರ್ಶಿಸಬಹುದು. ವಾಸ್ತವದೋಷವಿದ್ದರೆ ದಾಖಲೆಗಳೊಂದಿಗೆ ಬಯಲು ಮಾಡಬಹುದು, ಮಾನಹಾನಿಕರ ಅಂಶವಿದ್ದರೆ ಕಾನೂನಾತ್ಮಕವಾಗಿ ಎದುರಿಸಬಹುದು, ಮೋದಿ ಕುರಿತು ಸೋನಿಯಾ ಗಾಂಧಿ ಬರೆದಿರುವುದು ಪಕ್ಷಪಾತಪೂರ್ಣವೆಂದರೆ ಬಿಜೆಪಿ ತನ್ನ ಪ್ರತಿವಾದವನ್ನು ಪ್ರಕಟಿಸಬಹುದು, ಬಗ್ಗೆ ತಪ್ಪು ಬರಹವಿದ್ದರೆ, ದಾಖಲೆಗಳೊಂದಿಗೆ ಪ್ರತಿಕ್ರಿಯಿಸಬಹುದು ಹಾಗೂ ಚೀನಾ ಕುರಿತು ತಪ್ಪು ಮಾಹಿತಿ ಇದ್ದರೆ ಸರ್ಕಾರ ಅಧಿಕೃತ ದಾಖಲೆಗಳನ್ನು ಬಿಡುಗಡೆ ಮಾಡಬಹುದು. ಇದೇ ಪ್ರಜಾಪ್ರಭುತ್ವದ ಸರಿಯಾದ ವಿಧಾನ.

ಆದರೆ, ಓದುಗರಿಗೆ ತಲುಪುವ ಮೊದಲೇ ಪಠ್ಯವನ್ನು ಸರಳೀಕರಿಸುವುದು ಅಥವಾ ಅಳಿಸುವುದು ಅಕ್ಷಮ್ಯ. ಖಂಡನೀಯ.

ಪ್ರಜಾಪ್ರಭುತ್ವ ಎಂದರೆ, ಎಲ್ಲ ದನಿಗಳಿಗೂ ಮುಕ್ತ ಅಭಿವ್ಯಕ್ತಿಯ ಅವಕಾಶ ಇರಬೇಕು, ವಿಮರ್ಶೆಗೆ ಜಾಗ ಒದಗಿಸಬೇಕು. ಆದರೆ, ಮೋದಿ ಆಡಳಿತದಲ್ಲಿ ನಮಗೆ ಇಷ್ಟವಾದ ಮಾತುಗಳಿಗೆ ಸ್ವಾತಂತ್ರ್ಯ- ವಿರೋಧಿ ಧ್ವನಿಯ ದಮನ ವ್ಯವಸ್ಥಿತವಾಗಿ ನಡೆಯುತ್ತಿದೆ.

ಈಗ, ಸೋನಿಯಾ ಅವರ ಪುಸ್ತಕದಲ್ಲಿ ಏನಿದೆ ಎಂಬುದಕ್ಕಿಂತ, ಅದರಲ್ಲಿ ಏನನ್ನು ಭಾರತೀಯರು ಓದಬಾರದು ಎಂಬುದು ಪ್ರಮುಖ ಪ್ರಶ್ನೆಯಾಗಿದೆ. ಈ ಜಟಿಲ ಪರಿಸ್ಥಿತಿಯಲ್ಲಿ; ಭಾರತದ ಆಳುವವರಿಗೆ ಮುಜುಗರ ಆಗಬಹುದಾದ ಸಂಗತಿಯನ್ನು ದಿಟ್ಟವಾಗಿ ಪ್ರಕಟಿಸಲು ಪ್ರಕಾಶಕರಿಗೆ ಹೆಚ್ಚಿನ ಧೈರ್ಯ ಬೇಕಾಗಿದೆ!

ಮೋದಿ ಸರ್ಕಾರದಿಂದ ಕಾರ್ಪೊರೇಟ್‌ಗಳಿಗೆ 10 ಲಕ್ಷ ಕೋಟಿ ಸಾಲ ಮನ್ನಾ; ಕವಡೆ ಕಾಸಿನ ಪರಿಹಾರವಿಲ್ಲದೆ ನೇಣಿಗೇರಿದ ಲಕ್ಷಾಂತರ ರೈತರು

ಕಳೆದ ಒಂದು ದಶಕದ ಮೋದಿ ಸರ್ಕಾರದ ಆರ್ಥಿಕ ನೀತಿಯು ಬಂಡವಾಳಶಾಹಿಗಳಿಗೆ ಬೆಣ್ಣೆ, ರೈತರಿಗೆ ಸುಣ್ಣ ಎಂಬ ತಾರತಮ್ಯದ ಅಡಿಪಾಯದ ಮೇಲೆ ನಿಂತಿದೆ. ಉದ್ಯಮಿಗಳ ಲಕ್ಷಾಂತರ ಕೋಟಿ ರೂಪಾಯಿಗಳ ಎನ್‌ಪಿಎ ಸುಲಭವಾಗಿ ಲೆಕ್ಕದ ಪುಸ್ತಕದಿಂದ ಅಳಿಸಿಹೋಗುತ್ತಿರುವಾಗ, ಅದೇ ಲೆಕ್ಕದ ಪುಸ್ತಕದಲ್ಲಿರುವ ಕೆಲವು ಸಾವಿರಗಳ ಸಾಲದ ಬಾಕಿ ರೈತನ ಉಸಿರನ್ನೇ ಶಾಶ್ವತವಾಗಿ ಅಳಿಸುತ್ತಿದೆ. ಈ ಕಟು ವಾಸ್ತವವು, ನವ ಭಾರತದ ಅಭಿವೃದ್ಧಿಯ ಹಾದಿಯಲ್ಲಿ ಕಾರ್ಪೊರೇಟ್‌ಗಳು ಮತ್ತು ಬಂಡವಾಳಶಾಹಿಗಳು ಮಾತ್ರ ಲಾಭದ ಫಲಾನುಭವಿಗಳಾಗಿದ್ದು, ದೇಶಕ್ಕೆ ಅನ್ನ ನೀಡುವ ರೈತರು ಮಾತ್ರ ಸಾಲ, ಕಣ್ಣೀರು ಮತ್ತು ಸಾವಿನ ಸುಳಿಯಲ್ಲಿ ಅನಾಥರಾಗಿದ್ದಾರೆ

ಭಾರತದ ಆರ್ಥಿಕತೆಯು ಜಗತ್ತಿನಲ್ಲೇ ವೇಗವಾಗಿ ಬೆಳೆಯುತ್ತಿದೆ ಹಾಗೂ ದೇಶವು ವಿಶ್ವಗುರುವಾಗುವ ಹಾದಿಯಲ್ಲಿದೆ ಎಂದು ಕೇಂದ್ರ ಸರ್ಕಾರ ನಿರಂತರವಾಗಿ ಬೆನ್ನು ತಟ್ಟಿಕೊಳ್ಳುತ್ತಿರುವ ಬೆನ್ನಲ್ಲೇ, ದೇಶದ ಅನ್ನದಾತನ ಬದುಕು ಸಾಲದ ಸುಳಿಗೆ ಸಿಲುಕಿ ಛಿದ್ರವಾಗುತ್ತಿರುವ ಕಟು ವಾಸ್ತವವೊಂದು ಅನಾವರಣಗೊಂಡಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ಶ್ರೀಮಂತ ಕಾರ್ಪೊರೇಟ್ ಕುಳಗಳಿಗೆ, ಉದ್ಯಮಿಗಳಿಗೆ ಹಾಗೂ ಆಪ್ತ ಬಂಡವಾಳಶಾಹಿಗಳಿಗೆ ರತ್ನಗಂಬಳಿ ಹಾಸುತ್ತಿದ್ದರೆ, ದೇಶದ ಬೆನ್ನೆಲುಬಾದ ರೈತ ಕೃಷಿ ಮಾಡಲಾಗದೆ, ಮಾಡಿದ ಸಾಲ ತೀರಿಸಲಾಗದೆ ನೇಣುಹಗ್ಗಕ್ಕೆ ಶರಣಾಗುತ್ತಿದ್ದಾನೆ. ಇತ್ತೀಚಿನ ಸಂಸತ್ತಿನ ದಾಖಲೆಗಳು, ಆರ್‌ಬಿಐ ಅಂಕಿ-ಅಂಶಗಳು ಹಾಗೂ ಎನ್‌ಸಿಆರ್‌ಬಿ ವರದಿಗಳನ್ನು ಒಟ್ಟಾರೆಯಾಗಿ ಕುಲಂಕುಷವಾಗಿ ಗಮನಿಸಿದರೆ, ಇದು ಸರ್ಕಾರದ ಆರ್ಥಿಕ ನೀತಿಯಲ್ಲಿನ ಅಮಾನವೀಯ ದ್ವಂದ್ವ ಮಾನದಂಡವನ್ನು ಜಗಜ್ಜಾಹೀರು ಮಾಡುತ್ತದೆ.

ಸಂಸತ್ತು, ಆರ್‌ಬಿಐ ಮತ್ತು ಆರ್‌ಟಿಐ ಮೂಲಕ ಲಭ್ಯವಾಗಿರುವ ಅಧಿಕೃತ ಅಂಕಿ-ಅಂಶಗಳು ಮೋದಿ ಸರ್ಕಾರದ ಕಾರ್ಪೊರೇಟ್ ಪ್ರೇಮದ ಅಗಾಧತೆಯನ್ನು ಸ್ಪಷ್ಟವಾಗಿ ಬಿಚ್ಚಿಡುತ್ತವೆ. 2014-15ರಿಂದ 2022-23ರವರೆಗೆ ದೇಶದ ವಿವಿಧ ಬ್ಯಾಂಕುಗಳು ಒಟ್ಟು 14.56 ಲಕ್ಷ ಕೋಟಿ ರೂಪಾಯಿಗಳಷ್ಟು ಭಾರಿ ಪ್ರಮಾಣದ ಅನುತ್ಪಾದಕ ಆಸ್ತಿಯನ್ನು (ಎನ್‌ಪಿಎ) ರೈಟ್-ಆಫ್ (ಮನ್ನಾ ಅಥವಾ ಬ್ಯಾಂಕಿನ ಲೆಕ್ಕದ ಪುಸ್ತಕದಿಂದ ಅಳಿಸುವಿಕೆ) ಮಾಡಿವೆ. ಇದರಲ್ಲಿ ಬೃಹತ್ ಕೈಗಾರಿಕೆಗಳು ಮತ್ತು ಸೇವಾ ವಲಯದ ಪಾಲು ಬರೋಬ್ಬರಿ 7.40 ಲಕ್ಷ ಕೋಟಿ ರೂಪಾಯಿಗಳಷ್ಟಿದೆ. ಇನ್ನು 2014ರಿಂದ 2025ರ ಸೆಪ್ಟೆಂಬರ್ 30ರವರೆಗಿನ ರಾಜ್ಯಸಭೆಯಲ್ಲಿ ಸರ್ಕಾರವೇ ನೀಡಿರುವ ಉತ್ತರದ ಪ್ರಕಾರ, ಕೇವಲ ಕಾರ್ಪೊರೇಟ್ ವಲಯದ ಬರೋಬ್ಬರಿ 9.87 ಲಕ್ಷ ಕೋಟಿ ರೂಪಾಯಿಗಳಷ್ಟು ಭಾರಿ ಮೊತ್ತದ ಸಾಲವನ್ನು ಬ್ಯಾಂಕುಗಳು ರೈಟ್-ಆಫ್ ಮಾಡಿವೆ.

ಒಂದು ಕಡೆ ಕಾರ್ಪೊರೇಟ್ ಕಂಪನಿಗಳಿಗೆ ಲಕ್ಷಾಂತರ ಕೋಟಿ ರೂಪಾಯಿಗಳ ರಿಯಾಯಿತಿಯ ಮಳೆ ಸುರಿಸುತ್ತಿರುವ ಕೇಂದ್ರ ಸರ್ಕಾರ, ಬಿಕ್ಕಟ್ಟಿನಲ್ಲಿರುವ ಕೃಷಿ ವಲಯದ ಬಗ್ಗೆ ತೋರಿರುವ ನಿರ್ಲಕ್ಷ್ಯ ನಿಜಕ್ಕೂ ಆಘಾತಕಾರಿಯಾಗಿದೆ. ಕಾರ್ಪೊರೇಟ್ ವಲಯಕ್ಕೆ 9.87 ಲಕ್ಷ ಕೋಟಿ ರೂ. ವಿನಾಯಿತಿ ನೀಡಿರುವ ಇದೇ ಅವಧಿಯಲ್ಲಿ, ಕೃಷಿ ವಲಯಕ್ಕೆ ಹಾಗೂ



ರೈತರಿಗೆ ಸಿಕ್ಕಿರುವ ಸಾಲದ ಪರಿಹಾರ ಕೇವಲ 1.67 ಲಕ್ಷ ಕೋಟಿ ರೂಪಾಯಿ ಮಾತ್ರ. ಕಳೆದ ಐದು ವರ್ಷಗಳ ಅಂಕಿ-ಅಂಶಗಳನ್ನು ಪ್ರತ್ಯೇಕವಾಗಿ ಗಮನಿಸಿದರೂ, ಬ್ಯಾಂಕುಗಳು ಕಾರ್ಪೊರೇಟ್ ಕಂಪನಿಗಳ 3.20 ಲಕ್ಷ ಕೋಟಿ ರೂ. ಸಾಲವನ್ನು ಮನ್ನಾ ಮಾಡಿದ್ದರೆ, ಕೃಷಿ ಮತ್ತು ಪೂರಕ ವಲಯಕ್ಕೆ ಸಿಕ್ಕಿದ್ದು ಕೇವಲ 1.18 ಲಕ್ಷ ಕೋಟಿ ರೂ. ಮಾತ್ರ. ಅಂದರೆ, ನೇರ ಲೆಕ್ಕಾಚಾರದಲ್ಲಿ ನೋಡಿದರೆ, ದೇಶದ ಅನ್ನದಾತ ರೈತರಿಗೆ ಹೋಲಿಸಿದರೆ ಕಾರ್ಪೊರೇಟ್ ಕುಳಗಳಿಗೆ ಬ್ಯಾಂಕುಗಳು ಬರೋಬ್ಬರಿ ಮೂರು ಪಟ್ಟು ಹೆಚ್ಚು ವಿನಾಯಿತಿ ನೀಡಿವೆ.

ಬ್ಯಾಂಕುಗಳ ವಸೂಲಾತಿ ಪ್ರಕ್ರಿಯೆ ಮತ್ತು ನಿಯಮಗಳಲ್ಲಿರುವ ತಾರತಮ್ಯವಂತೂ ದಿಗಿಲು ಹುಟ್ಟಿಸುವಂತಿದೆ. ಶ್ರೀಮಂತ ಕಾರ್ಪೊರೇಟ್ ಸಂಸ್ಥೆಗಳು, ಬೃಹತ್ ಉದ್ಯಮಿಗಳು ಸಾವಿರಾರು ಕೋಟಿ ಸಾಲ ಮಾಡಿ ಸುಸ್ತಿದಾರರಾದರೆ, ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಕೋಡ್ () ಅಡಿಯಲ್ಲಿ ಹೇರ್‌ಕಟ್ () ಎಂಬ ಹೆಸರಿನಲ್ಲಿ ಭಾರಿ ರಿಯಾಯಿತಿ ನೀಡಿ ಅವರ ಆಸ್ತಿಗಳನ್ನು ಮತ್ತು ಕಂಪನಿಗಳನ್ನು ದಿವಾಳಿಯಿಂದ ರಕ್ಷಿಸಲಾಗುತ್ತದೆ. ಬ್ಯಾಂಕುಗಳು ಈ ಬಂಡವಾಳಶಾಹಿಗಳ ನಿಯಮಗಳಿಗೆ ತಕ್ಕಂತೆ ಬಾಗಿ ಮಂಡಿಯೂರುತ್ತವೆ. ಆದರೆ, ಅದೇ ಬ್ಯಾಂಕುಗಳು ಐವತ್ತು ಸಾವಿರ, ಒಂದು ಲಕ್ಷ ಸಾಲ ಮಾಡಿದ ಸಣ್ಣ ಮತ್ತು ಅತಿ ಸಣ್ಣ ರೈತನ ಮನೆಗೆ ಮುಲಾಜಿಲ್ಲದೆ ನೋಟಿಸ್ ಅಂಟಿಸಿ, ಆತನ ಟ್ರ್ಯಾಕ್ಟರ್ ಜಪ್ತಿ ಮಾಡಿ, ಸಾರ್ವಜನಿಕವಾಗಿ ಅವಮಾನಿಸಿ ಆತನನ್ನು ಆತ್ಮಹತ್ಯೆಯ ಕಡೆಗೆ ನೂಕುತ್ತಿವೆ. ತಾಂತ್ರಿಕವಾಗಿ ರೈಟ್-ಆಫ್ ಎಂದರೆ ಕಾನೂನಾತ್ಮಕ ಸಾಲಮನ್ನಾ ಅಲ್ಲ, ಅದೊಂದು ಲೆಕ್ಕಪತ್ರದ ಕ್ರಮ ಎಂದು ಸರ್ಕಾರ ಸಮರ್ಥಿಸಿಕೊಳ್ಳುತ್ತವಾದರೂ, ವಾಸ್ತವದಲ್ಲಿ ಇದು ಕಾರ್ಪೊರೇಟ್ ಸುಸ್ತಿದಾರರ ಮೇಲಿನ ಹೊರೆ ಇಳಿಸುವ ಮತ್ತು ಅವರನ್ನು ಬಚಾವು ಮಾಡುವ ತಂತ್ರವೇ ಆಗಿದೆ.

ಈ ಸಾಲದ ಹೊರೆ, ಬ್ಯಾಂಕುಗಳ ಕಿರುಕುಳ ಮತ್ತು ಸಾರ್ವಜನಿಕ ಅವಮಾನ ತಾಳಲಾರದೆ ದೇಶಾದ್ಯಂತ ಅನ್ನದಾತರು ಸದ್ದಿಲ್ಲದೆ ತಮ್ಮ ಜೀವ ಕಳೆದುಕೊಳ್ಳುತ್ತಲೇ ಇದ್ದಾರೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ () ದತ್ತಾಂಶದ ಆಧಾರದ ಮೇಲಿನ ವಿಶ್ಲೇಷಣೆಗಳು ಎದೆಗುಂದಿಸುವಂತಿವೆ. ಮೋದಿ ಸರ್ಕಾರ ಅಧಿಕಾರದಲ್ಲಿದ್ದ 2014-2022ರ ಅವಧಿಯಲ್ಲಿ ಕೃಷಿ ವಲಯದಲ್ಲಿ ಬರೋಬ್ಬರಿ 1,00,474 ಆತ್ಮಹತ್ಯೆಗಳು ನಡೆದಿವೆ. ಅಂದರೆ, ಈ ಎಂಟು ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಪ್ರತಿದಿನ ಸರಾಸರಿ 30 ರೈತರು ಕೃಷಿ ಬಿಕ್ಕಟ್ಟು ಮತ್ತು ಸಾಲದ ಬಾಧೆಗೆ ನೊಂದು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಇದು ಕೇವಲ ಅಂಕಿ-ಅಂಶವಲ್ಲ, ಸರ್ಕಾರದ ಕೃಷಿ ವಿರೋಧಿ ನೀತಿಗಳಿಗೆ ಬಲಿಯಾದ ಅಮಾಯಕ ಜೀವಗಳ ಲೆಕ್ಕಾಚಾರ.

ಪರಿಸ್ಥಿತಿ ವರ್ಷದಿಂದ ವರ್ಷಕ್ಕೆ ಸುಧಾರಿಸುವ ಬದಲು ಮತ್ತಷ್ಟು ಬಿಗಡಾಯಿಸುತ್ತಿರುವುದು ಅಂಕಿ-ಅಂಶಗಳಿಂದ ಸಾಬೀತಾಗಿದೆ. 2022ರ ದತ್ತಾಂಶದ ಪ್ರಕಾರ ದೇಶದಲ್ಲಿ ಪ್ರತಿ ಗಂಟೆಗೆ ಒಬ್ಬ ರೈತ ಅಥವಾ ಕೃಷಿ ಕಾರ್ಮಿಕ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಆ ವರ್ಷ 11,290 ಕೃಷಿ ವಲಯದ ಆತ್ಮಹತ್ಯೆಗಳು ವರದಿಯಾಗಿದ್ದವು. ಇನ್ನು 2024ರ ಇತ್ತೀಚಿನ ಎನ್‌ಸಿಆರ್‌ಬಿ ದತ್ತಾಂಶವು ಕೃಷಿ ವಲಯದ ಬಿಕ್ಕಟ್ಟಿನ ಭೀಕರತೆಯನ್ನು ಬಿಚ್ಚಿಟ್ಟಿದ್ದು, ದೇಶಾದ್ಯಂತ 10,546 ಕೃಷಿ ವಲಯದ ಆತ್ಮಹತ್ಯೆಗಳು ಸಂಭವಿಸಿವೆ. ಕನ್ನಡಿಗರಿಗೆ ಅತ್ಯಂತ ಕಳವಳಕಾರಿ ಸಂಗತಿಯೆಂದರೆ, ದೇಶದಲ್ಲಿ ಅತಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡ ರಾಜ್ಯಗಳ ಪೈಕಿ ಮಹಾರಾಷ್ಟ್ರದ ನಂತರದ ಸ್ಥಾನದಲ್ಲಿ ನಮ್ಮ ಕರ್ನಾಟಕವು ಎರಡನೇ ಸ್ಥಾನದಲ್ಲಿದೆ. ರಾಜ್ಯದ ಕೃಷಿ ವಲಯ ತೀವ್ರ ಸಂಕಷ್ಟದಲ್ಲಿದೆ ಎಂಬುದಕ್ಕೆ ಇದು ಜ್ವಲಂತ ಸಾಕ್ಷಿ.

ಪಂಜಾಬ್‌ನಿಂದ ಹಿಡಿದು ಕರ್ನಾಟಕದವರೆಗೆ ನಡೆಯುತ್ತಿರುವ ರೈತರ ಸರಣಿ ಆತ್ಮಹತ್ಯೆಗಳಿಗೆ ಪ್ರಮುಖ ಕಾರಣ ಸಾಲದ ಸುಳಿ ಮತ್ತು ಸರ್ಕಾರದ ನಿರ್ಲಕ್ಷ್ಯ. ದಿನೇ ದಿನೇ ಗಗನಕ್ಕೇರುತ್ತಿರುವ ಕೃಷಿ ಪರಿಕರಗಳ ಬೆಲೆ, ಹವಾಮಾನ ವೈಪರೀತ್ಯದಿಂದ ಉಂಟಾಗುವ ನಿರಂತರ ಬೆಳೆ ನಷ್ಟ, ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಸಿಗದಿರುವುದು ರೈತರನ್ನು ಆರ್ಥಿಕವಾಗಿ ಹೈರಾಣಾಗಿಸಿದೆ. ಸಾಂಸ್ಥಿಕ ಬ್ಯಾಂಕುಗಳಿಂದ ಸುಲಭವಾಗಿ ಸಾಲ ಸಿಗದೆ, ಖಾಸಗಿ ಲೇವಾದೇವಿಗಾರರ ಮೊರೆ ಹೋಗಿ ಅಸಲು-ಬಡ್ಡಿ ತೀರಿಸಲಾಗದೆ ರೈತರು ನರಳುತ್ತಿದ್ದಾರೆ. ಬೆಳೆ ನಷ್ಟದ ಸಂದರ್ಭದಲ್ಲಿ ಸರ್ಕಾರ ನೀಡುವ ಪರಿಹಾರವೂ ಏನೇನೂ ಸಾಲದಾಗಿದ್ದು, ಸಾಲದ ಕೂಪದಲ್ಲಿ ಸಿಲುಕಿದ ಅನ್ನದಾತ ಅನಿವಾರ್ಯವಾಗಿ ಸಾವಿನ ಕದ ತಟ್ಟುತ್ತಿದ್ದಾನೆ.

ತಮ್ಮ ಸಂಪೂರ್ಣ ಸಾಲಮನ್ನಾ ಮಾಡುವಂತೆ, ಹಾಗೂ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನಾತ್ಮಕ ಖಾತರಿ ನೀಡುವಂತೆ ಆಗ್ರಹಿಸಿ ಲಕ್ಷಾಂತರ ರೈತರು ಚಳಿ, ಮಳೆ, ಬಿಸಿಲೆನ್ನದೆ ದೆಹಲಿಯ ಗಡಿಗಳಲ್ಲಿ ತಿಂಗಳುಗಟ್ಟಲೆ ಐತಿಹಾಸಿಕ ಪ್ರತಿಭಟನೆ ನಡೆಸಿದರು. ಆದರೆ, ಕೇಂದ್ರ ಸರ್ಕಾರ ಮಾತ್ರ ರೈತರ ಸಾಲಮನ್ನಾ ಮಾಡುವ ಯಾವುದೇ ಪ್ರಸ್ತಾವನೆ ತನ್ನ ಮುಂದಿಲ್ಲ ಎಂದು ಸಂಸತ್ತಿನಲ್ಲಿ ಕಡ್ಡಿ ತುಂಡರಿಸಿದಂತೆ ನಿರ್ದಾಕ್ಷಿಣ್ಯವಾಗಿ ಹೇಳಿದೆ. ತಮ್ಮ ಕಾರ್ಪೊರೇಟ್ ಗೆಳೆಯರ ಪರವಾಗಿ ಬ್ಯಾಂಕುಗಳ ನಿಯಮಗಳನ್ನು ಸುಲಭವಾಗಿ ಸಡಿಲಿಸುವ, ರೈಟ್-ಆಫ್ ಮೂಲಕ ಅವರಿಗೆ ನಿರಾಳತೆ ಒದಗಿಸುವ ಸರ್ಕಾರ, ರೈತರ ಜೀವ ಉಳಿಸುವ, ಸಾಲಮನ್ನಾ ಮಾಡುವ ಬೇಡಿಕೆಗಳಿಗೆ ಮಾತ್ರ ಸಂಪೂರ್ಣವಾಗಿ ಕಿವುಡಾಗಿದೆ.

ಕಳೆದ ಒಂದು ದಶಕದ ಮೋದಿ ಸರ್ಕಾರದ ಆರ್ಥಿಕ ನೀತಿಯು ಬಂಡವಾಳಶಾಹಿಗಳಿಗೆ ಬೆಣ್ಣೆ, ರೈತರಿಗೆ ಸುಣ್ಣ ಎಂಬ ತಾರತಮ್ಯದ ಅಡಿಪಾಯದ ಮೇಲೆ ನಿಂತಿದೆ. ಉದ್ಯಮಿಗಳ ಲಕ್ಷಾಂತರ ಕೋಟಿ ರೂಪಾಯಿಗಳ ಎನ್‌ಪಿಎ ಸುಲಭವಾಗಿ ಲೆಕ್ಕದ ಪುಸ್ತಕದಿಂದ ಅಳಿಸಿಹೋಗುತ್ತಿರುವಾಗ, ಅದೇ ಲೆಕ್ಕದ ಪುಸ್ತಕದಲ್ಲಿರುವ ಕೆಲವು ಸಾವಿರಗಳ ಸಾಲದ ಬಾಕಿ ರೈತನ ಉಸಿರನ್ನೇ ಶಾಶ್ವತವಾಗಿ ಅಳಿಸುತ್ತಿದೆ. ಈ ಕಟು ವಾಸ್ತವವು, ನವ ಭಾರತದ ಅಭಿವೃದ್ಧಿಯ ಹಾದಿಯಲ್ಲಿ ಕಾರ್ಪೊರೇಟ್‌ಗಳು ಮತ್ತು ಬಂಡವಾಳಶಾಹಿಗಳು ಮಾತ್ರ ಲಾಭದ ಫಲಾನುಭವಿಗಳಾಗಿದ್ದು, ದೇಶಕ್ಕೆ ಅನ್ನ ನೀಡುವ ರೈತರು ಮಾತ್ರ ಸಾಲ, ಕಣ್ಣೀರು ಮತ್ತು ಸಾವಿನ ಸುಳಿಯಲ್ಲಿ ಅನಾಥರಾಗಿದ್ದಾರೆ.

ವಿಜಯಪುರ ಬೆಲೆ ಏರಿಕೆ: ಲಾಭದ ನಿರೀಕ್ಷೆಯಲ್ಲಿ ರೈತ, ನೀರಾವರಿ ಪ್ರದೇಶದಲ್ಲಿ ಈರುಳ್ಳಿ ನಾಟಿ

ವಿಜಯಪುರ ಜಿಲ್ಲಾದ್ಯಂತ ಕಾಲುವೆ ನೀರು ಹರಿದು ಜಮೀನುಗಳಲ್ಲಿ ಕೃಷಿ ಚಟುವಟಿಕೆ ಗರಿಗೆದರಿರುವ ನಡುವೆ, ಈರುಳ್ಳಿ ದರದಲ್ಲಿನ ಚೇತರಿಕೆ ಕಂಡುಬಂದಿರುವುದು ರೈತರ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸಿದೆ. ಈ ಬಾರಿ ಬೆಳೆ ಕೈಹಿಡಿದು ಶ್ರಮಕ್ಕೆ ತಕ್ಕ ಬೆಲೆ ಸಿಗುವುದೆಂಬ ವಿಶ್ವಾಸದೊಂದಿಗೆ ರೈತರು, ನೀರಾವರಿ ಭಾಗಗಳಲ್ಲಿ ವ್ಯಾಪಕವಾಗಿ ಈರುಳ್ಳಿ ನಾಟಿ ಮಾಡುತ್ತಿದ್ದು, ಉತ್ತಮ ಬೆಳೆ ಮತ್ತು ಸ್ಥಿರ ಬೆಲೆಯ ನಿರೀಕ್ಷೆಯಲ್ಲಿ ಮುಂದಿನ ಹಂಗಾಮಿನತ್ತ ದೃಷ್ಟಿ ನೆಟ್ಟಿದ್ದಾರೆ.

ಈರುಳ್ಳಿ ದರದಲ್ಲಿ ಚೇತರಿಕೆ ಕಂಡುಬರುತ್ತಿರುವ ಬೆನ್ನಲ್ಲೇ ವಿಜಯಪುರ ಜಿಲ್ಲೆಯ ನೀರಾವರಿ ಪ್ರದೇಶದ ರೈತರು ಈರುಳ್ಳಿ ನಾಟಿಗೆ ಒತ್ತು ನೀಡುತ್ತಿದ್ದಾರೆ. ಕಾಲುವೆಗಳಿಗೆ ನೀರು ಹರಿದು ಕೃಷಿ ಚಟುವಟಿಕೆಗಳು ಗರಿಗೆದರಿರುವುದರಿಂದ, ಹಲವು ಗ್ರಾಮಗಳ ಜಮೀನುಗಳಲ್ಲಿ ಈರುಳ್ಳಿ ನಾಟಿಗೆ ಸಿದ್ಧಗೊಳಿಸಲಾಗುತ್ತಿದೆ.

ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ನೀರಾವರಿ ಹಾಗೂ ಖುಷ್ಕಿ ಜಮೀನುಗಳಲ್ಲೂ ಈರುಳ್ಳಿ ಬೆಳೆಯುವುದು ಸಾಮಾನ್ಯ. ಆದರೆ ಈ ಬಾರಿ ಮುಂಗಾರು ಮಳೆ ಕೈಕೊಟ್ಟ ಪರಿಣಾಮ ಈರುಳ್ಳಿ ಬಿತ್ತನೆ ಕ್ಷೇತ್ರ ಗಣನೀಯವಾಗಿ ಕುಸಿದಿದೆ. ಮಳೆಯ ನಿರೀಕ್ಷೆಯಲ್ಲಿ ಬಿತ್ತಿದ್ದ ಬೆಳೆ ಹಲವು ಕಡೆ ಮೊಳಕೆಯೊಡೆಯದೆ ಹಾಳಾಗಿದ್ದು, ಮೊಳಕೆಯೊಡೆದಿರುವ ಪ್ರದೇಶಗಳಲ್ಲಿಯೂ ಇಳುವರಿ ಕುಂಠಿತವಾಗಬಹುದೆಂಬ ಆತಂಕ ರೈತರಲ್ಲಿದೆ.

ಇದರ ಪರಿಣಾಮ ಮಾರುಕಟ್ಟೆಯಲ್ಲಿ ಈರುಳ್ಳಿಯ ಬೆಲೆ ಏರುಗತಿಯಲ್ಲಿದ್ದು, ಸದ್ಯ ಗಾತ್ರ ಹಾಗೂ ಗುಣಮಟ್ಟ ಆಧರಿಸಿ ಪ್ರತಿ ಕ್ವಿಂಟಲ್‌ಗೆ ₹3,500ರಿಂದ ₹5,000ರವರೆಗೆ ದರವಿದೆ. ಕನಿಷ್ಠ ₹2,000 ದರವಿದ್ದರೂ ಖರ್ಚು ಸರಿದೂಗಿಸಿಕೊಂಡು ಲಾಭ ಗಳಿಸಬಹುದು ಎಂಬ ಲೆಕ್ಕಾಚಾರ ರೈತರಲ್ಲಿದೆ. ಹೀಗಾಗಿ ನೀರಾವರಿ ಸೌಲಭ್ಯವಿರುವ ರೈತರು ಸದ್ಯ ಈರುಳ್ಳಿ ಬೆಳೆಯತ್ತ ಮುಖ ಮಾಡಿದ್ದಾರೆ.

ಕಾಲುವೆ ವ್ಯಾಪ್ತಿಯಲ್ಲಿ ಚಟುವಟಿಕೆ ಚುರುಕು

ಆಲಮಟ್ಟಿ ಜಲಾಶಯದ ಕೃಷ್ಣಾ ಕಾಲುವೆ ಜಾಲದ ವ್ಯಾಪ್ತಿಯಲ್ಲಿ ಕೃಷಿ ಚಟುವಟಿಕೆಗಳು ವೇಗ ಪಡೆದುಕೊಂಡಿದ್ದು, ಈರುಳ್ಳಿ ನಾಟಿ ಪ್ರಮುಖ ಬೆಳೆಯಾಗಿ ಹೊರಹೊಮ್ಮುತ್ತಿದೆ. ಬಸವನಬಾಗೇವಾಡಿ, ಕೊಲ್ಹಾರ, ನಿಡಗುಂದಿ ಹಾಗೂ ಮುದ್ದೇಬಿಹಾಳ ತಾಲೂಕುಗಳ ಹಲವು ಭಾಗಗಳಲ್ಲಿ ಹಿಂಗಾರು ಹಂಗಾಮಿನಲ್ಲಿ ಈರುಳ್ಳಿ ಬೆಳೆಯುವ ರೈತರ ಸಂಖ್ಯೆ ಅಧಿಕವಾಗಿದೆ.

ತೆಲಗಿ, ಕೂಡಗಿ, ಗೊಳಸಂಗಿ, ಹೆಬ್ಬಾಳ, ಮುಕರ್ತಿಹಾಳ, ಹುಲ್ಲೂರು, ಕಾಳಗಿ, ಉಣ್ಣಿಭಾವಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಈರುಳ್ಳಿ ಬೆಳೆಯುವುದನ್ನೇ ಕೆಲ ರೈತರು ನಿರಂತರ ಕೃಷಿ ಚಟುವಟಿಕೆಯನ್ನಾಗಿ ಮಾಡಿಕೊಂಡಿದ್ದಾರೆ. ಈರುಳ್ಳಿ ಬೀಜ ಆಯ್ಕೆ, ಸಸಿ ಮಡಿ ತಯಾರಿಕೆ, ನಾಟಿ, ನೀರು ಹಾಗೂ ಗೊಬ್ಬರ ನಿರ್ವಹಣೆಯಲ್ಲಿ ಇಲ್ಲಿನ ರೈತರಿಗೆ ಉತ್ತಮ ಅನುಭವವೂ ಇದೆ.



ಬೇಡಿಕೆ

ಮಳೆ ಕೊರತೆಯಿಂದ ಈರುಳ್ಳಿ ಸಸಿ ಮಡಿ ತಯಾರಿಕೆಯೂ ಈ ಬಾರಿ ನಿರೀಕ್ಷಿತ ಪ್ರಮಾಣದಲ್ಲಿ ನಡೆದಿಲ್ಲ. ಹೀಗಾಗಿ ಈಗಾಗಲೇ ಸಿದ್ಧವಾಗಿರುವ ಸಸಿಗಳಿಗೆ ಬೇಡಿಕೆ ಹೆಚ್ಚಾಗಿದೆ. ದೊಡ್ಡ ಸಸಿ ಮಡಿಗೆ ₹3,500ರಿಂದ ₹4,000ರವರೆಗೆ ಹಾಗೂ ಸಣ್ಣ ಮಡಿಗೆ ₹1,000ರಿಂದ ₹1,500ರವರೆಗೆ ದರವಿದೆ. ಒಟ್ಟಾರೆ ಒಂದು ಸಸಿ ಮಡಿಗೆ ಗಾತ್ರಕ್ಕೆ ಅನುಗುಣವಾಗಿ ₹1,000ರಿಂದ ₹4,000ರವರೆಗೆ ಬೆಲೆ ಇದೆ.

ಒಂದು ಎಕರೆ ಈರುಳ್ಳಿ ಬೆಳೆಯಲು ಸಸಿ, ಗೊಬ್ಬರ, ಕಳೆ ನಿಯಂತ್ರಣ, ಕೂಲಿ ಸೇರಿದಂತೆ ಸುಮಾರು ₹50 ಸಾವಿರದಿಂದ ₹60 ಸಾವಿರದವರೆಗೆ ವೆಚ್ಚವಾಗುತ್ತದೆ. ಉತ್ತಮ ನಿರ್ವಹಣೆಯಲ್ಲಿ ಎಕರೆಗೆ 80ರಿಂದ 100 ಕ್ವಿಂಟಲ್‌ವರೆಗೆ ಇಳುವರಿ ಪಡೆಯುವ ಸಾಧ್ಯತೆಯಿದ್ದು, ಸಾಮಾನ್ಯವಾಗಿ ಸುಮಾರು 60 ಕ್ವಿಂಟಲ್ ಇಳುವರಿ ದೊರೆಯುತ್ತದೆ.

ಉತ್ತಮ ದರದ ನಿರೀಕ್ಷಯಲ್ಲಿ ಐದು ಎಕರೆ ನಾಟಿ

''ಮಳೆ ಕೊರತೆಯಿಂದ ಜೂನ್‌ಜುಲೈನಲ್ಲಿ ಬಿತ್ತನೆ ಮಾಡಿದ್ದ ಈರುಳ್ಳಿ ಬೆಳೆ ಹಲವು ಕಡೆ ಹಾನಿಗೊಳಗಾಗಿದೆ. ಸಸಿ ಮಡಿ ತಯಾರಿಕೆಯ ಮೇಲೂ ಇದರ ಪರಿಣಾಮ ಬಿದ್ದಿದೆ. ಇದೀಗ ಮಾರುಕಟ್ಟೆಯಲ್ಲಿ ದರ ಹೆಚ್ಚಿರುವುದರಿಂದ ಉಳಿದಿರುವ ಸಸಿಗಳಿಗೆ ಬೇಡಿಕೆ ಹೆಚ್ಚಾಗಿದೆ. ಮುಂದಿನ ದಿನಗಳಲ್ಲೂ ದರ ಉತ್ತಮವಾಗಿರಲಿದೆ ಎಂಬ ನಿರೀಕ್ಷೆಯಲ್ಲಿ ರೈತರು ಹೊಸದಾಗಿ ನಾಟಿ ಮಾಡಲು ಮುಂದಾಗಿದ್ದಾರೆ'' ಎಂದು ರೈತ ವಿಠ್ಠಲ್ ಬಿರಾದಾರ್ ಹೇಳಿದರು..

''ಈ ಬಾರಿ ಮಳೆ ಕೈಕೊಟ್ಟಿದ್ದರಿಂದ ಆರಂಭಿಕ ಹಂತದಲ್ಲೇ ಈರುಳ್ಳಿ ಬೆಳೆ ಹಾನಿಯಾಗಿದೆ. ಇದೀಗ ನೀರಾವರಿ ಸೌಲಭ್ಯವಿರುವ ಜಮೀನಿನಲ್ಲಿ ಈರುಳ್ಳಿ ನಾಟಿ ಮಾಡಲಾಗುತ್ತಿದೆ. ದರ ಉತ್ತಮವಾಗಿರುವುದರಿಂದ ಮುಂದಿನ ಬೆಳೆ ಕೈಹಿಡಿಯುವ ನಿರೀಕ್ಷೆಯಿದೆ. ಇದೇ ಭರವಸೆಯಲ್ಲಿ ನಾನೂ ಐದು ಎಕರೆ ಪ್ರದೇಶದಲ್ಲಿ ಈರುಳ್ಳಿ ನಾಟಿ ಮಾಡುತ್ತಿದ್ದೇನೆ'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಮಿಕರಿಗೆ ಮತ್ತೆ ಕೆಲಸ

ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳು ಕುಂಠಿತಗೊಂಡಿದ್ದರಿಂದ ಕೆಲಕಾಲ ಕೆಲಸದ ಕೊರತೆ ಎದುರಿಸಿದ್ದ ಕೃಷಿ ಕಾರ್ಮಿಕರಿಗೆ ಈರುಳ್ಳಿ ನಾಟಿ ಹೊಸ ಅವಕಾಶ ಕಲ್ಪಿಸಿದೆ. ಕಾಲುವೆ ಹಾಗೂ ನೀರಾವರಿ ಪ್ರದೇಶಗಳಲ್ಲಿ ನಾಟಿ ಕಾರ್ಯ ಭರದಿಂದ ಸಾಗುತ್ತಿರುವುದರಿಂದ ಮಹಿಳಾ ಕೃಷಿ ಕಾರ್ಮಿಕರಿಗೆ ಬೇಡಿಕೆ ಹೆಚ್ಚಾಗಿದೆ.

ಸಸಿ ಮಡಿಯಿಂದ ಸಸಿಗಳನ್ನು ಕೀಳುವುದು, ಗಾತ್ರಕ್ಕೆ ಅನುಗುಣವಾಗಿ ವಿಂಗಡಿಸುವುದು, ಜಮೀನನ್ನು ನಾಟಿಗೆ ಸಿದ್ಧಪಡಿಸುವುದು ಹಾಗೂ ಸಾಲುಗಳಲ್ಲಿ ಸಸಿ ನಾಟಿ ಮಾಡುವ ಕೆಲಸಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ತೊಡಗಿಸಿಕೊಂಡಿದ್ದಾರೆ. ಹೀಗಾಗಿ ಈರುಳ್ಳಿ ದರ ಏರಿಕೆಯ ನಿರೀಕ್ಷೆ ರೈತರ ಜಮೀನಿನಲ್ಲಷ್ಟೇ ಅಲ್ಲ, ಕೃಷಿ ಕಾರ್ಮಿಕರ ಕೈಗೂ ಕೆಲಸ ನೀಡಿದೆ.

ವಿಜಯಪುರ ಜಿಲ್ಲಾದ್ಯಂತ ಕಾಲುವೆ ನೀರು ಹರಿದು ಜಮೀನುಗಳಲ್ಲಿ ಕೃಷಿ ಚಟುವಟಿಕೆ ಗರಿಗೆದರಿರುವ ನಡುವೆ, ಈರುಳ್ಳಿ ದರದಲ್ಲಿನ ಚೇತರಿಕೆ ಕಂಡುಬಂದಿರುವುದು ರೈತರ ಉತ್ಸಾಹವನ್ನು ಮತ್ತಷ್ಟು ಹೆಚ್ಚಿಸಿದೆ. ಈ ಬಾರಿ ಬೆಳೆ ಕೈಹಿಡಿದು ಶ್ರಮಕ್ಕೆ ತಕ್ಕ ಬೆಲೆ ಸಿಗುವುದೆಂಬ ವಿಶ್ವಾಸದೊಂದಿಗೆ ರೈತರು, ನೀರಾವರಿ ಭಾಗಗಳಲ್ಲಿ ವ್ಯಾಪಕವಾಗಿ ಈರುಳ್ಳಿ ನಾಟಿ ಮಾಡುತ್ತಿದ್ದು, ಉತ್ತಮ ಬೆಳೆ ಮತ್ತು ಸ್ಥಿರ ಬೆಲೆಯ ನಿರೀಕ್ಷೆಯಲ್ಲಿ ಮುಂದಿನ ಹಂಗಾಮಿನತ್ತ ದೃಷ್ಟಿ ನೆಟ್ಟಿದ್ದಾರೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR